# ಅಧ್ಯಯನ 17 Study XVII

# ನೂತನ ಸೃಷ್ಟಿಯ ಪುನರುತ್ಥಾನದ ಬಾಧ್ಯತೆಗಳು

## THE RESURRECTION INHERITANCE OF THE NEW CREATION

**ಆತ್ಮಿಕ ಸಂಗತಿಗಳನ್ನು ವೈಶಿಷ್ಟ್ಯಪೂರ್ಣವಾಗಿ ಮೆಚ್ಚಿಕೊಳ್ಳುವಂತೆ ನಂಬಿಕೆಯ ಕಣ್ಣು ಮತ್ತು ಕಿವಿಗಳನ್ನು ತರಬೇತುಗೊಳಿಸಬೇಕು – "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು " – ಪುನರುತ್ಥಾನದ ನಂತರ ಜೀವನಕ್ಕೆ – ಅನಾಸ್ಟೇಸಿಸ್; ಪುನಃಸ್ಥಾಯಿ ಅಥವಾ ಪುನರುತ್ಥಾನ – ಹಿಂದಿನ ಪಾಪಗಳಿಗಾಗಿ ನ್ಯಾಯ ತೀರ್ಪು ಅಥವಾ ನ್ಯಾಯವಿಚಾರಣೆ ಅಲ್ಲ; ಆದರೆ ಜೀವಕ್ಕಾಗಿ ಮತ್ತೊಂದು ನ್ಯಾಯ ವಿಚಾರಣೆ – ಪುನರುತ್ಥಾನವನ್ನು ಹೊಂದಿಕೊಳ್ಳಲು ಯೋಗ್ಯರಾಗಿ ಎಣಿಸಲ್ಪಡುವುದು – ಈ ಜೀವನದಲ್ಲಿನ ಪಾಪಗಳಿಗಾಗಿ ಶಿಕ್ಷೆ – ಕೆಲವರ ಪಾಪಗಳು ಮೊದಲೇ ನ್ಯಾಯತೀರ್ಪಿನ ಮುಂದೆ ಹೋಗುತ್ತವೆ – (ವಿಶೇಷವಾಗಿ) ಸತ್ತವರಿಗಾಗುವ (ಮುಖ್ಯವಾದ) ಪುನರುತ್ಥಾನವು ಅದೇ ಪ್ರಕಾರವಾಗಿರುವುದು – ನಾವು ಯಾವ ರೀತಿಯಲ್ಲಿರುತ್ತೇವೆಂದು ಇನ್ನೂ ಕಂಡುಬಂದಿರುವುದಿಲ್ಲ – ನಾವು ಆತನಂತೆಯೇ ಇರುತ್ತೇವೆ.**

ನಂಬಿಕೆಯ ಕಣ್ಣು ಮತ್ತು ಕಿವಿಗಳು ದೇವರ ವಾಕ್ಯದ ಮೂಲಕವಾಗಿ ಯಾವ ಪ್ರಮಾಣದಲ್ಲಿ ತರಬೇತು ಹೊಂದುತ್ತವೋ ಅದೇ ಪ್ರಮಾಣದಲ್ಲಿ ಮಾತ್ರವೇ ನೂತನ ಸೃಷ್ಟಿಗಳು ತಮ್ಮ ಭವಿಷ್ಯದ ಭಾದ್ಯತೆಗಳ ಭವ್ಯತೆ ಮತ್ತು ಮಹಿಮೆಯನ್ನು ಮೆಚ್ಚಿಕೊಳ್ಳಲು ಸಾಧ್ಯ. ತಮ್ಮನ್ನು ಪೂರ್ಣ ಪ್ರತಿಷ್ಠೆ ಮಾಡಿಕೊಳ್ಳದ ಹೊರತು, ಭವಿಷ್ಯದ ನಿಷ್ಟೆಯಾಗಿ ಪವಿತ್ರಾತ್ಮನು ದೊರಕದ ಹೊರತು ನೂತನ ಸೃಷ್ಟಿಗಳು ಪ್ರಾಕೃತಿಕ ಮನುಷ್ಯರಂತೆ ಇವನ್ನು ಮೆಚ್ಚಿಕೊಳ್ಳಲು ಆರಂಭಿಸುವುದೂ ಇಲ್ಲ. ಆಲ್ಲಿಯವರೆಗೆ, ಅವರು ನಂಬಿಕೆ ಮತ್ತು ನೀತಿನಿರ್ಣಯಗಳ ಮೂಲಕ ದೇವರ ಸಾಂಗತ್ಯಕ್ಕೆ ಬಂದ ನಂತರವೂ ಭವಿಷ್ಯದ ಬಗ್ಗೆ ಅವರ ಜ್ಞಾನವು ಲೇವಿಯರಲ್ಲಿ ಪ್ರತಿನಿಧಿಸಲ್ಪಟ್ಟಿದೆ. ಅವರುಗಳು ದೇವದರ್ಶನ ಗುಡಾರದ ಅಂಗೀಕಾರಾರ್ಹವಾದ ಆರಾಧಕರು ಮತ್ತು ಸೇವಕರುಗಳು ಆಗಿದ್ದರೂ, ಅದರೊಳಗೆ ಪ್ರವೇಶ ಮಾಡಿ ಬಂಗಾರದ ಬಲಿಪೀಠದಲ್ಲಿ ಧೂಪಗಳನ್ನು ಅರ್ಪಿಸುವ ಅಥವಾ ಅದರ ವೈಭವವನ್ನು ನೋಡುವ ಅನುಮತಿ ಅವರಿಗಿದ್ದಿಲ್ಲ. ಅದರ ಪವಿತ್ರತೆಯ ಭವ್ಯತೆ, ದೀಪಸ್ಥಂಭದ ಬೆಳಕು, ಹುಳಿಯಿಲ್ಲದ ರೊಟ್ಟಿ ಇಡುವ ಮೇಜು, ಬಂಗಾರದ ಬಲಿಪೀಠ ಮತ್ತು ಅದರಿಂದ ಏಳುತ್ತಿದ್ದ ಧೂಪದ ಸುವಾಸನೆ ಇವುಗಳ ಬಗ್ಗೆ ಅವರಿಗಿದ್ದ ಯಾವುದೇ ಜ್ಞಾನವು ಪ್ರತಿಷ್ಠೆಗೊಂಡ ಯಾಜಕರುಗಳು ಅವರಿಗೆ ತಿಳಿಸುತ್ತಿದ್ದ ಮಾಹಿತಿಯಿಂದ ಮಾತ್ರ. ಅವರುಗಳು ಮಾತ್ರವೇ ಅದರೊಳಗೆ ಪ್ರವೇಶಾಧಿಕಾರವನ್ನು ಹೊಂದಿದವರು.

ನೂತನ ಸೃಷ್ಟಿಯ ಈ ರಾಜವಂಶ ಯಾಜಕರುಗಳನ್ನು ಉದ್ಧೇಶಿಸಿ ಅಪೋಸ್ತಲನು ಅವರ ಪೂರ್ಣ ಕೃಪೆ, ಜ್ಞಾನ ಮತ್ತು ವಿಶ್ವಾಸ ಹಾಗೂ ಆತ್ಮೀಕ ದೃಷ್ಟಿಕೊನದ ಬಳಿಕವೂ ಅವರುಗಳು ಪ್ರಸ್ತುತ ಜೀವಿತದಲ್ಲಿ ಭವಿಷ್ಯತ್ ಸಂಗತಿಗಳ ಬಗ್ಗೆ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಅವರಿಗೆ ಸಾಧ್ಯವಿಲ್ಲ, ಆದಾಗ್ಯೂ ಅವುಗಳನ್ನು ನಂಬಿಕೆಯಿಂದ ಒಪ್ಪಿಕೊಳ್ಳಲೇಬೇಕು ಎಂದು ಹೇಳುತ್ತಾನೆ. ಆ ಮಾತುಗಳೆಂದರೆ " ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1ಯೋಹಾನ 3:2). ಕರ್ತನ ಜನರಿಗೆ ಇದುವೇ ತೃಪ್ತಿದಾಯಕವಾದುದು. ಯಾಕೆಂದರೆ, ಅವರು ಯಾವುದೇ ಅನೌಚಿತ್ಯವಿಲ್ಲದೆ ಅವರ ಮಹಿಮಾ ಶರೀರದ ಬಗ್ಗೆ, ಅದರ ರೂಪ, ಆಕಾರ, ಅಳತೆ ಮತ್ತು ಮೂಲವಸ್ತುಗಳು ಮುಂತಾದವುಗಳ ಬಗ್ಗೆ ತಿಳುಕೊಳ್ಳಲು ಕಾತರದಿಂದಿರುತ್ತಾರೆ, ಈ ನೂತನ ಪರಿಸ್ಥಿತಿಯು ಪ್ರಸ್ತುತ ಸ್ಥಿತಿಗಿಂತ ವಿಭಿನ್ನವಾಗಿರುತ್ತದೆ ಎಂಬುದನ್ನು ಅವರು ಚೆನ್ನಾಗಿ ಊಹಿಸಬಲ್ಲರು. ಈ ಬಗ್ಗೆ ಎಷ್ಟೇ ವಿವರಣೆ ನೀಡಿದರೂ ಇದು ಮನುಷ್ಯನ ಜ್ಞಾನಕ್ಕೆ ಮತ್ತು ಗ್ರಹಿಕೆಗಳಿಗೆ ಮೀರಿದ್ದು. ಆದರೆ ಈ ಇಡೀ ಸಂದೇಹವು (ಪ್ರಶ್ನೆಯು) ಈಗಾಗಲೇ ಇರುವ ಭರವಸೆಯಂತೆ ಸಭೆಯು ಕರ್ತನಂತೆ ಇರುತ್ತದೆ ಮತ್ತು ಆತನನ್ನು ನೋಡುತ್ತದೆ ಎಂಬದರಲ್ಲಿ ನಿಶ್ಚಯವಾಗುತ್ತದೆ– ಆತನು ಮಾನವನಾದ ಯೇಸುಕ್ರಿಸ್ತನಾಗಿ ತನ್ನನ್ನು ತಗ್ಗಿಸಿಕೊಂಡಾಗಿನಂತಲ್ಲ, ಅಥವಾ ತನ್ನ ಪುನರುತ್ಥಾನದ ನಂತರ ಮಾಂಸಧಾರಿಯಾಗಿ ಮತ್ತು ವಿವಿಧ ರೀತಿಯಲ್ಲಿ ಶಿಷ್ಯರಿಗೆ ಕಾಣಿಸಿಕೊಂಡಂತಲ್ಲ, "ಆತನಿರುವ ಪ್ರಕಾರವೇ" ಅವರು ಆತನ ಮಹಿಮೆಯನ್ನು ನೋಡುವವರು ಮತ್ತು ಅವರೂ ಆತನ ಮಹಿಮೆಯಲ್ಲಿ ಪಾಲುದಾರರಾಗಿ ಆತನಂತೆ ಆಗುವರು. ಇಷ್ಟು ಸಾಕು.

ಹೇಗಾದರೂ, ನಮ್ಮ ಕರ್ತನು ಆ ತೆರೆಯನ್ನು ಸ್ವಲ್ಪಮಟ್ಟಿಗೆ ಸರಿಸಿ, ಅಪೋಸ್ತಲನಾದ ಪೌಲನು ನೀಡಿರುವಂತೆ ಪ್ರಥಮ ಪುನರುತ್ಥಾನದ ವಿವರಣೆಯಲ್ಲಿ (1 ಕೊರಿ. 15:41–44) ನಮ್ಮ ಭವಿಷ್ಯದ ನೂತನ ಬಾಧ್ಯಸ್ತಿಕೆಯ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ನಾವು ಕಂಡುಕೊಳ್ಳಲು ಅನುಮತಿಸಿದ್ದಕ್ಕಾಗಿ ಸಂತೋಷಿಸುತ್ತೇವೆ. ಇದರಿಂದ ಸಭೆಯು, ಚಿಕ್ಕ ಹಿಂಡು, ರಾಜವಂಶ ಯಾಜಕತ್ವ ಇವುಗಳನ್ನು ಸಮರ್ಪಕಗೊಳಿಸುವ ಮತ್ತು ಕರ್ತನ ಆನಂದಕ್ಕೆ ಪ್ರವೇಶಿಸುವಂತೆ ಮಾಡುವ ಪ್ರಥಮ ಪುನರುತ್ಥಾನದ ಬಗ್ಗೆ ಇರುವ ವಚನಗಳು ಮಾತ್ರವಲ್ಲ, ಪ್ರಪಂಚದ ಭವಿಷ್ಯದ ನಿರೀಕ್ಷೆಯ ಬಗ್ಗೆ ಸಲಹೆಗಳನ್ನು ನೀಡುವ ವಚನಗಳ ಕಾರಣದಿಂದಲೂ ಈ ಪೂರ್ತಿ ಅಧ್ಯಾಯವು ನೂತನ ಸೃಷ್ಟಿಯ ಎಲ್ಲಾ ಸದಸ್ಯರುಗಳಿಗೆ ಗಾಢವಾಗಿ ಕುತೂಹಲಕಾರಿಯಾಗಿದೆ. ನಿಜವಾಗಿ ಅಪೋಸ್ತಲನು ಈ ಪತ್ರಿಕೆಯನ್ನು ಇತರರಿಗಾಗಿ ಅಲ್ಲದೆ ಕೇವಲ ಭಕ್ತಜನರಿಗಾಗಿ ಸಂಭೋದಿಸಿರುವುದಾದರೂ, ಪುನಃ ಪ್ರಥಮ ಪುನರುತ್ಥಾನವನ್ನು ವಿವರಿಸಿರುವುದು ಮಾನವರಿಗೆ ಯೋಗ್ಯವಾದ ಯಾವುದೇ ಆಶೀರ್ವಾದಕರ ಸಂಗತಿಗಳು ಮಾನವ ಪ್ರಪಂಚಕ್ಕೆ ಉಳಿದಿರುವುದಿಲ್ಲ ಎಂದು ಕೆಲವರು ಊಹಿಸುವಂತೆಯೂ ಮತ್ತೆ ಕೆಲವರು ಈ ಪ್ರಪಂಚದ

ಪುನರುತ್ಥಾನವು ನಂತರದಲ್ಲಿ ಕೇವಲ ಅದೇ ರೀತಿಯಾಗಿರುತ್ತದೆ ಎಂಬ ಅಭಿಪ್ರಾಯವನ್ನು ಮೂಡಿಸುವಂತೆಯೂ ಮಾಡುತ್ತದೆ. ಎರಡು ಪುನರುತ್ಥಾನದ ಬಗ್ಗೆ ನೀಡಿರುವ ಹೇಳಿಕೆಯು ವಿಶೇಷವಾಗಿ ಸಹಾಯಕವಾಗಿದೆ. ಆದುದರಿಂದ, ಪರಿಶುದ್ಧ ಗ್ರಂಥದಲ್ಲಿ ಸಮರ್ಥಿಸಿರುವಂತೆ ದೇವರು ಸಭೆಗಾಗಿ ಪರಲೋಕದಲ್ಲಿ ವಿಶೇಷ ಸ್ಥಳವನ್ನು ಕಾದಿರಿಸಿದ್ದಾನೆ, ಇದು ಆತ್ಮಸಂಬಂಧದ ಭಾಗವಾಗಿದೆ ಅಲ್ಲದೆ, ಆತನ ಬಳಿ ಲೌಕಿಕ ಭಾಗವೂ ಉಂಟು ಮತ್ತು ಸೂಕ್ತ ಸಮಯದಲ್ಲಿ ಇದನ್ನು ಪ್ರಕಟಿಸಲಾಗುವುದು ಮತ್ತು ಈ ಪ್ರಪಂಚಕ್ಕೆ ನೀಡಲಾಗುವುದು. ಆಶೀರ್ವಾದ ಹೊಂದಿದವರ ಮತ್ತು ಪವಿತ್ರರ ಹಾಗೂ ಸಭೆಯವರ ಪ್ರಥಮ ಪುನರುತ್ಥಾನದ ಈ ಸಂಬಂಧದ ಸಲುವಾಗಿ (ಪ್ರಕಟನೆ 20:06) ಮತ್ತು ಸಂಭವನೀಯವಾಗಿ ದೇವರನ್ನು ಅಂಗೀಕರಿಸುವ ಉಳಿದ ಎಲ್ಲಾ ಮನುಷ್ಯರ ನಂತರದ ಪುನರುತ್ಥಾನ ಈ ಎರಡು ಪುನರುತ್ಥಾನಗಳ ಬಗ್ಗೆ ನಾವು ಅಪೋಸ್ತಲನ ಈ ಮಾತುಗಳನ್ನು ಪರಿಗಣಿಸುವುದು ಯುಕ್ತವಾಗಿದೆ.

### "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು " – (1 ಕೊರಿಂಥ 15:22)

### "As All Adam Die, Even so All in Christ Shall be Made Alive"- (1Cori. 15:22)

ಈ ಪ್ರಕಟನೆಯು ಇದರ ಹಿಂದಿರುವ ಅಪೋಸ್ತಲನ ವಾದಗಳ ಮುಕ್ತಾಯವಾಗಿ ಕಂಡು ಬರುತ್ತದೆ. ಆತನು ಸತ್ತವರ ಪುನರುತ್ಥಾನವನ್ನು ನಿರಾಕರಿಸಲು ಒಲವು ತೋರುವ ಕೆಲವರ ಸಂಗಡ ವಾದಿಸಿ ತನ್ನನ್ನು ದೃಢೀಕರಿಸಿಕೊಳ್ಳುತ್ತಾನೆ. ಅವರ ವಾದವು ವಿಚಾರಹೀನವಾಗಿದೆ, ಯಾಕೆಂದರೆ ಸತ್ತವರು ಜೀವದಿಂದ ಎದ್ದುಬರುವುದಿಲ್ಲವಾದರೆ, ಕ್ರಿಸ್ತನು ಸಹಾ ಎದ್ದುಬರಲಿಲ್ಲ, ಕ್ರಿಸ್ತನು ಎದ್ದುಬರಲಿಲ್ಲವಾದರೆ ನಮಗೆ ಯಾವ ರಕ್ಷಕನೂ ಇಲ್ಲ, ಮಧ್ಯಸ್ಥಗಾರನೂ ಇಲ್ಲ, ಸಹಾಯಕನೂ ಇಲ್ಲ. ಹೀಗಾಗಿ ಸಭೆ ಮತ್ತು ಪ್ರಪಂಚದ ಪರಿಸ್ಥಿತಿ ನಿಷ್ಪ್ರಯೋಜಕವಾಗಿದೆ. ಪಾಪದ ಸಂಬಳ ಮರಣವಾಗಿದ್ದು, ವೇದೋಕ್ತಿಗೆ ಅನುಸಾರವಾಗಿ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸಾಯುವುದು ಅಗತ್ಯವಾಗಿತ್ತು; ಆದರೆ, ಆತನು ಸತ್ತವರೊಳಗಿಂದ ಎದ್ದು ಬರಲಿಲ್ಲವಾದರೆ, ಆತನು ತನ್ನ ವಿಮೋಚನಾಕಾರ್ಯವನ್ನು ಎಂದೂ ಕೈಗೆತ್ತಿಕೊಳ್ಳಲಿಲ್ಲ ವೆಂದಾಯಿತು. ಹೀಗಾಗಿ ನಮ್ಮ ಪರಿಸ್ಥಿತಿ ಅಪ್ರಯೋಜಕವಾಗಿದೆ. ಯಾಕೆಂದರೆ, ಮಾನವ ಜಾತಿಯು ಆದಾಮನ ಅಪರಾಧದಿಂದುಂಟಾದ ಶಾಪದಿಂದ ಬಿಡುಗಡೆಗೊಂಡರೂ, ಮರಣ ದಂಡನೆಯಿಂದ ಮುಕ್ತವಾದರೂ, ಅದು ಇನ್ನೂ ಸಹಾ ನಿಷ್ಪ್ರಯೋಜಕ ಸ್ಥಿತಿಯಲ್ಲಿಯೇ ಇದ್ದು ಅದಕ್ಕೆ ಸಮಸ್ತವನ್ನೂ ಸರಿ ಪಡಿಸುವಿಕೆಯ ಅಗತ್ಯವಿದೆ. ಇದನ್ನು ಪಡೆಯಬೇಕಾದರೆ, ಓರ್ವ ಮಹಾ ವೈದ್ಯನ ಅಂದರೆ ಮಹಾ ವಿಮೋಚಕನ ಅಗತ್ಯವಿದೆ.

"ಕ್ರಿಸ್ತನು ಎದ್ದುಬಂದಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ. ನೀವು ಇನ್ನೂ ಪಾಪಗಳಲ್ಲಿಯೇ ಇದ್ದೀರಿ. ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆಹೋದವರು ನಾಶವಾದರು" (1ಕೊರಿ.15:17) ಎಂದು ಹೇಳಿ ಅಪೋಸ್ತಲನು ಕ್ರಿಸ್ತನ ಪುನರುತ್ಥಾನ ಹಾಗೂ ಆತನ ಮರಣದ ಬಗ್ಗೆ ಪ್ರಬಲವಾಗಿ ಕಲ್ಪಿಸಿಕೊಳ್ಳಬಲ್ಲ ಪ್ರಭಾವವನ್ನುಂಟು ಮಾಡುವವನಾಗಿದ್ದಾನೆ ಮತ್ತು ಹೀಗೆ ಹೇಳುವುದರ ಮೂಲಕ ಆತನು ಈ ಸಂಗತಿಗಳು ಎಲ್ಲಾ ವಾಗ್ವಾದಗಳನ್ನು ದಾಟಿ ರುಜುವಾತಾಗಿದೆ ಎಂಬಂತೆ ಮುಂದುವರೆಯುತ್ತಾ "ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮ ಫಲವಾದನು" (1ಕೊರಿ. 15:20) ಎನ್ನುತ್ತಾನೆ.

ಈ ರೀತಿಯಲ್ಲಿ ಆತನು ತನ್ನ ಪ್ರಸ್ತಾಪವನ್ನು ನಿರೂಪಿಸಿ, ಓದುಗರಲ್ಲಿ ಪುನರುತ್ಥಾನವು ಸಾಧ್ಯವಾದುದು ಮಾತ್ರವಲ್ಲ ಅಗತ್ಯವಾದುದು ಸಹಾ ಆಗಿದೆ ಎಂಬ ಸಾಮಾನ್ಯ ನಂಬಿಕೆಯನ್ನು ಹುಟ್ಟುಹಾಕುತ್ತಾನೆ. ಇದರ ಸಾಕ್ಷಿಯಾಗಿ ನಮ್ಮ ಕರ್ತನು ಕೇವಲ ಸತ್ತವನಂತೆ ನಟಿಸಲಿಲ್ಲ, ನಿಜವಾಗಿಯೂ ಆತನು"ನಮ್ಮ ಪಾಪಗಳಿಗಾಗಿ ಸತ್ತನು" ಮತ್ತು ಖಚಿತವಾಗಿ ಸತ್ತವರೊಳಗಿಂದ ಎದ್ದುಬಂದನು ಎಂಬುದು ಈ ರುಜುವಾತಿನಲ್ಲಿ ಅಡಗಿದೆ ಎಂಬುದಾಗಿ ಹೇಳುತ್ತಾನೆ. ನಂಬಿಕೆಯ ಆಧಾರದ ಮೇಲೆ ನಾವು ನಮ್ಮ ಜನಾಂಗವು ಆದಾಮನಲ್ಲಿ ಮರಣ ಹೊಂದಿತು ಎಂದು ಆಲೋಚಿಸುವ ಭಾಗ್ಯ ಹೊಂದಿದ್ದೇವೆ – ಇದು ನಿರ್ಮೂಲವಲ್ಲ, ನಿಜವಾಗಿಯೂ ಸತ್ತದ್ದಲ್ಲ ಆದರೆ ನಿದ್ರೆಮಾಡುವುದು. ನಾವು ದೇವರ ವಾಗ್ದಾನಗಳಿಗನುಸಾರವಾಗಿ ಅವರು ಒಂದು ಹೊತ್ತಾರೆ ಅಂದರೆ ಪುನರುತ್ಥಾನದ ಮುಂಜಾವಿನಲ್ಲಿ ಅವರುಗಳು ನಿದ್ರೆಯಿಂದ ಎಚ್ಚತ್ತುಕೊಳ್ಳುತ್ತಾರೆ ಮತ್ತು ಪ್ರಸ್ತುತ ಸಮಯದಲ್ಲಿ ರುವವರಿಗಿಂತ ಹೆಚ್ಚು ಅನುಕೂಲಕರ ಸ್ಥಿತಿಗೆ ಬರುತ್ತಾರೆಂದು ನಿರೀಕ್ಷಿಸುವ ಭಾಗ್ಯ ಹೊಂದಿದ್ದೇವೆ. ಈ ಪರಿಸ್ಥಿತಿಯಲ್ಲಿ ಪಾಪವಾಗಲೀ, ಮರಣವಾಗಲೀ ಅವರ ಮೇಲೆ ಅಧಿಕಾರ ನಡಿಸಲಾಗದು. ಆ ಸ್ಥಿತಿಯಲ್ಲಿ ಸೈತಾನನಿಗೂ ಮರಣದ ಮೇಲೆ ಅಧಿಕಾರವಿರುವುದಿಲ್ಲ ಮತ್ತು ಆತನು ಬಂಧಿಸಲ್ಪಟ್ಟಿರುತ್ತಾನೆ. ವಿಮೋಚಕನಿಗೆ ಆಗ ಪೂರ್ಣ ಅಧಿಕಾರವಿರುತ್ತದೆ ಮತ್ತು ಆತನು ಈ ಅಧಿಕಾರವನ್ನು ಮರಣದ ಮಹಾ ಸೆರೆಮನೆ ಯಲ್ಲಿರುವವರನ್ನು ಬಿಡುಗಡೆಗೊಳಿಸಲು ಉಪಯೋಗಿಸುತ್ತಾನೆ. ಈ ಮೇಲೆತ್ತುವಿಕೆಯು ಆ ಅನುಕೂಲಕರ ಪರಿಸ್ಥಿತಿಯಲ್ಲಿ ಆತನ ಮಾತುಗಳನ್ನು ಕೇಳಿ ಅವುಗಳಿಗೆ ವಿಧೇಯರಾಗಿ ಪರಿಶುದ್ಧ ಮಾರ್ಗದಲ್ಲಿ ನಡೆಯುವವರಿಗೆ ಮಾತ್ರವೇ ಲಭಿಸುತ್ತದೆ. ಅವರು ಅದರಲ್ಲಿ ಮರಣದ ಕಣಿವೆಯಿಂದ ಮೇಲಕ್ಕೆ, ಮೇಲಕ್ಕೆ ಮತ್ತೂ ಮೇಲಕ್ಕೆ ಮೂಲದಲ್ಲಿ ಸೃಷ್ಟಿಕರ್ತನು ಅವರಿಗೆ ದಯಪಾಲಿಸಿದ್ದ ಪರಿಪೂರ್ಣವಾದ ಶಾಂತಿಯ ಜೀವಿತಕ್ಕೆ ಮರಳುತ್ತಾರೆ. ಇದನ್ನು ಅವರು ತಂದೆಯಾದ ಆದಾಮನ ಅವಿಧೇಯತೆಯ ಕಾರಣ ಕಳಕೊಂಡಿದ್ದು ಎರಡನೆಯ ಆದಾಮನ ಅರ್ಹತೆಯಲ್ಲಿ ವಿಶ್ವಾಸವಿಟ್ಟು ಆತನಿಗೆ ವಿಧೇಯರಾಗುವುದರ ಮೂಲಕ ಪುನಃ ಪಡಕೊಳ್ಳಬಹುದಾಗಿದೆ. ಇದು ಅಪೋಸ್ತಲನನ್ನು "ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವುದು" (1ಕೊರಿ. 15:21) ಎಂಬ ಎರಡನೆಯ ಪ್ರಸ್ತಾಪಕ್ಕೆ ನಡೆಸುತ್ತದೆ. ಮರಣವು ಮೊದಲನೆಯ ಮಾನವನಾದ ಆದಾಮನ ಮೂಲಕ ಪ್ರವೇಶಿಸಿತು ಮತ್ತು ಪುನರುತ್ಥಾನವು ಎರಡನೆಯ ಮಾನವನಾದ ಯೇಸು ಕ್ರಿಸ್ತನ ಪುನರುತ್ಥಾನದಿಂದುಂಟಾಯಿತು ಎಂಬ ಅಪೋಸ್ತಲನ ಮಾತುಗಳ ಅರ್ಥವನ್ನು ಯಾರೂ ತಪ್ಪಾಗಿ ಗ್ರಹಿಸಲಾಗದು. ಯಾಕೆಂದರೆ, ದೇಹಧಾರಿಯಾಗಿದ್ದಾಗ "ನಾನು

ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು" (ಯೋಹಾ. 6:51) ಮತ್ತು "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು"(ಯೋಹಾ.11:25) ಎಂಬುದಾಗಿ ಯೇಸುಕ್ರಿಸ್ತನು ತಾನೇ ಪ್ರಕಟಿಸಿದ್ದಾನೆ.

"ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು" (1ಕೊರಿಂಥ 15:22) ಎಂಬ ಸಾಮಾನ್ಯ ಭಾಷಾಂತರವು ಸ್ಪಷ್ಟವಾಗಿ ತಪ್ಪಾದ ಭಾಷಾಂತರವಾಗಿದೆ. ಈ ಮಾತುಗಳು ಅದೇ ರೂಪದಲ್ಲಿರುವುದಾದರೆ ಇತರ ದೇವರವಾಕ್ಯಗಳಲ್ಲಿರುವ ಕ್ರಿಸ್ತನ ಮೂಲಕ ಜೀವಿತರಾಗುವವರ ಮಿತಿಯುಳ್ಳ ಸಂಖ್ಯೆಯ ಬಗ್ಗೆ ತಿಕ್ಕಾಟವನ್ನು ಉಂಟುಮಾಡುತ್ತದೆ. ಈ ತಪ್ಪಾದ ಭಾಷಾಂತರವು ವಿಶ್ವ ರಕ್ಷಣೆಯ ಸಿದ್ಧಾಂತಕ್ಕೆ ಎಡೆಮಾಡಿ ಕೊಡುತ್ತದೆ. ಇದರಲ್ಲಿ ಕ್ರಿಸ್ತನ ಮೂಲಕ ದೇವರ ಕೃಪೆ ಮತ್ತು ಆಶೀರ್ವಾದಗಳು ಯಾರಿಗೆ ಜೀವ ಕೊಡಲಾಗುವುದೋ ಅವರ ಗುಣಲಕ್ಷಣಗಳ ಬಗ್ಗೆ ಇರುವ ವಾಕ್ಯಗಳಿಗೆ ಯಾವ ಅರ್ಥವೂ ಇದ್ದಂತೆ ಕಂಡುಬರುವುದಿಲ್ಲ. ಇತರ ದೇವರವಾಕ್ಯಗಳು ಹೇಗೂ "ಯಾರು ಪರಲೋಕದಲ್ಲಿರುವ ದೇವರ ವಾಕ್ಯಗಳಿಗನುಸಾರವಾಗಿ ನಡೆದುಕೊಳ್ಳುತ್ತಾರೋ ಅವರ ಹೊರತಾಗಿ ಎಲ್ಲರೂ ನಿತ್ಯಜೀವವನ್ನು ಹೊಂದಲಾರರು" ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಬಗ್ಗೆ ಸರಳವಾದ ಹೇಳಿಕೆಯೊಂದನ್ನು ಕರ್ತನ ಈ ಮಾತುಗಳಲ್ಲಿ ನೋಡಬಹುದು – "ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ" ( 1 ಯೋಹಾನ 5:12).

ಮೇಲಿನ 22ನೇ ವಚನವನ್ನು ಓದಿದ ಅನೇಕರು "ಜೀವಿತರಾಗುವರು' (be made alive) ಎಂಬ ಪದದ ಮೇಲೆ ಸರಿಯಾದ ರೀತಿಯಲ್ಲಿ ಒತ್ತುಕೊಡುವಲ್ಲಿ ವಿಫಲರಾಗಿದ್ದಾರೆ. ಅವರು ಈ ವಾಕ್ಯಭಾಗವು ಕೇವಲ ಸತ್ತವರೊಳಗಿಂದ ಎದ್ದುಬರುವುದನ್ನು ಸೂಚಿಸುತ್ತದೆ ಎಂದು ತಿಳಿಯುತ್ತಾರೆ; ಆದರೆ ಅದರ ಅರ್ಥವು ಇದಕ್ಕಿಂತ ಬಹಳಷ್ಟು ವ್ಯಾಪಕವಾದುದು ಮತ್ತು ಅಮೂಲ್ಯವಾದುದು. ಆದಾಮನ ಮೂಲಕವಾಗಿ ಬಂದ ಮರಣವು ಇಂದು ಈ ಲೋಕವು ಹೊಂದಿರುವ ಜೀವದ ಕೇವಲ ಒಂದು ತುಣಿಕಿನಷ್ಟು ನಷ್ಟವಲ್ಲ. ಆದರೆ ಅದು ಸಮಗ್ರವಾದ ಅರ್ಥದಲ್ಲಿ ಇಡೀ ಮಾನವ ಕುಟುಂಬದ ಪ್ರತಿನಿಧಿಯಾಗಿ ಆದಾಮನು ಹೊಂದಿದ್ದ ಜೀವದ ಸಂಪೂರ್ಣವಾದ ನಷ್ಟವೇ ಆಗಿದೆ."ಸಾಯುವುದು' ಅಂದರೆ "ಜೀವನಷ್ಟ'ವಾಗಿದ್ದು ಆದಾಮನ ಮರಣವು ಆತನ ದಂಡನೆಯಿಂದ ಪ್ರಾರಂಭಗೊಳ್ಳುತ್ತದೆ, ಅದರಂತೆ "ಜೀವಿತರಾಗುವುದು' ಎಂದರೆ ಕೇವಲ ಸಮರ್ಪಕವಾದ ಜೀವಿತಕ್ಕೆ ಮರಣದಿಂದ ಹಿಂತಿರುಗುವುದಲ್ಲ. ಅದನ್ನು ಆದಾಮನು ಈ ಮೊದಲು ಹೊಂದಿದ್ದ ಸಮರ್ಪಕವಾದ ಸಂಪೂರ್ಣ ಜೀವಿತವನ್ನು ಪುನಃವಶಪಡಿಸಿಕೊಳ್ಳುವುದು ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ "ಜೀವಿತರಾಗುವರು" ಅಂದರೆ ಮರಣದಿಂದ ಮೇಲೆಕ್ಕೆತ್ತುವುದು. ಈ ವಾಕ್ಯಭಾಗವನ್ನು ಪರಿಗಣಿಸುವಾಗ "ಜೀವ' ಎಂಬುದರ ಸಂಪೂರ್ಣವಾದ ಅರ್ಥವನ್ನು ಗ್ರಹಿಸುವುದು ಯುಕ್ತವಾಗಿದೆ, ಕರ್ತನ ದೃಷ್ಟಿಕೋನದಲ್ಲಿ ಆದಾಮನ ಸಮಗ್ರ ಸಂತತಿಯವರು ಮರಣಹೊಂದಿದ್ದಾರೆ; ಕೇವಲ ಸಮಾಧಿಯೊಳಗೆ ಹೋದವರು ಮಾತ್ರವಲ್ಲ, ಆ ಮಾರ್ಗದಲ್ಲಿರುವವರು ಸಹಾ. ಜೀವ ಮತ್ತು ಮರಣದ ಬಗ್ಗೆ ನಮ್ಮ ಕರ್ತನ ಅಂದಾಜು – "ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ"(ಮತ್ತಾಯ8:22) ಎಂಬ ಮಾತುಗಳಲ್ಲಿ ನಿದರ್ಶನಗೊಳ್ಳುತ್ತದೆ. ಇಲ್ಲಿ ಅವಿಶ್ವಾಸಿಗಳನ್ನು ಇನ್ನೂ ಸತ್ತವರು ಎಂದು ಉಲ್ಲೇಖಿಸಲಾಗಿದೆ. ಯಾಕೆಂದರೆ ಅವರು ಜೀವದಾಯಕನೊಂದಿಗೆ ಯಾವುದೇ ಅನ್ಯೋನತೆಯನ್ನು ಹೊಂದಿಲ್ಲ. ಅದೇ ಪ್ರಕಾರವಾಗಿ ವಿಶ್ವಾಸಿಗಳನ್ನು "ಜೀವಿಸುವವರು' ಎಂದು ಉಲ್ಲೇಖಿಸಲಾಗಿದೆ. ಅವರುಗಳು ಇನ್ನೂ ನಿರೀಕ್ಷೆಯ ಮೂಲಕ ಮಾತ್ರವೇ ಸಾವಿನಿಂದ ಪಾರಾಗಿದ್ದರೂ, ನಿಜವಾಗಿಯೂ ಅವರು ಪುನರುತ್ಥಾನಗೊಳ್ಳುವವರೆಗೆ ಸಾವಿನಿಂದ ಬಿಡುಗಡೆಯ ಅನುಭವವನ್ನು ಹೊಂದಿಕೊಳ್ಳಲಾರರು – " ಆತನು ನಮ್ಮನ್ನು ಎಂಥಹ ಭಯಂಕರ ಮರಣದಿಂದ ತಪ್ಪಿಸಿದನು, ಮುಂದೆಯೂ ತಪ್ಪಿಸುವನು" (2 ಕೊರಿಂಥ 1:10, ರೋಮಾ. 8:24).

## ಪುನರುತ್ಥಾನದ ನಂತರ ಜೀವನಕ್ಕೆ

## The After Resurrection to Life

"ಯಾವ ಪ್ರಕಾರ ಆದಾಮನಲ್ಲಿರುವವರೆಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನಲ್ಲಿರುವವರೆಲ್ಲರೂ ಜೀವಿತ ರಾಗುವರು" ("As all in Adam die, even so all in Christ shall be made alive") ಎಂಬುದಾಗಿ 1 ಕೊರಿಂಥ 15:22 ರಲ್ಲಿನ ವಚನವನ್ನು ಪುನಃ ಭಾಷಾಂತರಿಸಿದಾಗಲೇ ನಮಗೆ ಈ ವಾಕ್ಯಭಾಗವನ್ನು ಸರಿಯಾದ ರೀತಿಯಲ್ಲಿ ಅರ್ಥೈಸಲು ಸಾಧ್ಯವಾಗುತ್ತದೆ. ಮಹತ್ವವಾದ ರೀತಿಯಲ್ಲಿ ಯಾರ್ಯಾರು ಆದಾಮನಲ್ಲಿ ಸಂಬಂಧಿಸಿರುವರೋ ಅವರು ಮಾತ್ರವೇ ಆದಾಮನ ಪಾಪದ ನಿಮಿತ್ತ ಸತ್ತರು. ಸೈತಾನನು ಆರಂಭದಿಂದ ಸುಳ್ಳುಗಳ ಮತ್ತು ಕೊಲೆಪಾತಕರ ತಂದೆಯಾದಾಗ್ಯೂ ಆದಾಮನಿಗೆ ಮರಣಶಿಕ್ಷೆ ವಿಧಿಸಲ್ಪಟ್ಟಾಗ ಸೈತಾನನು ಆದಾಮನಿಗೆ ಸಂಬಂಧ ಪಡದ ಕಾರಣ ಆತನಿಗೆ ಮರಣವಿಲ್ಲ. ಅದರಂತೆ ದೇವದೂತರುಗಳು ತಮ್ಮ ತಕ್ಕ ವಾಸಸ್ಥಾನವನ್ನು ಬಿಟ್ಟವರಾದರೂ ಅವರಿಗೂ ಆದಾಮನ ಮರಣದಲ್ಲಿ ಪಾಲಿಲ್ಲ. ಅವರ್ಯಾರೂ ಆದಾಮನಿಗೆ ಸಂಬಂಧ ಪಟ್ಟವರಲ್ಲ. ಆದಾಮನು ಮಾನವ ಜನಾಂಗದ ಜೀವದಾಯಕನು, ತಂದೆಯು (ಮೂಲಪುರುಷನು), ತತ್ವರೂಪದಲ್ಲಿ ಆತನೊಳಗಿದ್ದ ಜನಾಂಗವು ಮರಣ ಸ್ಥಿತಿಗೆ ಬಾಧ್ಯರಾದರು ಮತ್ತು ಅವರು ತ್ವರಿತಗತಿಯಲ್ಲಿ ಸಮಾಧಿಗೆ ಸೇರುವವರಾದರು ಎಂಬ ಅಂಶವನ್ನು ಇಲ್ಲಿ ಅಪೋಸ್ತಲನು ನಮಗೆ ತಿಳಿಸುವವನಾಗಿದ್ದಾನೆ. ಆದಾಮನಲ್ಲಿರುವವರೆಲ್ಲರೂ ಆತನ ಮರಣ ಶಿಕ್ಷೆಯಲ್ಲಿ ಹೇಗೆ ಪಾಲುಗಾರರಾದರೋ ಹಾಗೆಯೇ ಕ್ರಿಸ್ತನಲ್ಲಿರುವವರು ಆತನ ಮೂಲಕ ದೈವಿಕ ಕೃಪೆಗೆ ಪಾಲುಗಾರರಾಗುವರು.

ಆದಾಮನ ಸಂತಾನವು ನ್ಯಾಯಬದ್ಧವಾಗಿ ಯಾವುದೇ ಆಯ್ಕೆ ಅಥವಾ ಸ್ವಯಂ ಸಂಕಲ್ಪವಿಲ್ಲದೇ ಸ್ವಾಭಾವಿಕವಾಗಿ ಆತನೊಂದಿಗೆ ಇತ್ತು. ಕ್ರಿಸ್ತನಲ್ಲಿರುವವರು ಆತನ ಬಳಿಗೆ ಕೃಪೆಯಿಂದ ವೈಯುಕ್ತಿಕವಾಗಿ ಶರತ್ತುಗಳೊಡನೆ ಕೂಡಿಬಂದರು. ದೈವಿಕ ವ್ಯವಸ್ಥೆಯ ಅಡಿಯಲ್ಲಿ ಮರಣದ ದಂಡನೆಯಿಂದ ಆದಾಮನ ವಿಮೋಚನೆಯು ಅಂತಿಮವಾಗಿ ಆತನ ಎಲ್ಲಾ ಜನಾಂಗದ ಮೇಲೆ ಅವರನ್ನು ಮರಣದ ತೀರ್ಪಿನಿಂದ ಬಿಡುಗಡೆಗೊಳಿಸಿ ಅವರಿಗೆ ಬೆಳಕನ್ನು, ಕ್ರಿಸ್ತನ ಬಳಿಗೆ ಬರುವ ಜ್ಞಾನ ಮತ್ತು ವಿವೇಕವನ್ನು ಒದಗಿಸುವ ಮಟ್ಟಿಗೆ ಪರಿಣಾಮವನ್ನು ಉಂಟು ಮಾಡುವುದಾಗಿದೆ; ಆದರೆ ಈ ಭಾಗ್ಯವನ್ನು ಹೊಂದಿಕೊಂಡು ಕ್ರಿಸ್ತನ ಬಳಿಗೆ ಬರುವವರು ಮಾತ್ರವೇ ವಾಕ್ಯದ ಸಂಪೂರ್ಣವಾದ ಮತ್ತು ಯೋಗ್ಯವಾದ ಅರ್ಥದಲ್ಲಿ ಜೀವಿತರಾಗುವರು – ಮರಣದಿಂದ ಸಂಪೂರ್ಣವಾಗಿ ಎತ್ತಲ್ಪಡುವರು. ಆದಾಮನ ಪತ್ನಿಯು ಆತನಿಂದ ಉಂಟಾದವಳೂ ಮತ್ತು ಆತನನ್ನೇ ಪ್ರತಿನಿಧಿಸುವವಳೂ ಆಗಿದ್ದಳು ಮತ್ತು ಅವನ ಮಕ್ಕಳು ಸಹಾ ತತ್ವರೂಪದಲ್ಲಿ ಆತನಲ್ಲಿದ್ದರು. ಕ್ರಿಸ್ತನಲ್ಲಿಯೂ ಅದರಂತೆಯೇ ಇರುತ್ತದೆ. ಆತನ ವಧುವಾದ ಸಭೆಯು ಮೊದಲಿಗೆ ವೃದ್ಧಿಗೊಳ್ಳುತ್ತದೆ ಮತ್ತು ಆತನ ಜೀವವನ್ನು ಪಡಕೊಳ್ಳುತ್ತದೆ; ನಂತರದಲ್ಲಿ ಈ ಲೋಕವು ಮರಣವೆಂಬ ನಿದ್ರೆಯಿಂದ ಎಚ್ಚತ್ತುಕೊಂಡು "ಸಹಸ್ರವರ್ಷ ಕಾಲದಲ್ಲಿ ಸತ್ಯದ ಜ್ಞಾನಕ್ಕೆ ಬರುತ್ತದೆ ಮತ್ತು ಪ್ರತಿಷ್ಠೆಪಡಿಸಿಕೊಂಡವರಾಗಿ "ತಂದೆಯಾದ" ಆತನ ಬಳಿಗೆ ಬರುವ ಭಾಗ್ಯವನ್ನು ಹೊಂದಿಕೊಳ್ಳುತ್ತದೆ. (ಯೆಶಾಯ 9:6) ಅವರು ಈ ಸಂಬಂಧದಲ್ಲಿ ನೆಲೆಗೊಂಡರೆ ಆಗ ಅವರು ಆದಾಮನಲ್ಲಿ ಕಳಕೊಂಡಿದ್ದ ಮಾನವ ಪರಿಪೂರ್ಣತೆಯನ್ನು ಪುನಃವಶದ ಅಭಿವೃದ್ಧಿಯಿಂದಾಗಿ ಪಡಕೊಳ್ಳುತ್ತಾರೆ. ಈ ರೀತಿಯಲ್ಲಿ ಕ್ರಿಸ್ತನಲ್ಲಿರುವವರೆಲ್ಲರೂ ಜೀವನದ ಪರಿಪೂರ್ಣತೆಗೆ ಒಳಗಾಗುವರು – ನಿಜವಾದ ಮತ್ತು ಸಂಪೂರ್ಣವಾದ ಅರ್ಥದಲ್ಲಿ "ಜೀವಿತರಾಗುವರು'. ಅವರು ಸ್ವಾಭಾವಿಕವಾಗಿ ಪ್ರಥಮ ಜೀವದಾಯಕನಾದ ಆದಾಮನಲ್ಲಿ ಇದ್ದವರು ಮತ್ತು ಆತನ ವಿಫಲತೆಯ ಫಲವಾಗಿ ಸೋತುಹೋದವರು. ಅವರಿಗೆ ಸದ್ಯದಲ್ಲಿಯೇ ನಿತ್ಯಜೀವದಾಯಕನಾದ ಎರಡನೆಯ ಆದಾಮನ ಸಂಬಂಧ ಹೊಂದುವ ಸದಾವಕಾಶವನ್ನು ದಯಪಾಲಿಸಲಾಗುವುದು. ಅವರು ಆತನಲ್ಲಿ ಯುಕ್ತವಾದ ಮಕ್ಕಳಾಗಿದ್ದು ಆತನ ಸ್ವರಕ್ಕೆ ವಿಧೇಯರಾದಲ್ಲಿ ನಿತ್ಯಜೀವವನ್ನು ಪಡಕೊಳ್ಳುವರು.

ಈ ರೀತಿಯ ಅರ್ಥವಿವರಣೆ ಮಾತ್ರವೇ ಈ ಸನ್ನಿವೇಶಕ್ಕೆ ಹೊಂದಿಕೊಳ್ಳುತ್ತದೆ. ಅಪೋಸ್ತಲನು ತನ್ನ ವಾದವನ್ನು ಮುಂದುವರೆಸುತ್ತಾ– "ಕ್ರಿಸ್ತನ ಸಂಬಂಧದಿಂದ ಜೀವಿತ ರಾಗುವರು" ಎಂಬ ಮಾತನ್ನು ಮುಂದುವರೆಸುತ್ತಾ "ಆದರೆ ಪ್ರತಿಯೊಬ್ಬನೂ ತನ್ನ ತನ್ನ ತರಗತಿಯಲ್ಲಿರುವನು" ಎಂಬ ಮಾತುಗಳನ್ನು ಅದಕ್ಕೆ ಸೇರಿಸುತ್ತಾನೆ. ಆತನು ಕ್ರಮವಾಗಿ ಸಭೆ, ಮದಲಗಿತ್ತಿ, ಕ್ರಿಸ್ತನ ದೇಹ, "ಕ್ರಿಸ್ತನು" "ಪ್ರಥಮ ಫಲಗಳು" "ಮೊದಲನೆಯ ಪುನರುತ್ಥಾನ" (ಫಿಲಿಪ್ಪಿ 3:10) ಎಂಬುವುಗಳ ಬಗ್ಗೆಯೂ ಹೇಳುತ್ತಾನೆ. ಇವರು ಸುವಾರ್ತಾ ಯುಗದ ಮಹಾಕರೆಯಲ್ಲಿ ಕ್ರಿಸ್ತನ ಸಂಬಂಧಕ್ಕೆ ಬರುವವರಾಗಿದ್ದು ಕ್ರಿಸ್ತನ ವಿಶಿಷ್ಟ ಪ್ರತಿನಿಧಿಗಳಾಗುತ್ತಾರೆ. ಇವರಿಗೆ ವಿಶೇಷ ಮಟ್ಟದಲ್ಲಿ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳಿಂದ ಕೂಡಿದ ಜೀವವನ್ನು ನೀಡಬೇಕಾಗುವುದು ಮತ್ತು ಬಳಿಕ ಇನ್ನೂ ಹೆಚ್ಚಾಗಿ ತೋರಿಸಬೇಕಾಗುವುದು.

"ತರುವಾಯ' ಎಂಬ ಪದವನ್ನು ಅಪೋಸ್ತಲನು ಬೇರೆ ಕ್ರಮದಲ್ಲಿ ಉಪಯೋಗಿಸಿ "ತರುವಾಯ" ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು"(1ಕೊರಿ.15:23) ಎಂದಿದ್ದಾನೆ. ಅಂದರೆ ನಿತ್ಯಜೀವಕ್ಕೆ ಯೋಗ್ಯರೆಂದು ಕಂಡುಬರುವ ಉಳಿದವರು ಜೀವದಿಂದ ಎಬ್ಬಿಸಲ್ಪಡುವರು ಹಾಗೂ ಪಾಪ ಮತ್ತು ಮರಣದಿಂದ ಬಿಡುಗಡೆ ಹೊಂದಿಕೊಳ್ಳುವರು. ಈ ಎರಡನೆಯ ವರ್ಗದವರನ್ನು ಎಬ್ಬಿಸುವುದು ಸಹಸ್ರವರ್ಷ (ಮಿಲೇನಿಯಂ) ಯುಗದ ಕಾರ್ಯವಾಗಿದೆ; ಅವರುಗಳನ್ನು "ಜೀವಿತರನ್ನಾಗಿ ಮಾಡುವುದು" ಒಂದು ಅನುಕ್ರಮವಾದ ಕ್ರಿಯೆಯಾಗಿದ್ದು, ಇದನ್ನು ಕಾಲಾವಧಿಯ ಅಂತ್ಯದಲ್ಲಿ ಸಾಧಿಸಲಾಗುವುದು. ಇದೊಂದು ವಿನಾಯಿತಿಯಾಗಿದ್ದು – ಆ ಕಾರಣದಿಂದ, ಬಹುಶಃ ಮತ್ತೊಂದು ಕ್ರಮ ಅಥವಾ ಗುಂಪು ಎಂದು ಉಚಿತವಾಗಿ ಕರೆಯಬಹುದಾಗಿದೆ. – ಇವರುಗಳು ಅಪೊಸ್ತಲನು ಹೇಳುವಂತೆ ಪಂಚಾಶತ್ತಮದ ಹಿಂದಿನ ಕಾಲಾವಧಿಯ ಜಯಶಾಲಿಗಳು, ನಿಷ್ಠಾವಂತ ಪುರಾತನ ಪಿತೃಗಳು (ಇಬ್ರಿಯ11:39–40) ಇವರುಗಳು ನಂಬಿಕೆಯ ಮೂಲಕ ಪ್ರಖ್ಯಾತಿ ಪಡೆದವರಾಗಿ ದೇವರಿಂದ ಅಂಗೀಕರಿಸಲ್ಪಟ್ಟಿದ್ದಾರೆ. ಅವರ ನ್ಯಾಯವಿಚಾರಣೆಯು ಈಗಾಗಲೇ ನೆರವೇರಿದೆ. ಮರಣದಿಂದ ಜೀವಿತಕ್ಕೆ ಅವರನ್ನು ಕ್ರಮೇಣವಾಗಿ ಪುನಃ ಸ್ಥಾಪಿಸುವುದು ಅನಾವಶ್ಯಕ. ಅವರ ಕೊರತೆಗಳು ನ್ಯಾಯವಿಚಾರಣೆಯಲ್ಲಿ ಬಂದಿವೆ. ಆದುದರಿಂದ ಅವರ ಪುನರುತ್ಥಾನವು ಕ್ಷಣಮಾತ್ರದಲ್ಲಿ ಆದರೂ ಅದು ಶಿರಸ್ಸಾಗಿರುವ ಕ್ರಿಸ್ತನ ದೇಹದ ಹೊರತಾಗಿ ವಿವಿಧ ಕ್ರಮದಲ್ಲಿ, ತಂಡ ಅಥವಾ ವರ್ಗದಲ್ಲಿ ಉಂಟಾಗುವಂತಾದ್ದು.

ಪುರಾತನ ಪಿತೃಗಳ ಪೂರ್ಣ ಸಮರ್ಪಕವಾದ ಮಾನವ ಮನಸ್ಸು ದೇಹದ ಪುನರುತ್ಥಾನವನ್ನು ಮಾನವನ ಪ್ರಥಮ ವರ್ಗವೆಂಬಂತೆ ಅನುಸರಿಸಿದಲ್ಲಿ ನಾವು ಜನಾಂಗಗಳೊಡನೆ ಅಥವಾ ಈ ಪ್ರಪಂಚದ ಜನರೊಡನೆ ಪುನರುತ್ಥಾನ ಕಾರ್ಯವನ್ನು ನಿತ್ಯರಾಜ್ಯದ ಸ್ಥಾಪನೆಯ ಕಾಲದಲ್ಲಿ ನಿಜವಾಗಿಯೂ ಹತ್ತರಲ್ಲಿ ಒಂಬತ್ತು ಭಾಗ ಸತ್ತವರೆಂದು, ಆದರೆ ಸಾಮಾನ್ಯ ಬಳಕೆಯಲ್ಲಿ ಜೀವಿಸುವವರೆಂದು ಹೇಳಬಹುದು. ಅವರುಗಳು ಸಮಾಧಿ ಸೇರದೇ ಹೋದರೂ, ದೇವರ ದೃಷ್ಟಿಕೋನದಲ್ಲಿ ಸತ್ತವರಾಗಿದ್ದಾರೆ ಮತ್ತು ಜೀವಕೊಡುವ, ಪುನರ್‌ವಶದ ಪ್ರಕ್ರಿಯೆಯು ತಕ್ಷಣದಲ್ಲಿ ಅವರೊಡನೆ ಪ್ರಾರಂಭಗೊಳ್ಳುತ್ತದೆ. ಈ ಲೋಕದಲ್ಲಿ ಕಾರ್ಯಾರಂಭ ಮಾಡಿರುವ ಮತ್ತು ನೀತಿವಂತಿಕೆ ಮತ್ತು ಪ್ರೀತಿಯ ನಿಯಮದಲ್ಲಿ ಅದನ್ನು ಆಳುವ ದೇವರ ರಾಜ್ಯವು ಸ್ಪಷ್ಟವಾಗಿ ಅವರ ಮುಂದಿರುತ್ತದೆ; ಮತ್ತು ದೇವರ ಜ್ಞಾನವು ಅವರ ಜ್ಞಾನೋದಯಕ್ಕಾಗಿ ಇಡೀ ಲೋಕವನ್ನು ಕವಿದಿರುತ್ತದೆ. ಆಗ ಅವರಿಗೆ ನೀತಿವಂತಿಕೆ, ವಿಧೇಯತೆ ಮತ್ತು ನಿತ್ಯಜೀವವನ್ನು ಅಥವಾ ಅನೀತಿ, ಅವಿಧೇಯತೆ ಮತ್ತು ಎರಡನೆಯ ಮರಣವನ್ನು ಆಯ್ಕೆಮಾಡುವ ಪೂರ್ಣ ಅವಕಾಶ ಒದಗಿಬರುತ್ತದೆ. ಮನುಷ್ಯ ಕುಮಾರನ ಧ್ವನಿಗೆ ಓಗೊಟ್ಟು ಅದಕ್ಕೆ

ವಿಧೇಯರಾಗುವ ಜೀವಿತವನ್ನು ಅವರು ಸ್ವೀಕರಿಸುವವರು ಮತ್ತು ತಮ್ಮ ಏಳಿಗೆಗಾಗಿ ಆ ರಾಜ್ಯದ ಅವಶ್ಯಕತೆಗಳಿಗೆ ವಶವರ್ತಿಗಳಾಗುವವರು ಮಾತ್ರವೇ ಸದಾಕಾಲ ಪೂರ್ಣವಾದ ಪೂರ್ವಸ್ಥಿತಿ, ಸಮರ್ಪಕತೆ ಮತ್ತು ಪರಿಪೂರ್ಣಜೀವವನ್ನು ಹೊಂದಿಕೊಳ್ಳುವರು.

ಇವರುಗಳು ಜೀವದ ಮಾರ್ಗದಲ್ಲಿ ಪ್ರಾರಂಭಿಸುವಾಗ, ಮರಣವೆಂಬ ಮಹಾ ಸೆರೆಮನೆಯಲ್ಲಿರುವ ಕೆಲವರನ್ನು, ಸಮಾಧಿಯಿಂದ ಕರೆಯಲ್ಪಟ್ಟವರಾಗಿ, ಎಚ್ಚರಿಸಲ್ಪಡುವರು, ನಿಖರವಾಗಿ ಅದೇ ರೀತಿಯಲ್ಲಿ ಉಪಚರಿಸಲ್ಪಡುವರು. ಲೋಕವು ಅವರನ್ನು ಅಂಗೀಕರಿಸಲು ತಯಾರಾಗುವಾಗ, ಇತರರು, ಮತ್ತೂ ಕೆಲವರು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರ ಕೃಪೆಯಿಂದ ಅವರಿಗೆ ಒದಗಿಸಲಾಗುವ ಪುನರ್‌ವಶದ, ಪುನರುತ್ಥಾನದ ಆಶೀರ್ವಾದಗಳನ್ನು ಹೊಂದಿಕೊಳ್ಳುವಂತೆ ಸಮಾಧಿಯಿಂದ ಹೊರಬರುವರು. ಆದರೆ, ಈ ಎಲ್ಲಾ ಪ್ರಕರಣಗಳಲ್ಲಿಯೂ ಪರೀಕ್ಷೆಯು ಒಂದೇ ತೆರನಾಗಿರುತ್ತದೆ– "ಆ ಪ್ರವಾದಿಯ (ಕ್ರಿಸ್ತನ) ಮಾತುಗಳನ್ನು ಕೇಳದೇ ಹೋಗುವವರು ಆತನ ಜನರಿಂದ ತೆಗೆದು ಹಾಕಲ್ಪಡುವರು" (ಎರಡನೆಯ ಮರಣದಲ್ಲಿ –"ಅವರು ಜೀವವನ್ನು ಕಾಣುವುದೇ ಇಲ್ಲ"), ಬದಲಾಗಿ ಆ ಪ್ರವಾದಿಯ ಮಾತುಗಳನ್ನು ಕೇಳುವವರು ಕ್ರಿಸ್ತನಲ್ಲಿರುವವರೆಗೆ ಮತ್ತು ಆತನಿಗೆ ಸಂಪೂರ್ಣವಾಗಿ ಅಧೀನರಾಗಿರುವವರೆಗೆ ಮರಣದ ಸ್ಥಿತಿಯಿಂದ ಅಂಗುಲ ಅಂಗುಲವಾಗಿ, ಹಂತ ಹಂತವಾಗಿ ಎತ್ತಲ್ಪಡುವರು ಮತ್ತು ಅವರು ಪೂರ್ಣಪ್ರಮಾಣದಲ್ಲಿ ನಿತ್ಯಜೀವವನ್ನು ಪಡಕೊಳ್ಳುವರು.

"ಮಾನವ ಕುಟುಂಬದ ಪ್ರತಿಯೊರ್ವ ಸದಸ್ಯನೂ ಪುನರುತ್ಥಾನದ ಶಕ್ತಿಯನ್ನು ಅನುಭವಿಸುವ ಮುನ್ನ ಸಮಾಧಿಯನ್ನು ಸೇರುವುದು ಅವಶ್ಯವಲ್ಲವೇ?' ಎಂಬ ಪ್ರಶ್ನೆಯು ಕೆಲವರಲ್ಲಿ ಉಂಟಾಗುತ್ತದೆ. ಇದಕ್ಕೆ ನಾವು ಉತ್ತರಿಸುವುದೇನೆಂದರೆ, ಮೊದಲನೆಯ ಪುನರುತ್ಥಾನದಲ್ಲಿ ಪಾಲು ಇರುವವರೆಲ್ಲರೂ ಪುನರುತ್ಥಾನದ ಆಶೀರ್ವಾದಗಳನ್ನು ಹೊಂದಿಕೊಳ್ಳುವ ಮೊದಲು ಮರಣಹೊಂದುವುದು ನಿಜವಾಗಿಯೂ ಅವಶ್ಯ. ಯಾಕೆಂದರೆ ಅವರ ಒಡಂಬಡಿಕೆಯು ಅಂತೆಯೇ ಇದೆ ಮತ್ತು ಅವರಿಗೆ ದೇವರು ಮಾಡಿದ ವಾಗ್ದಾನವೇನೆಂದರೆ "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆ ಯನ್ನು ಕೊಡುವೆನು" (ಪ್ರಕಟನೆ 2:10), ನಮ್ಮ ರಕ್ಷಣಾ ನಾಯಕನಾದ ಕರ್ತನು ಮರಣದವರೆಗೆ ತನ್ನನ್ನು ಜೀವವುಳ್ಳ ಬಲಿದಾನವಾಗಿ ಪ್ರತಿಷ್ಠಿಸಿಕೊಂಡದ್ದು ಮಾತ್ರವಲ್ಲ, ಆತನು ತನ್ನನ್ನು ಪ್ರತಿಷ್ಠಿಸಿಕೊಳ್ಳಲು ನಿಜವಾಗಿ ಮರಣವನ್ನು ಅನುಭವಿಸಬೇಕಿತ್ತು. ಇದೇ ತತ್ವವು ಆತನ ದೇಹವಾದ ಸಮಗ್ರ ಸಭೆಗೂ ಅನ್ವಯವಾಗುತ್ತದೆ. ಮತ್ತು ಅವರು ಆತನ ಪ್ರಥಮ ಪುನರುತ್ಥಾನದ ಮಹಿಮೆಯಲ್ಲಿ ಪಾಲುದಾರರಾಗಬೇಕಾದಲ್ಲಿ ಕ್ರಿಸ್ತನ ಸಂಕಟಗಳಲ್ಲಿ ಉಳಿದದ್ದನ್ನು ಅನುಭವಿಸಿಯೇ ತೀರಬೇಕಾಗುತ್ತದೆ. ಆದರೆ, ಪ್ರಪಂಚದ ಮಾನವ ಜಾತಿಯ ಬಗ್ಗೆ ಹೇಳುವದಾದರೆ ಅವರೆಲ್ಲರೂ ಪುನಃ ಸ್ಥಾಪಿಸಲ್ಪಟ್ಟು, ಪುನರುತ್ಥಾನ, ಉನ್ನತ ಪ್ರಭಾವಗಳಲ್ಲಿ ಪಾಲುತೆಗೆದುಕೊಳ್ಳುವ ಮುನ್ನ ಸಮಾಧಿಯನ್ನು ಸೇರುವ ಅವಶ್ಯವಿಲ್ಲ.

ನಾವೀಗಾಗಲೇ ನೋಡಿದಂತೆ ಆದಾಮನ ಅವಿಧೇಯತೆಯ ದೆಸೆಯಿಂದ ಶಾಪವು ಬಂದಂದಿನಿಂದ ಸಮಗ್ರ ಲೋಕವು ದೈವೀಕ ದೃಷ್ಟಿಕೋನದಲ್ಲಿ ಸತ್ತಿದೆಯೆಂದು ಪರಿಗಣಿಸಲಾಗುತ್ತಿದೆ. ಪ್ರಸ್ತುತ ಕಾಲದಲ್ಲಿ ಇಡೀ ಲೋಕವು ಸೆರೆಯಲ್ಲಿದ್ದು ಮಾನಸಿಕ, ದೈಹಿಕ ಮತ್ತು ನೈತಿಕ ಬಲಹೀನತೆಗಳೆಂಬ ಬೇಡಿಗಳಿಂದ ಬಂಧಿಸಲ್ಪಟ್ಟಿದೆ. ಈ ಸೆರೆಮನೆಯಲ್ಲಿ ವಿವಿಧ ವಿಭಾಗಗಳಿವೆ ಮತ್ತು ಜನರು ಯಾರನ್ನು ಬದುಕಿರುವರೆಂದು ಹೇಳುವರೋ ಅವರನ್ನು ದೇವರು ಸತ್ತವರೆಂದು (ಅಪರಾಧಗಳ, ಪಾಪಗಳ ಮತ್ತು ಶಾಪದ ದೆಸೆಯಿಂದ) ಕರೆಯುತ್ತಾನೆ, ಮತ್ತು ಅಂಥವರ ಬಗ್ಗೆ ಹೇಳಬೇಕಾದರೆ ಇನ್ನೂ ಸಹಾ ಸೆರೆಮನೆಯ ಅಂಗಣದಲ್ಲಿ ನಡೆಯುತ್ತಿದ್ದಾರೆ. ಅವರುಗಳನ್ನು ಇನ್ನೂ ಸೆರೆಮನೆಯ ಕೋಣೆಗಳಲ್ಲಿ ಅಂದರೆ ಸಮಾಧಿಯಲ್ಲಿ ಬಂಧಿಸಿಲ್ಲ; ಆದರೆ ಅವರು ಸೆರೆಮನೆಯಲ್ಲಿದ್ದಾರೆ. ಅವರನ್ನು ಯಾರೂ ಅವರ ಮೇಲಿರುವ ಮರಣದ ಶೃಂಖಲೆಯನ್ನು ಮುರಿಯಲಾರರು. ಎಲ್ಲಾ ಕೈದಿಗಳ ಬಿಡುಗಡೆಯ ಅಪ್ಪಣೆಯನ್ನು ಸೆರೆಮನೆಯ ಅಧಿಕಾರಿಗೆ ಕಳುಹಿಸಿದರೆ, ಅದು ಕೋಣೆಗಳಲ್ಲಿ ಬಂಧಿಸಿಟ್ಟವರಿಗೆ ಮಾತ್ರವಲ್ಲ, ಯಾವುದೇ ಅರ್ಥದಲ್ಲಿ ಸೆರೆಮನೆಯ ಕಂಬಿಗಳ ಹಿಂದಿರುವವರಿಗೆಲ್ಲರಿಗೂ, ಆತನ ವಶದಲ್ಲಿರುವವರೆಲ್ಲರಿಗೂ ಅನ್ವಯವಾಗುತ್ತದೆ ಎಂದು ನಾವು ಬಲ್ಲೆವು. ಮರಣದ ಬಗ್ಗೆಯೂ, ಮರಣವೆಂಬ ಸೆರೆಮನೆಯ ಅಧಿಕಾರಿಯೊಂದಿಗೂ ಅದೇ ರೀತಿಯಾಗಿರುತ್ತದೆ. ಆತನು ಜನಾಂಗದ ಕೋಟ್ಯಾಂತರ ಜನರನ್ನು ಸಮಾಧಿಗೆ ಸೇರಿಸಿರುತ್ತಾನೆ. ಮತ್ತೆ ನೂರಾರು ಕೋಟಿ ಜನರು ಆತನ ಸೆರೆಮನೆಯ ಅಂಗಣದಲ್ಲಿ ಭಾಗಶಃವಾದ ಸ್ವಾತಂತ್ರದಲ್ಲಿರುತ್ತಾರೆ ಮತ್ತು ಇವರುಗಳನ್ನು ಬಿಗಿಯಾದ ಭದ್ರತೆಯಲ್ಲಿ ಇಡಲಾಗಿದೆ ಮತ್ತು ಇವರುಗಳು ನರಳಾಟದೊಡನೆ, ಶ್ರಮಪಟ್ಟು ಸೇವೆಮಾಡುತ್ತಾ ಬಿಡುಗಡೆಗಾಗಿ ಕಾಯುತ್ತಿದ್ದಾರೆ.

ಸೆರೆಮನೆಯ ಆವರಣದೊಳಗೆ ಹೋದವರನ್ನು ಮನುಷ್ಯಕುಮಾರನ ಧ್ವನಿಯನ್ನು ಕೇಳುವಂತೆ ಮತ್ತು ಅದಕ್ಕೆ ವಿಧೇಯರಾಗುವುದರಿಂದ ಅವರು ಜೀವಿಸುವಂತೆ ಯಾವ ರೀತಿಯಲ್ಲಿ ಎದ್ದು ಹೊರಗೆ ಬರುವರು ಎಂಬುದನ್ನು ಕರ್ತನು ವಿವರಿಸುವುದಿಲ್ಲ. (ಯೋಹಾನ 5:25). ಆದುದರಿಂದ, ಈ ಕಾರ್ಯವಿಧಾನವು ಯಾವರೀತಿಯಲ್ಲಿರುತ್ತದೆ ಎಂಬುದನ್ನು ನಾವು ನಮ್ಮ ಇಚ್ಛಾನುಸಾರ ನಿರ್ಣಯಿಸಲಾಗದು. ಸ್ಪಷ್ಟವಾಗಿ, ಈ ವಿಷಯದ ವಿವರಗಳನ್ನು ತಿಳುಕೊಳ್ಳುವ ಅಗತ್ಯ ನಮಗಿಲ್ಲ. ಆದರೆ ಈ ಬಗ್ಗೆ ಆಲೋಚಿಸುವುದು ನಮಗೆ ಕುತೂಹಲಕಾರಿಯಾಗಿದೆ ಮತ್ತು ಈ ಕಾರ್ಯವಿಧಾನಗಳ ಬಗ್ಗೆ ನಾವು ಊಹಿಸುವುದು ಕರ್ತನಿಗೆ ವಿರೋಧವಾಗಲಾರದೆಂದು ನಾವು ಭಾವಿಸುತ್ತೇವೆ. ನಮ್ಮ ಅನಿಸಿಕೆಯನ್ನು ಈಗಾಗಾಲೇ ಸಂಕ್ಷಿಪ್ತವಾಗಿ ಹೇಳಲಾಗಿದೆ* –"ಜ್ಞಾನದಲ್ಲಿಯೂ, ಪ್ರೀತಿಯಲ್ಲಿಯೂ ಬೆಳೆಯುತ್ತಾ ದೇವರ ಅನುಗ್ರಹವನ್ನು ಪಡಕೊಳ್ಳಲಿರುವ ಪ್ರತಿಯೊಬ್ಬನೂ ಸಾಧ್ಯವಾದಷ್ಟುಮಟ್ಟಿಗೆ ಇತರರು ವಿಶೇಷವಾಗಿ ತನ್ನ ಬಳಿಯಲ್ಲಿರುವ ತಮ್ಮ ಬಂಧುಗಳು

ಆಶೀರ್ವಾದ ಹೊಂದಿಕೊಳ್ಳಲು ಸಹಕರಿಸುತ್ತಾರೆ. ಈ ವಿಷಯದಲ್ಲಿ ಕರ್ತನನ್ನು ಸಮೀಪಿಸಬಹುದಾದ ಸಾಮಾನ್ಯ ವಾಹಿನಿಯು ಪ್ರಾರ್ಥನೆ ಮತ್ತು ಸಿದ್ಧತೆಗಳಾಗಿವೆ. ಇದಕ್ಕೆ ಉತ್ತರವಾಗಿ ಎಚ್ಚರಿಕೆಯುಂಟಾಗುತ್ತದೆ. ಆಗ ಪ್ರಪಂಚವು ರೋಗ ಮುಂತಾದವುಗಳಲ್ಲಿ ಸಹಾಯ ಪಡೆಯಲು ಯೆಹೂದ್ಯರು ಮೋಶೆಯ ಯಾಜಕತ್ವದ ಮೇಲೆ ಆತುಕೊಂಡಂತೆ "ರಾಜವಂಶಸ್ಥಯಾಜಕತ್ವ" ವನ್ನು ಮೊರೆಹೋಗುತ್ತಾರೆಂದು ನಾವು ಊಹಿಸುತ್ತೇವೆ. ಆದುದರಿಂದ ಪ್ರಾರ್ಥನೆಯು ಆಶೀರ್ವಾದಗಳ ಸಾಮಾನ್ಯ ವಾಡಿಕೆಯ ವಾಹಿನಿಯಾಗಿದೆ.

*Vol. IV , Chap xiii ,p-640

## ಅನಾಸ್ಟಸಿಸ್; ಪುನಃಸ್ಥಾಯಿ ಅಥವಾ ಪುನರುತ್ಥಾನ
## Anastasis--Re-Standing or Resurrection

ಪರಿಶುದ್ಧ ಗ್ರಂಥಗಳಲ್ಲಿ ನಮ್ಮ ಮುಂದಿಟ್ಟಿರುವ 'ಪುನರುತ್ಥಾನ'ದ ಅರ್ಥವು ಸಾಮಾನ್ಯವಾಗಿ ದೃಷ್ಟಿ ಕಳಕೊಂಡಿದೆ. ಯಾಕೆಂದರೆ Resurrection ಎಂಬ ಆಂಗ್ಲ ಪದವನ್ನು ವಿವಿಧ ರೀತಿಗಳಲ್ಲಿ ಉಪಯೋಗಿಸುವುದುಂಟು. ಉದಾಹರಣೆಗಾಗಿ ಒಂದು ಬದಿಯಲ್ಲಿ ಬಹಳಕಾಲ ತೆಗೆದಿಟ್ಟ ಬಟ್ಟೆ ವಸ್ತ್ರದ ವಸ್ತುವನ್ನು "ಪುನರುಜ್ಜೀವಗೊಳಿಸು'ವುದು ಅಸಮಾನ್ಯ ಸಂಗತಿಯೇನಲ್ಲ. ಒಂದು ಸಮಾಧಿ ಭೂಮಿಯನ್ನು ತೊರೆಯುವಾಗ ಅದರಲ್ಲಿ ಹೂತಿರುವ ಹೆಣಗಳನ್ನು ಹೊರತೆಗೆದು ಬೇರೆಡೆ ಹೂಳುವಾಗಲೂ 'ರೆಸರೆಕ್ಟಿಂಗ್' ಎಂಬ ಪದವನ್ನು ಬಳಸುವುದುಂಟು. ಈ ಪದದ ನ್ಯಾಯೋಚಿತವಾದ ಬಳಕೆಯನ್ನು ನಿಕಟವಾಗಿ ಸಮೀಪಿಸುವಂತೆ ಹಲವು ಕ್ರೈಸ್ತರು ಸತ್ತುಹೋದ ಲಾಜ್ಞರನನ್ನು ಬದುಕಿಸಿದ್ದು, ನಾಯಿನೆಂಬ ಊರಿನ ವಿಧವೆಯ ಮಗನನ್ನು ಸತ್ತವರೊಳಗಿಂದ ಬದುಕಿಸಿದ್ದು, ಸತ್ತುಹೋಗಿದ್ದ ಯಾಯೀರನ ಮಗಳನ್ನು ಬದುಕಿಸಿದ್ದು ಮುಂತಾದವುಗಳೆಲ್ಲವನ್ನೂ ಪುನರುಜ್ಜೀವ (Resurrection) ಎಂಬ ಅರ್ಥದಲ್ಲಿಯೇ ನೋಡುತ್ತಾರೆ ಮತ್ತು ದೇವರ ವಾಕ್ಯಗಳಲ್ಲಿನ ಮಿಲಿಯಾಂತರ ಯುಗದ ಮುಂಜಾವಿನಲ್ಲಿ ನೆರವೇರಲಿರುವ ಪುನರುತ್ಥಾನದ ವಾಗ್ದಾನಗಳ ಬಗ್ಗೆ ಮಾತನಾಡುವಾಗ ಅವರ ಮನಸ್ಸಿನಲ್ಲಿ ಅಂಥಹ ಆಲೋಚನೆಯೇ ಇರುತ್ತವೆ. ಈ ಘೋರವಾದ ತಪ್ಪು ಈ ಮುಖ್ಯವಾದ ಪ್ರಸ್ತಾಪದ ಮೇಲೆ ಮೋಡ ಕವಿದಂತಿದೆ. ಮೇಲೆ ಹೇಳಿದ ಲಾಜ್ಞರನಾಗಲೀ, ಬೇರೆ ಯಾರಾಗಲೀ ಪುನರುತ್ಥಾನಗೊಂಡರೆಂಬುದು ನಿಜವಲ್ಲ, ಅವರು ಕೇವಲ ಮರಣವೆಂಬ ನಿದ್ರೆಯಿಂದ ಎಚ್ಚತ್ತುಕೊಂಡರು, ಹೊಸಜೀವ ಪಡಕೊಂಡರು. ಕೇವಲ ಎಚ್ಚತ್ತುಕೊಳ್ಳುವುದಕ್ಕೂ, ಮರಣದಿಂದ, ಸಮರ್ಪಕವಾದ ಜೀವ ಪಡೆದು ಪೂರ್ಣವಾದ ಮತ್ತು ಸಮಗ್ರವಾದ ಪುನರುತ್ಥಾನಹೊಂದಿಕೊಳ್ಳುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಎಚ್ಚತ್ತುಕೊಳ್ಳುವುದೆಂದರೆ ಕೇವಲ ಜೀವನ ಯಂತ್ರವನ್ನು ಪುನಃ ಚಾಲನೆಮಾಡುವುದು– ಪುನಃಚೇತನಗೊಳಿ ಸುವುದು. ಇದನ್ನೇ ಲಾಜ್ಞರನಿಗೂ, ನಾಯಿನೆಂಬ ಊರಿನ ವಿಧವೆಯ ಮಗನಿಗೂ, ಯಾಯಿರನ ಮಗಳು ಮುಂತಾದವರಿಗೂ ಮಾಡಿದ್ದು. ಅವರು ಇನ್ನೂ ಸಹಾ ಮರಣ ದಂಡನೆಗೆ ಒಳಗಾಗಿದ್ದರು. ಪ್ರಸ್ತುತ ಮರಣಸ್ಥಿತಿಯನ್ನು ಕೇವಲ ಸ್ವಲ್ಪ ಸಮಯದವರೆಗೆ ಮಾತ್ರವೇ ಮುಂದೂಡಲಾಯಿತು. ಅವರನ್ನು ಮರಣದಿಂದ ಸಂಪೂರ್ಣವಾದ ನಿತ್ಯಜೀವದ ಸ್ಥಿತಿಗೆ ಎತ್ತಲಾಗಲಿಲ್ಲ.

ಆಂಗ್ಲ ಸತ್ಯವೇದದಲ್ಲಿ ಕಂಡುಬರುವ Resurrection ಎಂಬ ಪದವು ಒಂದು ಸ್ಥಳವನ್ನು ಹೊರತುಪಡಿಸಿ ಬೇರೆಲ್ಲೆಡೆ Anastasis ಎಂಬ ಗ್ರೀಕ್ ಮೂಲದಿಂದ ತೆಗೆದುಕೊಳ್ಳಲಾಗಿದೆ. ಆದರೆ ಮತ್ತಾಯ 27:53ರಲ್ಲಿ ಮಾತ್ರವೇ ಇದನ್ನು ಗ್ರೀಕ್ ಮೂಲದ ಮತ್ತೊಂದು ಪದವಾದ egersis ಎಂಬ ಪದದಿಂದ ತೆಗೆದುಕೊಂಡಿದ್ದು ಇದನ್ನು resurgence ಅಥವಾ reanimation ಎಂಬುದಾಗಿ ಅನುವಾದಿಸುವುದು ಯುಕ್ತವಾಗಿದೆ. Anastasis ಎಂಬ ಪದವು ಹೊಸಒಡಂಬಡಿಕೆಯುಲ್ಲಿ ನಾಲ್ವತ್ತಮೂರು ಸಾರಿ ಕಾಣಿಸಿಕೊಂಡಿದ್ದು ಇದು ಪುನಃ ನಿಂತುಕೊಳ್ಳುವುದು, ಪುನಃ ಏಳುವುದು ಎಂಬುದನ್ನು ಸೂಚಿಸುತ್ತದೆ. ಇದು ಹೆಣವೊಂದು ಸಮಾಧಿಯಿಂದ ಎದ್ದು ನಿಲ್ಲುವ ಸ್ಥಿತಿಯ ಬಗ್ಗೆ ಎಂದಿಗೂ ಹೇಳುವುದಿಲ್ಲ ಅಥವಾ ಇಲ್ಲಿ ಜೀವವನ್ನು ಪುನಃಚೇತನಗೊಳಿಸುವುದು ಇಲ್ಲವೇ ಸ್ಥಗಿತವಾದ ಜೀವವನ್ನು ಪುನಃಚಾಲನೆಗೊಳಿಸುವುದು ಎಂಬ ಅರ್ಥ ಬರುವುದಿಲ್ಲ. ಅಂದರೆ ಇದು ಮುಖ್ಯವಾದ ಸಂಗತಿಗಳಿಗಿಂತಲೂ ಹೆಚ್ಚಾದ ವಿಷಯ. ಇದನ್ನು ಮರಣಕ್ಕೆ ವಿರೋಧವಾದುದು ಅಥವಾ Antithesis – ಮರಣದಿಂದ ಪುನಃ ಪಡೆದುಕೊಳ್ಳುವುದು ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. Anastasis ಎಂಬ ಪದದ ಸರಿಯಾದ ದೃಷ್ಟಿಕೋನ ಸಿಗಬೇಕಾದಲ್ಲಿ ನಾವು ದೈವಿಕ ದೃಷ್ಟಿಕೋನದಲ್ಲಿ ಜೀವವೆಂದರೇನು ಎಂದು ತಿಳಿದಿರಬೇಕು. ನಂತರದಲ್ಲಿ ನಾವು ಸಾಯುವುದು ಮತ್ತು ಮರಣವೆಂದರೇನು ಎಂದು ತಿಳಿದುಕೊಳ್ಳಬೇಕು. ಈ ಎರಡೂ ಆಲೋಚನೆಗಳನ್ನು ನಮ್ಮ ಮನಸ್ಸಿನ ಮುಂದೆ ಇಟ್ಟುಕೊಂಡು ನಾವು Resurrection ಅಥವಾ ಸತ್ತವರೊಳಗಿಂದ ಎದ್ದುಬರುವುದು ಅಥವಾ ನಾವು ಆದಾಮನ ಬೀಳ್ವಿಕೆಯಿಂದ ಪಡೆದಿರುವ ಮರಣದಿಂದ ಜೀವದ ಪರಿಪೂರ್ಣವಾದ ಪರಿಸ್ಥಿತಿಗೆ ಪುನಃ ಸೇರುವುದು ಎಂಬುದರ ಆಲೋಚನೆಯನ್ನು ಗ್ರಹಿಸಬಹುದು.

ಇಬ್ಬರು ವ್ಯಕ್ತಿಗಳು ಮಾತ್ರವೇ ನಿರಂತರ ಜೀವ ಹೊಂದಿದವರಾಗಿದ್ದರು. ಮೊದಲನೆಯವನು– ಪಾಪ ಮಾಡುವ ಮುಂಚಿನ, ಹಾಗೂ ತನ್ನ ಮೇಲೆ ಮರಣದ ಶಾಪವನ್ನು ಮತ್ತು ಸಾಯುವ ಪ್ರಕ್ರಿಯೆಯನ್ನು ಬರಮಾಡಿಕೊಳ್ಳುವ ಮೊದಲಿನ ಆದಾಮನು. ಎರಡನೆಯವನು–ಮನುಷ್ಯನಾದ ಯೇಸು ಕ್ರಿಸ್ತನು. ಆದಾಮನ ವಿರುದ್ಧ ಮರಣ ದಂಡನೆಯು ಘೋಷಣೆಯಾದ ಕ್ಷಣ ಆತನ ಜೀವವನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು, ಮರಣ ಪ್ರಕ್ರಿಯೆಯು ಆರಂಭವಾಯಿತು ಮತ್ತು ಆತನು ಮರಣದಲ್ಲಿದ್ದನು – ಆದುದರಿಂದ ಆತನು ಅಲ್ಲಿಂದ ಮುಂದಕ್ಕೆ ಜೀವದಲ್ಲಿರಲಿಲ್ಲ. ಆತನು ಮರಣಕ್ಕೆ ಸ್ವಲ್ಪ ಸ್ವಲ್ಪವಾಗಿ ಹತ್ತಿರವಾಗುತ್ತಿದ್ದು ಅಂತ್ಯದಲ್ಲಿ ಆತನು ಪೂರ್ಣವಾಗಿ ಮರಣ ಹೊಂದಬೇಕಾಯಿತು, ಆದರೆ ನ್ಯಾಯ ದಂಡನೆಯ ಕ್ಷಣದಿಂದ ಆತನು ನ್ಯಾಯಬದ್ಧವಾಗಿ ಸಾವಿನಲ್ಲಿದ್ದನು. ಆದಾಮನ ಸಂತತಿಯವರಿಗೆ ಎಂದಿಗೂ ಜೀವವಿದ್ದಿಲ್ಲ; ದೇವರು ವಿಧಿಸಿದ

ಮರಣ ಶಿಕ್ಷೆಯು ಎಲ್ಲರ ಮೇಲೆ ತೂಗುತ್ತಿರುವ ದೃಷ್ಟಿಕೋನದಲ್ಲಿ ಕೆಲವು ವರ್ಷಗಳವರೆಗೆ ಮಿಣುಕುವ ಕಿಡಿಯು ದೇವರಿಂದ ಮಾನ್ಯವಾದುದಲ್ಲ. ಲೋಕದಲ್ಲಿ ಜನಿಸುವವರು ಜೀವವನ್ನು ಸಾಯುವ ಸ್ಥಿತಿಯಲ್ಲೇ ಹೊಂದಿಕೊಳ್ಳುತ್ತಾರೆಯೇ ಹೊರತು ಪೂರ್ಣವಾದ ಅರ್ಥದಲ್ಲಿ ಅದನ್ನು ಹೊಂದಿಕೊಳ್ಳುವವರಲ್ಲ. ಈಗಾಗಲೇ ನಾವು ಗಮನಿಸಿದಂತೆ ಇಡೀ ಪ್ರಪಂಚದ ಮಾನವರೆಲ್ಲರೂ ನ್ಯಾಯದ ದೃಷ್ಟಿಯಲ್ಲಿ ಮರಣದ ನಿಯಮಕ್ಕೊಳಪಟ್ಟಿದ್ದಾರೆ. ನಮ್ಮ ವಿಮೋಚಕನೂ ಜೀವದಾಯಕನೂ ಆದ ದೇವಕುಮಾರನೊಂದಿಗೆ ಅನ್ಯೋನ್ಯತೆಯಲ್ಲಿರುವವರು (ಎಣಿಕೆಗೆ) ಮಾತ್ರವೇ ಜೀವಹೊಂದಿದವರೆಂದು ದೇವರು ಪರಿಗಣಿಸುತ್ತಾನೆ.

ಜೀವ ಮತ್ತು ಮರಣದಲ್ಲಿ ಯಾವ ಯಾವ ಅಂಶಗಳಿರಬೇಕೆಂಬ ಆಲೋಚನೆಯು ಮನಸ್ಸಿನಲ್ಲಿ ಇರುವುದಾದರೆ, ಯಾವ ಮಹಿಮಾ ಮಟ್ಟದಿಂದ ಮತ್ತು ಜೀವ ಪರಿಪೂರ್ಣತೆಯಿಂದ ಪ್ರಸ್ತುತವಾದ ಮರಣದ ದುಸ್ಥಿತಿಗೆ ಮಾನವನು ಬಿದ್ದು ಹೋಗಿರುವನೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದಾದರೆ – ಆಗ ಮಾತ್ರವೇ Anastasis ಎಂಬ ಪದದ ಅರ್ಥವು ಪುನಃ ನಿಂತುಕೊಳ್ಳುವುದು ಎಂಬುದನ್ನು ಉಚಿತವಾದ ರೀತಿಯಲ್ಲಿ ಮೆಚ್ಚಿಕೊಳ್ಳಬಹುದು. – ಪತನಗೊಂಡ ಸ್ಥಿತಿಯಿಂದ ತಂದೆಯಾದ ಆದಾಮನು ಪುನಃ ಸೃಷ್ಟಿಗೊಂಡಿದ್ದ ಸುಸಮರ್ಪಕವಾದ ಸ್ಥಿತಿಯಲ್ಲಿ ಎದ್ದು ನಿಲ್ಲುವುದು. ಇದೇ ಸುಸ್ಥಿತಿಗೆ ಮಾನವ ಲೋಕದವರನ್ನೆಲ್ಲಾ ಕ್ರಿಸ್ತನ ಮೂಲಕ ಸೇರಿಸಲು ತಂದೆಯಾದ ದೇವರು ಅಪೇಕ್ಷಿಸುವವನಾಗಿದ್ದಾನೆ. ಇದಕ್ಕೆ ಇರುವ ಶರತ್ತು ಏನೆಂದರೆ ಸತ್ಯದ ತಿಳುವಳಿಕೆಗೆ ಬರುವಾಗ ಅವರು ದೇವರ ಅನುಗ್ರಹವನ್ನು ಅಂಗೀಕರಿಸುವರು ಮತ್ತು ಅದಕ್ಕೆ ತಮ್ಮ ನಿಷ್ಠೆಯನ್ನು ದೇವರ ಕಟ್ಟಳೆಗಳಿಗೆ ವಿಧೇಯರಾಗುವ ಚೈತನ್ಯದಲ್ಲಿ ನಿರೂಪಿಸುವರು. 'Anastasis' ಎಂಬ ಈ ಪದವನ್ನು ಕೇವಲ ಸತ್ತವರ ಪುನರ್ಜನ್ಮ ಎಂಬ ಅರ್ಥದಲ್ಲಿ ಎಂದಿಗೂ ಉಪಯೋಗಿಸಿಲ್ಲ. ಸತ್ಯವೇದದಲ್ಲಿ ನಲವತ್ತು ಮೂರು ಕಡೆಗಳಲ್ಲಿ ಈ ಪದ ಪ್ರಯೋಗವಾಗಿರುವ ವಾಕ್ಯಭಾಗಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದೇ ಆದರೆ ಅವುಗಳೆಲ್ಲವೂ 'Anastasis' ಎಂಬ ಈ ಪದಕ್ಕೆ ಹೊಂದಿಕೊಂಡಿರುವ ಅರ್ಥವಿವರಣೆ ಮತ್ತು ಮಹತ್ವಗಳಿಗೆ ಅನುಸಾರವಾಗಿಯೇ ಇದೆ ಎಂಬುದನ್ನು ಕಂಡುಕೊಳ್ಳಬಹುದು. ಅಂದರೆ ಪುನಃ ಎದ್ದು ನಿಲ್ಲುವುದು, ಸಾವಿನಿಂದ ಪುನಃಶ್ಚೇತನ, ಸರ್ವ ಸಮರ್ಪಕವಾದ ಜೀವಿತಕ್ಕೆ ಪುನಃ ಪ್ರವೇಶ. ಈ ನಾಲ್ವತ್ತಮೂರು ವಚನಗಳಲ್ಲಿ ಒಂದು ಮಾತ್ರ (ಇಬ್ರಿಯ 11:35) ಅಷ್ಟೊಂದು ಸ್ಪಷ್ಟವಾಗಿರುವುದಿಲ್ಲ – "ಸ್ತ್ರೀಯರು ಸತ್ತುಹೋಗಿದ್ದ ತಮ್ಮವರನ್ನು ಪುನರುತ್ಥಾನದಿಂದ ತಿರುಗಿ ಹೊಂದಿದರು". ಇಲ್ಲಿ Anastasis ಪದವನ್ನು "ಪುನರುತ್ಥಾನದಿಂದ ತಿರುಗಿ ಹೊಂದಿದರು"ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಎಂದರೆ ಇಲ್ಲಿ ಅಪೋಸ್ತಲನು ಸತ್ತುಹೋಗಿದ್ದ ತಮ್ಮ ಗಂಡು ಮಕ್ಕಳನ್ನು ಜೀವಿತರಾಗಿ ಪಡೆದ ಇಬ್ಬರು ಸ್ತ್ರೀಯರನ್ನು ಉಲ್ಲೇಖಿಸುತ್ತಿದ್ದಾನೆ ಎಂಬುದು ಈ ವಾಕ್ಯಗಳ ಬಗ್ಗೆ ಸಾಮಾನ್ಯವಾದ ಕಲ್ಪನೆ. ಮೊದಲನೆಯದು ಎಲೀಯ ಪ್ರವಾದಿಯ ಮೂಲಕ ಮತ್ತೊಂದು ಎಲೀಷ ಪ್ರವಾದಿಯ ಮೂಲಕ ( 1 ಅರಸು 17:17–23; 2 ಅರಸು 4: 18–37 ). ಈ ಕೆಳಗಿನ ಎರಡು ಕಾರಣಗಳಿಂದ ನಾವು ಈ ದೃಷ್ಟಿಕೋನವನ್ನು ಒಪ್ಪಿಕೊಳ್ಳುವುದಿಲ್ಲ :–

(1) ಇದು ನೂತನ ಒಡಂಬಡಿಕೆಯ ಇತರ ನಾಲ್ವತ್ತೆರಡು ಕಡೆಗಳಲ್ಲಿ ಬರುವ Anastasis ಪದದ ಅರ್ಥದ ಅನ್ವಯದಲ್ಲಿ ಇಲ್ಲ.

(2) ಯಾಕೆಂದರೆ, ಅಂಥಹ ಅರ್ಥೈಸುವಿಕೆಯು ಅಪೋಸ್ತಲನು ಇಬ್ರಿಯ 11ರಲ್ಲಿ ಮಾಡುವ ವಾದಕ್ಕೆ ಒಪ್ಪಿಗೆಯಾಗುವುದಿಲ್ಲ. ಅಲ್ಲಿ ಮುಂದಿಟ್ಟಿರುವ ವಾದವೇನೆಂದರೆ ಪುರಾತನ ಯೋಗ್ಯರು ದೇವರಲ್ಲಿ ಮತ್ತು ಮುಂಬರುವ ಪುನರುತ್ಥಾನದಲ್ಲಿ ಇಟ್ಟಿರುವ ನಂಬಿಕೆ. ವಚನ 40ರಲ್ಲಿ ಸೂಚಿಸುವಂತೆ ಇವುಗಳು ಸಭೆಯು ಮಹಿಮೆ ಹೊಂದಿಕೊಂಡನಂತರ ದೊರೆಯಲಿರುವ ಬಹುಮಾನಗಳಾಗಿವೆ "ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು" (ಇಬ್ರಿಯ 11:40). ಅವರು ನಿರೀಕ್ಷಿಸುವ ಅವರ ನಂಬಿಕೆಗೆ ತಳಹದಿಯಾಗಿರುವ ಮತ್ತು ಶ್ರೇಷ್ಠವಾದ ಪುನರುತ್ಥಾನವು 39ನೇ ವಚನದಲ್ಲಿ ಹೇಳಿರುವಂತೆ ಇನ್ನೂ ಬರಬೇಕಾಗಿದೆ – "ಅವರು ವಾಗ್ದಾನದ ಫಲವನ್ನು ಹೊಂದಲಿಲ್ಲ". ಆದುದರಿಂದ ಅವರಲ್ಲಿ ನಿದ್ರೆಮಾಡುವವರನ್ನು ಎಚ್ಚರಿಸುವುದು ಬಹುಮಾನವಾಗಿರುವುದಿಲ್ಲ, ಅದು ಅವರು ಬಯಸುತ್ತಿರುವ ವಾಗ್ದಾನವಲ್ಲ. ಅಪೋಸ್ತಲನು 32ನೇ ವಚನದಲ್ಲಿ ಗಿದ್ಯೋನ್, ಬಾರಾಕ್, ಸಂಸೋನ್ ಎಫ್ತಾಹ, ದಾವೀದ, ಸಮುವೇಲ ಮತ್ತು ಕೆಲವೊಂದು ಪ್ರವಾದಿಗಳ ಬಗ್ಗೆ ಹೇಳುವವನಾಗಿದ್ದಾನೆ. ಇವರುಗಳು ದೇವರ ಶಕ್ತಿಯ ನೆರವಿನಿಂದ ಮತ್ತು ತಮ್ಮ ಭಕ್ತಿಯ ದೆಸೆಯಿಂದ ಕೆಲವೊಂದು ಅಪಾಯಗಳಿಗೆ ಗುರಿಮಾಡುವಂತಹ, ಅನೇಕ ಸಂಧರ್ಭಗಳಲ್ಲಿ ಕರ್ತನ ಸೇವೆಯಲ್ಲಿ ತಮ್ಮ ಜೀವವನ್ನೇ ತ್ಯಾಗಮಾಡುವುದರ ಮೂಲಕ ಅನೇಕ ಅದ್ಭುತಗಳನ್ನು ನೆರವೇರಿಸಿದರು. ಈ ಸಂಗತಿಗಳಲ್ಲಿ ಹೆಂಗಸರಿಗೆ ಬಹಳ ಕಡಿಮೆ ಅವಕಾಶಗಳಿದ್ದವು. ಹೀಗಿದ್ದರೂ ಅಪೋಸ್ತಲನು ನಮಗೆ ಇಸ್ರಾಯೇಲಿನ ತಾಯಂದಿರು, ಪತ್ನಿಯರು ಮತ್ತು ಹೆಣ್ಣು ಮಕ್ಕಳು ಇವರ ಬಗ್ಗೆ ತಿಳಿಸುತ್ತಾ ಅವರ ಭಕ್ತಿಯು ಅವರನ್ನು ಪುರುಷರೊಂದಿಗೆ ಸಹಕರಿಸುವಂತೆಯೂ, ಈ ಸಂಗ್ರಾಮದಲ್ಲಿ ಮತ್ತು ತ್ಯಾಗದಲ್ಲಿ ತೊಡಗಿರುವ ತಮ್ಮ ತಂದೆಯರು, ಗಂಡಂದಿರು ಮತ್ತು ಗಂಡು ಮಕ್ಕಳೊಂದಿಗೆ ಸಹಾನುಭೂತಿ ತೋರಿಸಿ ಅವರೊಡನೆ ಭಾಗವಹಿಸುವಂತೆ ಮಾಡುತ್ತದೆ. ಈ ರೀತಿಯಾಗಿ ಅವರು ಇದರಲ್ಲಿ ತೊಡಗಿರುವ ಎಲ್ಲಾ ಪುರುಷರನ್ನು ಹುರಿದುಂಬಿಸಿ ಅವರೊಂದಿಗೆ ಅವರ ತ್ಯಾಗದಲ್ಲಿ ವಿಶ್ವಾಸದ ಪಾಲುದಾರರಾಗುತ್ತಾರೆ. ಈ ರೀತಿಯಾಗಿ ಅವರುಗಳು ಸಹಾ ನಿಷ್ಠಾವಂತರಿಗೆ ಮುಂದೆ ಒದಗಿಬರಲಿರುವ ಶ್ರೇಷ್ಠವಾದ ಪುನರುತ್ಥಾನವನ್ನು ಗ್ರಹಿಸುತ್ತಾರೆ. ನಂಬಿಕೆಯ ಕಣ್ಣುಗಳ ಮೂಲಕ ಭವಿಷ್ಯದ ಬಗ್ಗೆ ಆಳವಾಗಿ ನೋಡುವಾಗ ನಂಬಿಕೆಯಲ್ಲಿರುವವರು ಸತ್ತು ಹೋಗಿದ್ದ ತಮ್ಮವರನ್ನು ಪುನಃ ಜೀವಹೊಂದಿದವರನ್ನಾಗಿ ಅಥವಾ "ಪುನರ್ಜೀವಿತ"ರನ್ನಾಗಿ ಪಡಕೊಂಡರು. ತನ್ನ ಮಗನಾದ ಇಸಾಕನನ್ನು ಬಲಿಕೊಡಲು ಸಿದ್ಧನಾದ ಅಬ್ರಹಾಮನ ನಂಬಿಕೆಯು ದೇವರಿಗೆ

ಮೆಚ್ಚಿಗೆಯಾದರೆ, ಅದರಂತೆ ಇಸ್ರಾಯೇಲ್ಯರ ತಾಯಂದಿರ, ಪತ್ನಿಯರ ಮತ್ತು ಹೆಣ್ಣುಮಕ್ಕಳ ನಂಬಿಕೆಯು ಪುರುಷ ಪ್ರತಿನಿಧಿಗಳಿಗೆ ಆಗುವ ಬಾಧೆಗಳ, ಯುದ್ಧಗಳ, ಸಹನೆ ಮುಂತಾದವುಗಳ ಹುಮ್ಮನಿಸ್ಸಿನಲ್ಲಿ ಪೌರುಷವಾಗಿ ಪ್ರವೇಶಿಸುವರಾಗಿದ್ದು ಇವು ಕರ್ತನಿಗೆ ಮೆಚ್ಚಿಗೆಯಾಗುವುದಾದರೆ ಈ ವಿಷಯಗಳಲ್ಲಿ ಯಾರು ವಾಗ್ವಾದ ಮಾಡಿಯಾರು? ಅವರಲ್ಲಿ ಪುರುಷ ಶಕ್ತಿಯಿದ್ದಲ್ಲಿ ಕ್ರೂರವಾದ ಗೇಲಿ, ವಿಪತ್ತು, ಬಂಧನ ಮತ್ತು ಸೆರೆವಾಸ ಮುಂತಾದ ಪರೀಕ್ಷೆಗಳಲ್ಲಿ ಅವರುಗಳು ಸಹಾ ಕೆಚ್ಚಿನಿಂದ ಹೋರಾಡುತ್ತಿದ್ದರು ಎಂದು ಇದು ಸೂಚಿಸುತ್ತದಲ್ಲವೇ? ಅಂತಹ ಸ್ತ್ರೀಯರು (ಅಪೋಸ್ತಲನು ಹೇಳಿರುವಂತೆ ಕೆಲವರು ಮಾತ್ರವೇ) ನಿಸ್ಸಂದೇಹವಾಗಿ ದೇವರಿಂದ ಅಂಗೀಕರಿಸಲ್ಪಡುತ್ತಾರೆ ಮತ್ತು ಪುರಾತನ ಯೋಗ್ಯರಿಗೆ ದೇವರು ದಯಪಾಲಿಸಲಿರುವ ಶ್ರೇಷ್ಟವಾದ ಪುನರುತ್ಥಾನದಲ್ಲಿ ಅವರುಗಳು ಸಹಾ ಸಂಶಯಾತೀತವಾಗಿ ಪಾಲುದಾರರಾಗುತ್ತಾರೆ.

Anastasis ಎಂಬುದು ಮರಣದಿಂದ ಸಂಪೂರ್ಣವಾಗಿ ಪುನಃ ಎದ್ದೇಳುವುದನ್ನು ಸೂಚಿಸುವಾಗ, ಅದು ಯಾವ ಅರ್ಥದಲ್ಲಿಯೂ ಆ ಪ್ರಕ್ರಿಯೆಯನ್ನು ತಕ್ಷಣ ಅಥವಾ ಕ್ರಮೇಣ ಎಂಬುದಾಗಿ ನಿಗದಿಗೊಳಿಸುವುದಿಲ್ಲ.ನಿಜವಾಗಿ ಹೇಳಬೇಕಾದರೆ, ನಮ್ಮ ಕರ್ತನ ಪುನರುತ್ಥಾನವು ತಕ್ಷಣವಾದುದು ಮರಣದಿಂದ ಜೀವದ ಸಂಪೂರ್ಣತೆಗೆ ಉಂಟಾದುದು ಎಂಬುದನ್ನು ನಾವು ಗಮನಿಸಬೇಕು. ಈ ಪ್ರಪಂಚದವರು ಸಾಮಾನ್ಯವಾಗಿ ಕ್ರಮೇಣವಾದ ಪುನರುತ್ಥಾನ ಅಥವಾ ಪುನರ್ಜೀವ ಹೊಂದುವವರಾಗಿದ್ದು ಇದಕ್ಕಾಗಿ ಸಾವಿರ ವರ್ಷಗಳ ಬಹುಭಾಗವನ್ನು ನಿಗಧಿಪಡಿಸಲಾಗಿದೆ. Anastasis ನಲ್ಲಿ ಜೀವದಿಂದೇಳುವವರ ಸ್ವರೂಪವು ಬದಲಾಗುವುದಿಲ್ಲ ಹಾಗೂ ಜೀವದಿಂದೇಳುವವರು ತಾವು ಮರಣಹೊಂದಿದಾಗ ಇದ್ದ ಸ್ವರೂಪವನ್ನೇ ಹೊಂದಿದವರಾಗಿರುತ್ತಾರೆ. ಅಪೋಸ್ತಲನು ಈ ವಿಷಯವನ್ನು ತನ್ನ ಪ್ರವಚನದಲ್ಲಿ ಪ್ರಸ್ತಾಪಮಾಡಿ ಕರ್ತನು ಅವರಿಗೆ ತನ್ನ ಇಷ್ಟದ ಪ್ರಕಾರವಾಗಿ ಸೂಕ್ತ ದೇಹವನ್ನು ನೀಡುತ್ತಾನೆ ಎಂದು ತಿಳಿಸಿದ್ದಾನೆ (1ಕೊರಿ.15:35 –38). Anastasis ಎಂಬ ಈ ಪದದ ಅರ್ಥದ ಪ್ರಕಾರ ಮರಣಹೊಂದಿದ ಮಾನವಜೀವಿಯ ಸ್ವರೂಪವನ್ನು ಪುನರ್ಜೀವವು ಬದಲಾಯಿಸಲಾರದು. ಕೇವಲ ಮರಣ ದಲ್ಲಿದ್ದಂತೆಯೇ ಎಬ್ಬಿಸಲ್ಪಡುವವನು ಪುನಃ ಜೀವ ಹೊಂದಿದವನಾಗಿ ಎದ್ದುಬರುವನು ಎಂಬುದನ್ನು ಇದು ಸೂಚಿಸುವುದಾಗಿದೆ.

ಇಲ್ಲಿ ನಾವು ದೈವ ಗ್ರಂಥಗಳಲ್ಲಿರುವ ಸಾಮರಸ್ಯವನ್ನು ಗುರುತಿಸಬಹುದು: (1) ನಮ್ಮ ಕರ್ತನಾದ ಯೇಸುವು ತನ್ನ ತಂದೆಯ ಬಳಿಯಿಂದ ಮಾನವನಾಗಿ ಬಂದಾಗ ತನ್ನ ಮಹಿಮೆಯನ್ನು ಬಿಟ್ಟುಬಂದು ನಮ್ಮ ಸ್ವರೂಪವನ್ನು ಧರಿಸಿದ್ದನು (2) ತನ್ನ ಮೂವತ್ತನೆಯ ವಯಸ್ಸಿನಲ್ಲಿ ದೀಕ್ಷಾಸ್ನಾನದ ಮೂಲಕ ತನ್ನನ್ನು ಸೇವೆಗೆ ಸಮರ್ಪಿಸಿಕೊಂಡಾಗ ಆತನು ನೂತನ ಸೃಷ್ಟಿಯನ್ನು ಪಡಕೊಂಡವನಾಗಿ ತನ್ನ ಸ್ವರೂಪವನ್ನು ಪುನಃ ಬದಲಾಯಿಸಿಕೊಂಡನು. ಇನ್ನು ಮುಂದೆ ಲೋಕದ್ದಲ್ಲದ ಈ ನೂತನ ಸೃಷ್ಟಿಯೇ ಆತನು ಸತ್ತ ಮೂರನೆಯ ದಿನದಲ್ಲಿ ಪುನರುತ್ಥಾನಗೊಂಡು ತಂದೆಯು ಮೆಚ್ಚುವ ಮಹಿಮಾ ಸ್ವರೂಪವನ್ನು ಪಡೆಯಿತು. ಇದೊಂದು ಸೂಕ್ತವಾದ ಆತ್ಮೀಕ ಶರೀರವಾಗಿದ್ದು ಆತನು ಮರಣದಿಂದ ಸಂಪೂರ್ಣವಾಗಿ ಜೀವಿತನಾಗಿ ಈ ಹಿಂದೆ ಆತನು ಪಡೆದುಕೊಳ್ಳಲಾಗಿದ್ದ ಸಮತಲದಲ್ಲಿಯೇ ಎಬ್ಬಿಸಲ್ಪಟ್ಟನು. ಅದರಂತೆ, ಸಭೆಯೂ ಸಹಾ ತನ್ನ ಶಿರಸ್ಸಾಗಿರುವ ಕರ್ತನಡಿಯಲ್ಲಿ ಆತನಿಗೆ ಹೊಂದಿಕೊಂಡ ನೂತನ ಸೃಷ್ಟಿಯಾಗಿದ್ದು ಅದೇ ಪುನರುತ್ಥಾನದಲ್ಲಿ ಪಾಲು ತೆಗೆದುಕೊಳ್ಳುವುದಾಗಿದೆ. ಅವರುಗಳು ಆತನ ಶರೀರದ ಅಂಗಗಳೆಂದು ಎಣಿಸಲ್ಪಟ್ಟಿರುವುದರಿಂದ ಅವರಿಗೂ ಸಹಾ "ಆತನ ಪುನರುತ್ಥಾನ'ದಲ್ಲಿ ಅಂದರೆ ಮಹತ್ವವೂ, ಬಹು ಪ್ರಮುಖವೂ ಆದ ಪ್ರಥಮ ಪುನರುತ್ಥಾನದಲ್ಲಿ ಪಾಲಿದೆ ಎಂದು ಹೇಳಲಾಗಿದೆ. ಅವರುಗಳು ನೂತನ ಸೃಷ್ಟಿಗಳಾಗಿ ಪುನಃ ಪಡಕೊಂಡವರು, ಆತ್ಮನಿಂದ ಜನಿಸಿದವರು ಆಗಿದ್ದಾರೆ. ಆದುದರಿಂದ ಅವರಿಗೆ ಪ್ರತ್ಯೇಕವಾದ ಪುನರುತ್ಥಾನ.

ಪ್ರಾಕೃತ ಮನುಷ್ಯನು, ನೂತನ ಸೃಷ್ಟಿಯಾಗದೆ, ನೂತನ ಸ್ವರೂಪದ ಪುನಃ ಪಡಕೊಳ್ಳುವಿಕೆಯ ಅನುಭವ ಹೊಂದದೆ ಪ್ರಾಕೃತ ಮಾನವನಾಗಿಯೇ ಉಳಿಯುತ್ತಾನೆ. ಆತನ Anastasis ಅಥವಾ ಪುನಃ ಜೀವಿತನಾಗಿ ಏಳುವುದು ಮಾನವ ಜೀವಿಯಾಗಿ ಮಾನವ ಸ್ವರೂಪದ ಸರ್ವಸಂಪೂರ್ಣತೆಗೆ ಆತನ ಉನ್ನತಿಯನ್ನು ಸೂಚಿಸುತ್ತದೆ. ಈ ಸ್ಥಿತಿಯನ್ನು ಆದಾಮನ ಪ್ರತಿನಿಧಿಗಳಾಗಿ ಆತನ ಸಂತತಿಯವರು ಕಳಕೊಂಡಿದ್ದರು. ಈ ಪುರಾತನ ಪಿತೃಗಳು ಅಪೋಸ್ತಲರು ಹೇಳುವಂತೆ ನಿರೀಕ್ಷಿಸುವ ಶ್ರೇಷ್ಟವಾದ ಪ್ರಥಮ ಪುನರುತ್ಥಾನವಾಗಿರುವುದಿಲ್ಲ. ಯಾಕೆಂದರೆ ಅದು ಸಭೆಯ ಶಿರಸ್ಸಾಗಿರುವ ಕರ್ತನು ಸುವಾರ್ತಾ ಯುಗದಲ್ಲಿ ಕರೆಯುವವರಿಗೆ ಮಾತ್ರವೇ ಮೀಸಲಾಗಿದೆ. ಈ ಪುರಾತನ ಪಿತೃಗಳು ಹೊಂದಿಕೊಳ್ಳಲಿರುವ ಆ ಶ್ರೇಷ್ಟವಾದ ಪುನರುತ್ಥಾನವು ಅವರ ಸಹಚರರುಗಳಿಗಿಂತ ಉತ್ತಮವಾದುದಾಗಿರುತ್ತದೆ ಮತ್ತು ಅದು ಮಿಲೇನಿಯಂ ಯುಗದ ಪ್ರಾರಂಭದಲ್ಲಿಯೇ ಆ ಕಾಲದಲ್ಲಿ ಕ್ರಮೇಣವಾದ ನ್ಯಾಯವಿಚಾರಣೆಯ ಮೂಲಕ ಉಂಟಾಗಲಿರುವ ಕ್ರಮೇಣವಾದ ಪುನರುತ್ಥಾನದ ಬದಲಾದ ತಕ್ಷಣವೇ ಮಾನವ ಸರ್ವಸಂಪೂರ್ಣತೆಯನ್ನು ಪಡೆಯುವರು. ಅವರು ಮಿಲೇನಿಯಂ ಯುಗದಲ್ಲಿ ಕ್ರಿಸ್ತನ ಗೌರವಾನ್ವಿತ ಅಧಿಕಾರಿಗಳನ್ನಾಗಿ ನೇಮಿಸಲ್ಪಡುವರು. (ಕೀರ್ತನೆ 45:16). ಮಾನವರು ಕಾಣಲಾಗದ ಆತ್ಮೀಕ ಕ್ರಿಸ್ತನ ಪ್ರತಿನಿಧಿಗಳಾಗಿ ಆತನ ರಾಜ್ಯದ ಪಾಲನೆಮಾಡುವುದು ಈ ಪುರಾತನ ಯೋಗ್ಯರ

* ಮಹಾ ಸಮೂಹದವರನ್ನು ಪ್ರಥಮ ಪುನರುತ್ಥಾನದ ಪಾಲುದಾರರೆಂದು, ಅದರ ಮಹಿಮೆ, ಗೌರವ ಮತ್ತು ನಿರ್ಣಯತ್ವಗಳಲ್ಲಿ ಭಾಗಿಗಳೆಂದು ಗಣನೆಗೆ ತೆಗೆದುಕೊಳ್ಳಲಾಗದಿದ್ದರೂ ಮತ್ತು ಅವರನ್ನು ಪುರಾತನ ಪಿತೃಗಳೊಡನೆ ಎಣಿಸಲಾಗದಾದರೂ ಅವರನ್ನು ಮಹಾ ಸಂಕಟದಿಂದ ಗೆದ್ದುಬಂದವರೆಂದು ಪರಿಗಣಿಸಲೇಬೇಕು. ಗೆದ್ದವರಾದ ಅವರನ್ನು ಮರಣವನ್ನು ದಾಟಿ ಜೀವಿತರಾದವರು ಎಂದು ಪರಿಗಣಿಸಬೇಕಾಗುತ್ತದೆ. ಮತ್ತು ಆ ಕಾರಣದಿಂದ ಅವರು ತಕ್ಷಣವಾದ ಪುನರುತ್ಥಾನಕ್ಕೆ ಒಳಗಾಗುವವರಾಗಿದ್ದಾರೆಯೇ ಹೊರತು ಮುಂದೆ ನ್ಯಾಯವಿಚಾರಣೆಗೆ ಒಳಗಾಗಲಿರುವ ಲೋಕದವರಂತೆ ಕ್ರಮೇಣವಾದ ಪ್ರಕ್ರಿಯೆಗೆ ಅಲ್ಲ. ** ಸಂಪುಟ 1 (ಪುಟ 205 )

ಭಾಗ್ಯವಾಗುತ್ತದೆ. ಆದುದರಿಂದ ಅವರ ಆಶೀರ್ವಾದಗಳು ಅವರ ಸಂಗಡದವರಿಗಿಂತ ಶ್ರೇಷ್ಟವಾಗಿರುತ್ತವೆ*, ಎರಡು ಪಾಲಿನಷ್ಟಿರುತ್ತದೆ. ಇದರಲ್ಲಿ ಅವರ ವಿಚಾರಣೆಯು ಹಿಂದಿನದಾಗಿದ್ದು, ಅವರ ಸರ್ವಸಂಪೂರ್ಣತೆಯ ಅರ್ಹತಾ ಪ್ರತಿಫಲವು ತಕ್ಷಣದ್ದಾಗಿರುತ್ತದೆ. ಈ ಕಾರಣದಿಂದ ಮೊದಲಿಗೆ ಅವರು ಇತರರಿಗಿಂತ ಸಾವಿರವರ್ಷಗಳ ಮಿಗಿಲಾದ ಸೌಕರ್ಯವನ್ನು ಹೊಂದಿಕೊಳ್ಳುತ್ತಾರೆ. ಎರಡನೆಯದಾಗಿ, ದೇವರ ಅನುಗ್ರಹದಿಂದ ಅವರಿಗೆ ಪುನರ್ವಶದ (Restitution) ಮಹಾ ಕಾರ್ಯದಲ್ಲಿ ಭಾಗವಹಿಸುವ ಭಾಗ್ಯ ದೊರೆಯುತ್ತದೆ ಮತ್ತು ಆ ರಾಜ್ಯದ ಲೌಕಿಕ ಸ್ಥಿತಿಗಳಲ್ಲಿ ಕ್ರಿಸ್ತನು ತನ್ನ ಕಾರ್ಯವೆಸಗುವ ಮಾನವ ಪ್ರತಿನಿಧಿಗಳಾಗಿ, ಆತನ ವಾಹಿನಿಗಳಾಗಿರುವ ಅವಕಾಶ ಒದಗಿಬರುತ್ತದೆ.

ಈ ಲೋಕದ ಸಾಮಾನ್ಯವಾದ Anastasis ಪ್ರತಿಯೊಬ್ಬ ವ್ಯಕ್ತಿಯ ವಿಷಯದಲ್ಲಿ ಪರಿಶುದ್ಧ ರಾಜಮಾರ್ಗದಲ್ಲಿನ ಆತನ ಸ್ವಂತ ಪ್ರಗತಿಯ ಮೇಲೆ ಆತುಕೊಂಡಿದೆ.* ಪ್ರಭುವು ವಿವರಿಸಿದಂತೆ "ಸಮಾಧಿಗಳಲ್ಲಿರುವವರೆಲ್ಲರೂ ಮನುಷ್ಯ ಕುಮಾರನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ " (ಯೋಹಾನ 5:28). ಆದರೆ ಈ ರೀತಿಯಾಗಿ ಎದ್ದುಬರುವುದು ಯಾರ ನ್ಯಾಯತೀರ್ಪು ಅಥವಾ ನ್ಯಾಯವಿಚಾರಣೆಯು ಈ ಹಿಂದೆ ಯಶಪ್ರದವಾಗಿಲ್ಲವೋ ಅವರ ವಿಷಯದಲ್ಲಿ ಕೇವಲ ಎಚ್ಚೆತ್ತುಕೊಳ್ಳುವುದು.

ಸುವಾರ್ತಾ ಯುಗದ ಜಯಶಾಲಿಗಳು ಮಾತ್ರವೇ ಪ್ರಥಮಪುನರುತ್ಥಾನದಲ್ಲಿ ಎದ್ದು ಬರುವರು ಮತ್ತು ಹಿಂದಿನ ಕಾಲದ ಜಯಶಾಲಿಗಳು ಶ್ರೇಷ್ಟವಾದ ಪುನರುತ್ಥಾನಕ್ಕಾಗಿ ಎದ್ದುಬರುವರು. ಉಳಿದವರು ಕರ್ತನು ಪ್ರಕಟಿಸಿದಂತೆ ನ್ಯಾಯತೀರ್ಪಿಗಾಗಿ ಎದ್ದುಬರುವರು. "ಒಳ್ಳೆಯದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು* (ಯೋಹಾನ 5–29 )* ಯೋಹಾನ 5:25ರಲ್ಲಿ ನಮ್ಮ ಕರ್ತನು ಯಾವ ರೀತಿಯಲ್ಲಿ ಮರಣದಿಂದ ಜೀವಿತಕ್ಕೆ ದಾಟಲಾಗುವುದು ಎಂಬುದನ್ನು ವಿವರಿಸುತ್ತಾ – "ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವ ಕಾಲ ಬರುತ್ತದೆ. ಈಗಲೇ ಬಂದದೆ; ಕೇಳಿದವರು ಬದುಕುವರು" ಎಂದಿದ್ದಾನೆ. ದೇವರ ದೃಷ್ಟಿಯಲ್ಲಿ ಇಡೀ ಲೋಕವು ಸತ್ತುಹೋಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ನೋಡುವುದೇನೆಂದರೆ, ಅಪೋಸ್ತಲರುಗಳು ಮತ್ತು ಆದಿ ಸಭೆಯವರು ಈ ಮರಣ ಪ್ರಪಂಚದಿಂದ ಹೊರಗೆ ಕರೆಯಲ್ಪಟ್ಟವರಾಗಿದ್ದು ಅದರ ಸದಸ್ಯರಾದ ಇವರುಗಳಿಗೆ ದೇವಕುಮಾರನ ಮೂಲಕ ಜೀವದ ಸಂದೇಶವನ್ನು ಕೇಳುವ ಅವಕಾಶ ದಯಪಾಲಿಸಲಾಗಿದೆ. ಅವರು ಲಕ್ಷ್ಯಕೊಡುವ ಅನುಪಾತದಲ್ಲಿ ಜೀವದಾಯಕನ ಹತ್ತಿರ ಹತ್ತಿರವಾದ ಮಹತ್ವದ ಸಂಬಂಧಕ್ಕೆ ಸೇರುವವರಾಗಿದ್ದಾರೆ. ಆ ದಿನದಿಂದ ಈವರೆಗೆ ಆತನಲ್ಲಿ ಒಂದಾಗಿರುವವರು ಆತನ ಧ್ವನಿಯನ್ನು ಆತನ ಸ್ವರ, ಆತನ ಸಂದೇಶವನ್ನು ಕೇಳಿ ಅದಕ್ಕೆ ವಿಧೇಯರಾಗಿದ್ದಾರೆ ಮತ್ತು ಅದರ ಅನುಪಾತದಲ್ಲಿ ಆತನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ ಮತ್ತು ಆತನ ಪ್ರತಿಫಲಗಳನ್ನು ಹಂಚಿಕೊಳ್ಳುವವರಾಗಿದ್ದಾರೆ. ಬರಲಿರುವ ಕಾಲದಲ್ಲಿಯೂ ಇದೇ ಪ್ರಕಾರವಾಗಿರುತ್ತದೆ. "ಕರ್ತನ ಜ್ಞಾನವು ಲೋಕವನ್ನೆಲ್ಲಾ ತುಂಬಿಕೊಳ್ಳುವುದು ಮತ್ತು ಒಬ್ಬನು ತನ್ನ ನೆರೆಯವನಿಗೆ "ನಿನ್ನ ಕರ್ತನನ್ನು ತಿಳಿದುಕೋ'ಎಂದು ಹೇಳುವ ಅವಶ್ಯವಿಲ್ಲ. ಯಾಕೆಂದರೆ ಚಿಕ್ಕವರಿಂದ ದೊಡ್ಡವರ ಮಟ್ಟಿಗೂ ಎಲ್ಲರೂ ಆತನನ್ನು ಅರಿತವರಾಗಿದ್ದಾರೆ. ಸಮಾಧಿಗಳಲ್ಲಿರುವವರೆಲ್ಲರೂ ಎದ್ದುಬರುವರು. ಅವರ ಕರ್ತನ ಧ್ವನಿಯನ್ನು ಕೇಳುವರು ಅದಕ್ಕೆ ವಿಧೇಯರಾಗುವವರು ಜೀವಿಸುವರು"

ಇಂದಿನ ಸುವಾರ್ತಾ ಸಭೆಯಲ್ಲಿ ದೇವಕುಮಾರನ ಸ್ವರವನ್ನು ಕೇಳಿಸಿಕೊಳ್ಳುವುದು ಕ್ರಮೇಣವಾಗಿ ನಡೆಯುವ ಸಂಗತಿ, ಆಜ್ಞೆಯ ಮೇಲೆ ಆಜ್ಞೆ ಸೂತ್ರದ ಮೇಲೆ ಸೂತ್ರ, ಜಗತ್ತಿಗೆ ಮಿಲೇನಿಯಂ ಯುಗದಲ್ಲಿಯೂ ಹೀಗೆಯೇ ಇರುವುದು. ವಿಧೇಯರು ಕ್ರಮೇಣವಾಗಿ ಸ್ಪಷ್ಟದಿಂದ, ಮತ್ತೂ ಸ್ಪಷ್ಟವಾಗಿ ದೇವರ ಪ್ರೀತಿಯ, ನ್ಯಾಯದ ಮತ್ತು ಪೂರ್ವ ಸಿದ್ಧತೆಗಳನ್ನು ಅದರ ಉದ್ದ, ಅಗಲ, ಎತ್ತರ ಮತ್ತು ಆಳವನ್ನು ಕ್ರಮೇಣವಾಗಿ ಮೆಚ್ಚುತ್ತಾ ಹೋಗುವರು. ಆದರೆ ಆ ಮಹಾ ಬೋಧಕನ ಆಜ್ಞೆಗಳಿಗೆ ವಿಧೇಯರಾಗುವವರು ಹಿಂಸೆ ಮತ್ತು ವಿರೋಧಗಳಿಗೆ ಒಳಗಾಗುವುದಿಲ್ಲ. ಈಗ ಅವರು ಆತನ ಮಾತುಗಳನ್ನು ಅನುಸರಿಸಲು ಬಯಸುವಾಗ ಸೈತಾನನು ಬಂಧಿಸಲ್ಪಡುವನು ಮತ್ತು ದೇವರ ರಾಜ್ಯದ ಕಾನೂನುಗಳು ಜಾರಿಗೆ ಬರುವುವು ಮತ್ತು ನೀತಿಗೆ ಅನುಸಾರವಾಗಿರುವವರು ಆಶೀರ್ವಾದ ಹೊಂದಿಕೊಳ್ಳುವರು ಮತ್ತು ಮೇಲಕ್ಕೆ ಎತ್ತಲ್ಪಡುವರು. ಆದರೆ ದೇವರ ರಾಜ್ಯಕ್ಕೆ ವಿರೋಧವಾಗಿ ಹೋರಾಡುವವರು ಹಾಗೂ ಅದನ್ನು ಯಾವುದೇ ರೀತಿಯಲ್ಲಿ ವಿರೋಧಿಸುವವರು ಸಮಂಜಸವಾದ ನ್ಯಾಯವಿಚಾರಣೆಯ ನಂತರ ದೇವರ ಕೃಪೆಯನ್ನು ಹೀನೈಸಿದವರು ಎಂದು ಪರಿಗಣಿಸಲ್ಪಟ್ಟ ಅವರು ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು. (ಅಪೋಸ್ತಲರ ಕೃತ್ಯಗಳು 3:23 ಮತ್ತು ಯೆಶಾಯ 65:20)

ಆಗ ಸತ್ತವರ ಸಾಮಾನ್ಯ ಎಚ್ಚರಿಸುವಿಕೆಯ ಬಗ್ಗೆ ಕರ್ತನ ಹೇಳಿಕೆಯು ಆತನ ವಿಮೋಚನಾ ಕಾರ್ಯದ ಫಲವಾಗಿ ಮಹಾ ಆಶೀರ್ವಾದವನ್ನು ಸೂಚಿಸುವುದಾಗಿದೆ. ಒಳ್ಳೆಯದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು ಅಂದರೆ ಪುನರುತ್ಥಾನದಲ್ಲಿ ಪೂರ್ಣ ಜೀವಿತರಾಗಿ ಬಂದವರನ್ನು

*ಕೆಟ್ಟದ್ದನ್ನು ನಡಿಸಿದವರ ಪುನರುತ್ಥಾನ ಎಂಬ ನಮ್ಮ ಸಾಮಾನ್ಯ ಭಾಷಾಂತರವು ಘೋರವಾಗಿ ತಪ್ಪಾಗಿದೆ. ಇದು ಅನೇಕರ ಮನಸ್ಸಿನಲ್ಲಿ ಈ ಪರಿಚ್ಛೇದದ ನಿಜವಾದ ಅರ್ಥಗ್ರಹಿಸದಿರಲು ಮೋಡದಂತೆ ಮರೆಮಾಡಿದೆ. ಕೆಲವರು ಶಿಕ್ಷೆಹೊಂದಿಕೊಳ್ಳುವ ಸಲುವಾಗಿಯೇ ಎಬ್ಬಿಸಲ್ಪಡುವರು ಎಂಬ ಅಭಿಪ್ರಾಯವು ಅನೇಕರಲ್ಲಿ ಮೂಡುವುದು. ಆದರೆ ಇದು ಸತ್ಯಕ್ಕೆ ವಿರುದ್ಧವಾಗಿದೆ. ಇದೇ ಅಧ್ಯಾಯದಲ್ಲಿ ಪುನರಾವರ್ತಿಸಲ್ಪಡುವ 'damnation' ಎಂಬ ಪದವು ಗ್ರೀಕ್ ಮೂಲದ 'Krisis' ಎಂಬ ಪದದಿಂದ ಬಂದುದು. ಇದನ್ನು ನ್ಯಾಯತೀರ್ಪು ಎಂಬುದಾಗಿ ಯುಕ್ತರೀತಿಯಲ್ಲಿ ಅನುವಾದಿಸಲಾಗಿದೆ. ಇದನ್ನು ಇದೇ ರೀತಿ ಅನುವಾದಿಸಬೇಕು ಮತ್ತು ಪರಿಷ್ಕೃತ ಅನುವಾದಗಳಲ್ಲಿ ಹಾಗೆಯೇ ಮಾಡಲಾಗಿದೆ.

ಜಯಿಸಿದವರ ವರ್ಗದವರನ್ನಾಗಿ, ಸಭೆಯನ್ನಾಗಿ, ಪುರಾತನ ಯೋಗ್ಯರನ್ನಾಗಿ ಮತ್ತು ಮಹಾ ಸಮೂಹದವರನ್ನಾಗಿ ಸೂಚಿಸಬಹುದು. ಅವರು ಮಾತ್ರವೇ ಒಳ್ಳೇದನ್ನು ಮಾಡಿದವರು; ದೇವರ ಅಂದಾಜಿನಲ್ಲಿ ಉತ್ತಮವಾಗಿ ನಿರ್ವಹಿಸಿದವರು ಮತ್ತು ದೇವರ ಅಂಗೀಕಾರಕ್ಕೆ ಯೋಗ್ಯರಾದವರೂ ಆಗಿರುತ್ತಾರೆ. "ಒಳ್ಳೆದನ್ನು ಮಾಡಿದವರು' ಎಂಬುದನ್ನು ಆಲೋಚನೆ, ಮಾತು, ಕ್ರಿಯೆಯಲ್ಲಿ ಎಲ್ಲವನ್ನೂ ದೇವರ ಮಟ್ಟಕ್ಕೆ ತಕ್ಕಂತೆ ಸಮರ್ಪಕವಾಗಿ ಮಾಡಿದವರು ಎಂದು ಅರ್ಥ ಮಾಡಿಕೊಳ್ಳಬಾರದು. ಯಾಕೆಂದರೆ ಅಪೋಸ್ತಲನು ನಮಗೆ 'ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ' ಎಂದು ವಿವರಿಸಿದ್ದಾನೆ. ನೀತಿವಂತಿಕೆಗೆ ಸಮೀಪರಾಗಲು ನಾವು ಮಾಡಬಹುದಾದುದೆಂದರೆ ಹೃದಯದಲ್ಲಿ ಶುದ್ಧರಾಗಿರುವುದು ಮತ್ತು ನೀತಿವಂತಿಕೆಯ ಉದ್ದೇಶವನ್ನು ಹೊಂದಿರುವುದು.

ಪ್ರಪಂಚದ ಉಳಿದವರು "ಕೆಟ್ಟದ್ದನ್ನು ಮಾಡಿದವರು' ಎಂಬ ಸಾಲಿಗೆ ಸೇರುತ್ತಾರೆ – ಅವರು ದೇವರಿಗೆ ಅಂಗೀಕಾರಾರ್ಹರಲ್ಲ. ಇವರಲ್ಲಿ ಅನ್ಯಜನರಾಗಿ ದೇವರಿಂದ ಅಂಗೀಕಾರಾರ್ಹರಲ್ಲ ದವರು ಮಾತ್ರವಲ್ಲ, ಅವರು ಮಹಾ ಮಧ್ಯಸ್ಥಗಾರನನ್ನು ಅರಿತವರಲ್ಲ ಆದುದರಿಂದ ಅವರು ಆತನ ಮೂಲಕವಾಗಿ ತಂದೆಯನ್ನು ಸಮೀಪಿಸುವ ಭಾಗ್ಯ ಹೊಂದಿದವರಲ್ಲ. ಆದರೆ ಇವರಲ್ಲಿ ಕ್ರಿಸ್ತನ ಬಗ್ಗೆ ಕೇಳಿದವರು, ಆತನ ಸಂಧಾನಕಾರ್ಯದ ಬಗ್ಗೆ ಅಲ್ಪವಾಗಿಯಾದರೂ ತಿಳಿದವರೂ ಇದ್ದಾರೆ. ಅವರು ಈ ಜ್ಞಾನವನ್ನು ವಿವಿಧ ಮಟ್ಟದಲ್ಲಿ ಹೊಂದಿದ್ದರೂ ಅವರಿಗೆ ಈ ಸೌಭಾಗ್ಯಕ್ಕೆ, ಅವಕಾಶಗಳಿಗೆ ಪ್ರತಿಕ್ರಿಯಿಸಿಲ್ಲ – ಅವರು ತಮ್ಮನ್ನು ಪೂರ್ಣವಾಗಿ ಪ್ರತಿಷ್ಠಿಸಿಕೊಂಡಿಲ್ಲ. ಆದುದರಿಂದ ದೇವರ ದೃಷ್ಟಿಯಲ್ಲಿ ಇವರೆಲ್ಲರೂ 'ಕೆಟ್ಟದ್ದನ್ನು ಮಾಡುವವರಾಗಿದ್ದು" ಆತನಿಂದ ಅಂಗೀಕರಿಸಲ್ಪಡುವದಿಲ್ಲ.

ಈ ವರ್ಗದ ಜನರಲ್ಲಿ ನಾಮಾಂಕಿತ ಸಭೆಯ ಒಳಗೂ ಹೊರಗೂ ಇರುವ ಶ್ರೇಷ್ಠರೆನಿಸಿಕೊಂಡವರೂ ಇದ್ದಾರೆಂಬುದು ಕೂಡಲೇ ಗಮನಿಸಬೇಕಾದ ಸಂಗತಿ. ಇವರಲ್ಲಿ ಅನೇಕ ಗಣ್ಯರು, ವಿವೇಕಿಗಳು, ಹಣವಂತರು ಮತ್ತು ವಿದ್ಯಾವಂತರೂ ಇದ್ದಾರೆ. ಇವರನ್ನು ಎಬ್ಬಿಸುವುದಕ್ಕೂ ದೇವರು ಅನುಕೂಲ ಮಾಡಿರುವುದಕ್ಕಾಗಿ ನಾವು ಸಂತೋಷಿಸಬೇಕಾಗಿದೆ. ಅವರು ಜೀವಕ್ಕಾಗಿ ಪುನರುತ್ಥಾನ ಹೊಂದದಿದ್ದರೂ ಅವರಿಗೆ ಮಿಲೇನಿಯಂ ಯುಗದಲ್ಲಿ ಸಾವಿರ ವರ್ಷದ ದಿನದಲ್ಲಿ* ನಡೆಯಲಿರುವ ನೀತಿನಿರ್ಣಯಕ್ಕೆ ಉಂಟಾಗುವ ಪುನರುತ್ಥಾನದಲ್ಲಿ ಭಾಗವಹಿಸಲು ಮುಂದೆ ಬರುವ ಅವಕಾಶವಿದೆ. ಅವರು ದೇವರ ವಾಕ್ಯದಲ್ಲಿ ಸೂಚಿಸಿರುವ ಆ ಅನುಕೂಲ ಕಾಲದಲ್ಲಿ ತಮ್ಮ ಪರೀಕ್ಷೆಯನ್ನು ಎದುರಿಸಬಹುದಾಗಿದೆ. * ಸಂಪುಟ– 1 ಪುಟ– 137

ಅವರು ದೇವಕುಮಾರನ ಧ್ವನಿಯನ್ನು ಕೇಳಲಿರುವರು – ಅದು ವಿವಿಧ ಕ್ರೈಸ್ತ ಪಂಗಡಗಳು ಮತ್ತು ಪ್ರಪಂಚದವರು ಹೇಳುವ ಅರ್ಥವಾಗದ ಜಂಜಾಟಗಳಿರುವ ವಿಶ್ವಾಸ ಅರಿಕೆಗಳಲ್ಲ. ಅವರಿಗೆ ಶುದ್ಧವಾದ ಭಾಷೆಯು, ಶುದ್ಧವಾದ ಸಂದೇಶವನ್ನು ನೀಡಲಾಗುವುದು – "ಆಗ ಎಲ್ಲರೂ ಒಂದೇ ಮನಸ್ಸಿನಿಂದ ಕರ್ತನನ್ನು ಸೇವಿಸಿ ಆತನ ಹೆಸರನ್ನೆತ್ತಿ ಪ್ರಾರ್ಥಿಸುವಂತೆ ಜನಾಂಗಗಳವರ ತುಟಿಗಳನ್ನು ಮಾರ್ಪಡಿಸಿ ಶುದ್ಧಿ ಮಾಡುವೆನು" (ಚೆಫನ್ಯ 3:9) ಅವರ ಕುರುಡಾದ ಕಣ್ಣುಗಳು ತೆರೆಯಲ್ಪಡುವುವು, ಅವರ ಕೇಳದ ಕಿವಿಗಳು ಮುಚ್ಚಿಕೊಳ್ಳುವುದಿಲ್ಲ, ಅವರು ಕೇಳಿಸಿಕೊಳ್ಳುವರು, ಅವರಿಗೆ ಅರ್ಥವಾಗುವುದು. ಈ ಆನಂದದಾಯಕವಾದ ಸಂದೇಶಗಳನ್ನು ಕೇಳಿಯೂ, ಜೀವದಾಯಕನಾದ ಕ್ರಿಸ್ತನ ಮೂಲಕವಾಗಿ ದೇವರು ದಯಪಾಲಿಸುವ ಭಾಗ್ಯಗಳನ್ನು ಹೊಂದಿಕೊಳ್ಳದೇ ಹೋದಲ್ಲಿ, ಅದರ ಲಾಭವನ್ನು ಪಡಕೊಳ್ಳದೇ ಹೋದಲ್ಲಿ, ಮತ್ತು ಆ ರೀತಿಯಲ್ಲಿ ಹಂತ ಹಂತವಾಗಿ, ಇಂಚು ಇಂಚಾಗಿ ತಮ್ಮ ಬೌದ್ಧಿಕ, ನೈತಿಕ ಮತ್ತು ದೈಹಿಕ ಬಲಹೀನತೆಗಳ ಮೇಲೆ, ಅಸಮರ್ಪಕತೆಯ ಮೇಲೆ ಅವರ ನೀತಿನಿರ್ಣಯದ ಕಾಲದವರೆಗೆ ವಿಜಯವನ್ನು ಸಂಪಾದಿಸಿಕೊಂಡು, ಆದಾಮನಲ್ಲಿ ಕಳಕೊಂಡ ಮತ್ತು ಕ್ರಿಸ್ತನು ತನ್ನ ಪರಿಶುದ್ಧ ರಕ್ತದ ಮೂಲಕ ನಮಗೆ ಸಂಪಾದಿಸಿಕೊಟ್ಟ ನಿತ್ಯಜೀವದ ಪರಿಸ್ಥಿತಿಯನ್ನು ಹೊಂದಿಕೊಳ್ಳಲಾರದೇ ಹೋದಲ್ಲಿ ಅದು ಪೂರ್ಣವಾಗಿ ಅವರ ಸ್ವಂತ ತಪ್ಪಾಗುತ್ತದೆ.

## ಹಿಂದಿನ ಪಾಪಗಳಿಗಾಗಿ ನ್ಯಾಯತೀರ್ಪು ಅಥವಾ ನ್ಯಾಯವಿಚಾರಣೆ ಅಲ್ಲ; ಆದರೆ ಜೀವಕ್ಕಾಗಿ ಮತ್ತೊಂದು ನ್ಯಾಯ ವಿಚಾರಣೆ

## Not a Judgment, or Trial, for Past Sins; but Another Trial for Life

ಲೋಕದವರಿಗೆ ಉಂಟಾಗುವ ಸಾಮಾನ್ಯವಾದ ಎಲ್ಲಾ ನ್ಯಾಯ ವಿಚಾರಣೆಗಳೂ, ಪರೀಕ್ಷೆಗಳೂ ಪ್ರಸ್ತುತದಲ್ಲಿ ಈಗಿನ ನ್ಯಾಯಾಲಯದ ಆದೇಶದಿಂದ ನಡೆಯುವ ಅಪರಾಧಿಗಳಿಗಾಗುವ ನ್ಯಾಯವಿಚಾರಣೆಯಂತೆ ಇರುವುದಿಲ್ಲ. ಅದರಲ್ಲಿ ಸಾಕ್ಷ್ಯಾಧಾರ ಮತ್ತು ವಕೀಲರ ನೆರವಿನಿಂದ ಅಪರಾಧಿ ನಿಜವಾಗಿಯೂ ಅಪರಾಧ ಮಾಡಿದ್ದಾನೆಯೋ, ಹೌದಾದರೆ ಅವನಿಗೆ ಯಾವ ಶಿಕ್ಷೆ ನೀಡಬಹುದು ಎಂದು ನಿರ್ಣಯಿಸಲಾಗುತ್ತದೆ. ಆದರೆ ಲೋಕದ ಸಂತತಿಯವರಿಗೆ ತಪ್ಪುಗಳನ್ನು ಗೌರವಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಮತ್ತು ಮಾನವನು ದೇವರಿಗೆ ಅವಿಧೇಯನಾಗಿದ್ದನೋ ಎಂಬ ಬಗ್ಗೆ ಯಾವುದೇ ವಿಚಾರಣೆಯಾಗಲೀ, ತೀರ್ಪಾಗಲೀ ನಡೆಯದು ಮತ್ತು ದೇವರ ಮರಣ ಶಿಕ್ಷೆಯು ನ್ಯಾಯ ಸಮ್ಮತವಾದುದೋ ಅಲ್ಲವೋ ಎಂದು ನಿಶ್ಚಯಿಸಲಾಗದು.

ಮಿಲೇನಿಯಂ ಯುಗದ ನ್ಯಾಯ ತೀರ್ಪು ಅಥವಾ ವಿಚಾರಣೆಯು ಭಿನ್ನವಾದ ರೀತಿಯಲ್ಲಿರುತ್ತದೆ. ಇದು ಹೆಚ್ಚು ಕಡಿಮೆ ತಂದೆ ತಾಯಿಯರು ಮಕ್ಕಳು ತಪ್ಪು ಮಾಡಿದಾಗ ನೀಡುವ ಪೆಟ್ಟಿನಂತೆ ಇರುತ್ತದೆ. ಪೆಟ್ಟುಕೊಟ್ಟ ಮೇಲೆ ತಂದೆತಾಯಿಗಳು "ನೀನೀಗ ನಿನ್ನ ತಪ್ಪುಗಳನ್ನು ಒಪ್ಪಿ ಕೊಳ್ಳುತ್ತೀಯೋ?, ನಿನಗೆ ಕೊಟ್ಟ ಶಿಕ್ಷೆಯು ನ್ಯಾಯ ಸಮ್ಮತವಾಗಿದೆ ಎಂದು ನೀನು ಒಪ್ಪುತ್ತೀಯೋ? ಇನ್ನು ಮುಂದೆ ನೀನು ವಿಧೇಯ ಮಗುವಾಗಿರುತ್ತೀಯೋ?" ಎಂದು ಕೇಳುತ್ತಾರೆ. ದೃಢವಾದ ಉತ್ತರವು ದೊರೆತ ಮೇಲೆ ತಂದೆ ತಾಯಿಗಳು "ಇನ್ನು ಮುಂದೆ ನೋಡೋಣ, ನಾನಿಂದು ನಿನ್ನನ್ನು ಪರೀಕ್ಷಿಸುತ್ತೇನೆ, ನೀನು

ನಿಜವಾಗಿಯೂ ಪಶ್ಚಾತ್ತಾಪ ಪಟ್ಟಿರುವುದು ಮತ್ತು ನನ್ನ ಇಚ್ಛೆಯಂತೆ ಇರಲು ನಿಷ್ಠೆಯಿಂದ ಬಯಸಿರುವುದು ಕಂಡುಬಂದರೆ, ಸಾಯಂಕಾಲದ ವೇಳೆಗೆ ನಿನ್ನನ್ನು ಪೂರ್ಣವಾದ ಸಾಂಗತ್ಯಕ್ಕೆ ಪುನಃ ಸೇರಿಸಿಕೊಳ್ಳುತ್ತೇನೆ, ನೀನು ತಪ್ಪು ಮಾಡುವ ಮೊದಲು ಹೊಂದಿಕೊಂಡಿದ್ದ ಎಲ್ಲಾ ಸೌಕರ್ಯಗಳನ್ನು ಪುನಃ ನೀನು ಪಡಕೊಳ್ಳುವಿ" ಎಂದು ಹೇಳಬಹುದು. ಮುಂದಿನ ಯುಗದ ವಿಚಾರಣೆ ಅಥವಾ ತೀರ್ಪು ಇದೇ ರೀತಿಯಲ್ಲಿರುತ್ತದೆ. – ಅಪರಾಧ ಪ್ರಪಂಚದ ಯಾವ ಸದಸ್ಯರುಗಳು ಪಾಪದ ಸಂಬಳವಾದ ಮರಣವನ್ನು ಆರು ಸಾವಿರ ವರ್ಷಗಳಕಾಲ ಗೋಳಾಟ ಮತ್ತು ವೇದನೆಗಳೊಡನೆ ಅನುಭವಿಸಿ, ಪಾಪದ ಹೆಚ್ಚಳದಿಂದ ಉಂಟಾಗುವ ಶಿಕ್ಷೆಯ ಬಗ್ಗೆ ಮತ್ತು ನೀತಿವಂತರಿಗೆ ದೊರೆಯುವ ಮಹಾ ಆಶೀರ್ವಾದಗಳ ಬಗ್ಗೆ ಪಾಠಕಲಿತು ಇನ್ನು ಮುಂದೆ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತಕ್ಕೆ ಅನುಸಾರವಾಗಿರುತ್ತಾರೆಂಬುದನ್ನು ಇದು ನಿಶ್ಚಿತಗೊಳಿಸುತ್ತದೆ.

ವಿಧೇಯತೆಯನ್ನು ಪ್ರಾರಂಭದಿಂದಲೇ ಜಾರಿಗೆ ತರಲಾಗುವುದು ಮತ್ತು ಯಾರು ಪ್ರಗತಿ ಹೊಂದಲು ಖಚಿತವಾಗಿ ನಿರಾಕರಿಸುತ್ತಾರೋ ಅಂಥವರನ್ನು ನೂರು ವರ್ಷಗಳ ವಿಚಾರಣೆಯ ನಂತರ ತೆಗೆದು ಹಾಕಲಾಗುವುದು. ಬಾಹ್ಯ ಪ್ರಗತಿಯನ್ನು ಹೊಂದುವವರಿಗೆ, ದೇವರ ರಾಜ್ಯದ ನಿಯಮಗಳಿಗೆ ಹೊರಗಣ ರೀತಿಯಲ್ಲಿ ದೃಢತೆ ತೋರುವವರಿಗೆ ಹಾಗೆಯೇ ಮುಂದುವರೆಲು ಬಿಡಲಾಗುವುದು ಮತ್ತು ಕೃಪೆಯಲ್ಲಿ, ಜ್ಞಾನದಲ್ಲಿ ಮತ್ತು ಪ್ರೀತಿಯಲ್ಲಿ ಬೆಳೆಯುವ ಅವಕಾಶಗಳನ್ನು ನೀಡಲಾಗುವುದು. ಆದರೆ ಮಿಲೇನಿಯಂ ಯುಗದ ಅಂತ್ಯದಲ್ಲಿ ಎಲ್ಲರ ನಿರ್ಣಾಯಕ ವಿಚಾರಣೆಯು ಬರುತ್ತದೆ – ಅವರ ಬಾಹ್ಯ ನಡತೆಗಳಿಗನುಸಾರವಾಗಿ ಅಲ್ಲ. ಅವು ಒಳ್ಳೆಯದಿದ್ದಿರಬಹುದು, ಇಲ್ಲವಾದಲ್ಲಿ ಅವರು ಅವರ ಸ್ಥಾನವನ್ನು ಕಾಪಾಡಿಕೊಳ್ಳಲು ಅಸಾಧ್ಯವಾಗುತ್ತಿತ್ತು. ಮತ್ತು ಈ ಹಿಂದೆಯೇ ಎರಡನೆಯ ಮರಣದಲ್ಲಿ ಜೀವಿತದಿಂದ ತೆಗೆದು ಹಾಕಲ್ಪಡುತ್ತಿದ್ದರು. ಈ ಅಂತಿಮ ಪರೀಕ್ಷೆಯು ನೀತಿವಂತಿಕೆಯ ತತ್ವಗಳ ಬಗ್ಗೆ ಅವರಿಗಿರುವ ಹೃದಯ ನಿಷ್ಠೆಯ ಸಲುವಾಗಿ. ಈ ಬಗ್ಗೆ ಎಲ್ಲರನ್ನೂ ಪರೀಕ್ಷಿಸಲಾಗುವುದು. ಸಮಗ್ರವಾಗಿ ನಿಷ್ಠಾವಂತರು, ವಿಧೇಯರು ಎಂದು ಕಂಡುಬಾರದವರನ್ನು ಎರಡನೆಯ ಮರಣಕ್ಕೆ ಒಪ್ಪಿಸಲಾಗುವುದು – ಆದರೆ ದೇವರ ಅನುಗ್ರಹದಲ್ಲಿ ಮುಂದುವರೆಯುವ ಅವಕಾಶಗಳನ್ನು ಅವರಿಗೆ ನೀಡಲಾಗದು. ಆದರೆ ಈ ರೀತಿಯ ದೈವೇಚ್ಛೆಯು ಎಷ್ಟೊಂದು ಕೃಪಾದಾಯಕ! ಮಾನವರ ಮಕ್ಕಳ ಮೇಲೆ ಪರಲೋಕ ತಂದೆಯು ಮತ್ತು ನಮ್ಮ ವಿಮೋಚಕನು ಮಾಡಿರುವ ಯೋಜನೆಯು ಎಷ್ಟೊಂದು ದೀರ್ಘ ಸಹನೆಯುಳ್ಳದ್ದಾಗಿದೆ! ನಿಶ್ಚಯವಾಗಿಯೂ ಇಂತಹ ಸಹನೆ ಮತ್ತು ದೀರ್ಘ ಸಹಿಷ್ಣುತೆ ಇವುಗಳು ನಿತ್ಯಜೀವಕ್ಕೆ ಅರ್ಹರಾದವರನ್ನು ಕರ್ತನ ಬಳಿಗೆ ಆಕರ್ಷಿಸುವುದಾಗಿದೆ. ಆಗ ಇತರರ ನಾಶದ ಬಗ್ಗೆ ದೇವರ ಚಿತ್ತಾನುಸಾರವಾಗಿರುವವರೆಲ್ಲರೂ ಹೇಳುವುದು– "ದೇವರಾದ ಕರ್ತನೇ, ಸರ್ವ ಶಕ್ತನೇ, ನಿನ್ನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ ನಿಜ" (ಪ್ರಕಟನೆ 16:7) ಎಂಬ ಸ್ಫೂರ್ತಿದಾಯಕ ಮಾತುಗಳನ್ನು ಹೇಳಲು ಸಿದ್ಧರಾಗುತ್ತಾರೆ.

## ಪುನರುತ್ಥಾನವನ್ನು ಹೊಂದಿಕೊಳ್ಳಲು ಯೋಗ್ಯರಾಗಿ ಎಣಿಸಲ್ಪಡುವುದು

## Accounted Worthy to Attain Resurrection

ಈ ದೃಷ್ಟಿಕೋನದಿಂದ ನಾವು "ಆ ಲೋಕವನ್ನೂ ಸತ್ತವರೊಳಗಿಂದ ಪುನರುತ್ಥಾನ ಹೊಂದುವುದಕ್ಕೆ ಯೋಗ್ಯರೂ" (ಲೂಕ 20:35) ಎಂಬ ಕರ್ತನ ಮಾತುಗಳ ಅರ್ಥವನ್ನು ನೋಡಬಹುದಾಗಿದೆ. ಅತ್ಯಂತ ಅಲ್ಪ ಮಂದಿ, ಒಂದು "ಚಿಕ್ಕ ಹಿಂಡು" ಮಾತ್ರವೇ ಸಹಸ್ರ ವರ್ಷಗಳ (ಮಿಲೇನಿಯಂ) ಅವಧಿಗೆ ಮುನ್ನವೇ ಆ ಪರಲೋಕವನ್ನು ಪಡಕೊಳ್ಳಲು ಯೋಗ್ಯರು ಎಂದು ಎಣಿಸಲ್ಪಡುವರು, ಈ ಮಾತುಗಳನ್ನು ಕರ್ತನು ಹೇಳಿದವರನ್ನು ಸೇರಿದಂತೆ ಮನುಕುಲದ ಮಹಾ ಸಮೂಹವು "ಪುನರುತ್ಥಾನಕ್ಕೆ' ನ್ಯಾಯತೀರ್ಪಿನ ಮೂಲಕ ಬರುವರು. ನಂತರದಲ್ಲಿ ತಾವುಗಳು ಪರಿಪೂರ್ಣ ಜೀವಿತಕ್ಕೆ ಯೋಗ್ಯರು ಎಂದು ರುಜುವಾತುಪಡಿಸುವುದು ಅವರಿಗೆ ಬಿಟ್ಟದ್ದು. ಇದು ಮಾತ್ರವೇ ಮಿಲೇನಿಯಂ ಯುಗದ ನಂತರವೂ ಅವರಿಗೆ ಭವಿಷ್ಯದಲ್ಲಿನ ನಿತ್ಯ ನಿರಂತರ ಕಾಲದಲ್ಲಿ ಅನುಭವಿಸಲು ಅನುಮತಿ ನೀಡುತ್ತದೆ. ವಿಧೇಯರು ಮಾತ್ರವೇ ಮರಣದಿಂದ ಪೂರ್ಣವಾಗಿ ಎತ್ತಲ್ಪಟ್ಟು ಪುನರುತ್ಥಾನ ಹೊಂದಿಕೊಳ್ಳಲು ಅನುಮತಿ ಪಡಕೊಳ್ಳುತ್ತಾರೆ. ಇದೊಂದು ಕ್ರಮೇಣವಾದ ಪ್ರಗತಿ ಮತ್ತು ಕ್ರಮೇಣವಾಗಿ ಪಡಕೊಳ್ಳುವಿಕೆ. ನಾವೀಗಾಗಲೇ ಕಂಡುಕೊಂಡಂತೆ, ನಂತರದಲ್ಲಿ ಪರಿಶುದ್ಧ ರಾಜಮಾರ್ಗದಲ್ಲಿ ನಡೆಯುವವರು "ಮೇಲಿಂದ ಮೇಲಕ್ಕೆ" ಹೋಗಲೇಬೇಕು. ಅದೊಂದು ಮೇಲ್ಮುಖವಾಗಿ ಏರುವಂಥ ಮಾರ್ಗವಾಗಿದೆ. "ಮಾನವ ಪರಿಪೂರ್ಣತೆ"ಯಲ್ಲಿ ಕಳೆದುಕೊಂಡ ಎಲ್ಲವನ್ನೂ ಪುನಃಪಡಕೊಂಡು ಜಯಶಾಲಿಗಳಾಗಲು ಮಾಡಬೇಕಾದ ಪ್ರಯತ್ನ ಇದಾಗಿದೆ.

ನಾವು ಈ ದೇವರ ಯೋಜನೆಯ ಲಕ್ಷಣವನ್ನು ನಿಕಟವಾಗಿ ಪರಾಂಬರಿಸುವಾಗ ಅದರ ಸಮಂಜಸತೆ, ಏಕರೂಪತೆ ಮತ್ತು ಅದರ ಹಂಚಿಕೆದಾರರಿಗೆ ಇರುವ ಸೌಕರ್ಯಗಳು ಇವುಗಳ ಬಗ್ಗೆ ಚಕಿತರಾಗುತ್ತೇವೆ. ಉದಾಹರಣೆಗಾಗಿ ಮಿಲೇನಿಯಂ ಯುಗದ ಸೌಕರ್ಯಗಳು ಯಾರಿಗಾಗಿ ಸಿದ್ಧಪಡಿಸಿವೆಯೋ ಅವರುಗಳಿಗೆ ಬೇರೆಯಾವ ಯೋಜನೆಯೂ ಅನುಕೂಲಕರವಾಗಿಲ್ಲ ಎಂಬುದನ್ನು ನಾವು ಈ ಕೂಡಲೇ ನೋಡಬಹುದು. ದೃಷ್ಟಾಂತವಾಗಿ ನೀರೋ ಎಂಬವನನ್ನೇ ತೆಗೆದುಕೊಳ್ಳೋಣ. ಒಂದು ವೇಳೆ ಆತನಿಗೆ ತಕ್ಷಣವಾದ ಪುನರುತ್ಥಾನ ಜೀವಿತವನ್ನು ನೀಡಿರುತ್ತಿದ್ದರೆ – ಒಂದು ವೇಳೆ ಆತನು ಬೌದ್ಧಿಕವಾಗಿ, ನೈತಿಕವಾಗಿ ಮತ್ತು ದೈಹಿಕವಾಗಿ ಪೂರ್ಣವಾದ ಸಮರ್ಪಕತೆಯಿಂದ ಸಮಾಧಿಯಿಂದ ಹೊರಬರುತ್ತಿದ್ದರೆ, ಆತನು ನೀರೋ ಆಗಿರುತ್ತಿದ್ದಿಲ್ಲ. ಅಂಥಹ ಸರ್ವ ಸಂಪೂರ್ಣನಾದ ವ್ಯಕ್ತಿಯೂ ತನ್ನನ್ನು ಎಂದಿಗೂ ಹಿಂದಿನ ನೀರೋನೊಂದಿಗೆ ಗುರುತಿಸಿಕೊಳ್ಳಲಾರನು. ಆತನ ಸಂಗಡಿಗರಲ್ಲಿ ಯಾರೂ ಆತನನ್ನು ಗುರುತಿಸಲಾರರು. ಆತನು ಸರ್ವ ಸಮರ್ಪಕವಾದ ಮಾನವ ಶರೀರ ರಚನೆಯನ್ನು ಹೊಂದಿದ್ದು, ಮನದಲ್ಲಿಯೂ, ಗುಣಲಕ್ಷಣಗಳಲ್ಲಿಯೂ ಇನ್ನೂ ಅಸಮರ್ಪಕವಾಗಿರುತ್ತಾನೆಂದು ನಾವು ಸಹಾ ಊಹಿಸಿ ಕೊಳ್ಳಲು ಸಾಧ್ಯವಿಲ್ಲ. ಶರೀರ ವಿಜ್ಞಾನದ

ಪ್ರಥಮ ತತ್ವಗಳನ್ನು ಕಲಿತ ಎಲ್ಲರೂ ಇಂಥಹ ಪ್ರಸ್ತಾಪದಲ್ಲಿ ಅಡಕವಾಗಿರುವ ಅಸಂಬದ್ಧತೆಯನ್ನು ತಕ್ಷಣದಲ್ಲಿ ಕಂಡುಕೊಳ್ಳಬೇಕು. ಆ ನಿಯಮಗಳು ನಮಗೆ ನಿರ್ಧಿಷ್ಟವಾಗಿ ಶರೀರ ಮತ್ತು ಗುಣಲಕ್ಷಣ ಇವುಗಳು ಒಂದೇ ಆಗಿರುತ್ತವೆ ಎಂಬುದನ್ನು ಬೋಧಿಸುತ್ತವೆ. ಸಮರ್ಪಕವಾದ ದೇಹ ರಚನೆಯು ಖಂಡಿತವಾಗಿಯೂ ಸಮರ್ಪಕವಾದ ಗುಣಲಕ್ಷಣಗಳನ್ನು ಸೂಚಿಸುತ್ತದೆ. ಆದರೆ ನಾವು ಒಂದು ಕ್ಷಣ ಈ ಅಸಮಂಜಸವಾದ ಪ್ರಸ್ತಾಪಗಳಲ್ಲಿ ಯಾವುದನ್ನಾದರೂ ಊಹಿಸುವುದಾದಲ್ಲಿ ಸಮರ್ಪಕವಾದ ವ್ಯಕ್ತಿಯ ವಿಧೇಯತೆ ಅಥವಾ ಅವಿಧೇಯತೆಯನ್ನು ಪರೀಕ್ಷಿಸಲು ಸಾವಿರ ವರ್ಷಗಳು ಬಹು ದೀರ್ಘವಾದ ಕಾಲಾವಧಿ ಎಂಬ ಆಕ್ಷೇಪಣೆಯನ್ನು ಕೂಡಲೇ ಎದುರಿಸಬೇಕಾಗುತ್ತದೆ. ಸರ್ವ ಸಂಪೂರ್ಣ ವ್ಯಕ್ತಿಯಾಗಿದ್ದ ಆದಾಮನಿಗೆ ಅಲ್ಪಾವಧಿ ವಿಚಾರಣೆ ನಡೆಯಿತು ಎಂಬುದಾಗಿ ನಾವು ದೇವರ ಪರಿಶುದ್ಧ ಗ್ರಂಥಗಳಿಂದ ತಿಳುಕೊಳ್ಳುತ್ತೇವೆ. ಇನ್ನೂ ಮುಂದುವರೆದು, ಸಮರ್ಪಕವಾದ ಪ್ರಪಂಚವು ನ್ಯಾಯ ವಿಚಾರಣೆಗೆ ಒಳಗಾಗಿದೆ ಎಂದು ನಾವು ಊಹಿಸುವುದಾದರೆ ಅವರು ಸಮರ್ಪಕವಾದ ಕಾನೂನುಗಳಿಗೆ ಬದ್ಧರಾಗಿದ್ದಾರೆಂದು ಅಂದಾಜಿಸುವ ಹಂಗಿನಲ್ಲಿರುತ್ತೇವೆ.

ಯಾವುದೇ ಅಸಮರ್ಪಕತೆಗಳು ಇಲ್ಲದೆ ಅವರುಗಳೂ ಸಹ ಯಾವುದೇ ಅಡ್ಡತೆರೆ ಅಥವಾ ದೋಷಗಳಿಂದ ಕವಿದು ಕೊಂಡಿರುವವರಲ್ಲ. ಆದುದರಿಂದ ಅವರು ನ್ಯಾಯ ವಿಚಾರಣೆಯ ಪ್ರಾರಂಭದಲ್ಲಿ ಆದಾಮನು ಇದ್ದ ಪರಿಸ್ಥಿತಿಯಲ್ಲಿಯೇ ಇನ್ನೂ ಇರುತ್ತಾರೆ. ಈ ದೃಷ್ಟಿಯಲ್ಲಿ ಕ್ರಿಸ್ತನ ಮಧ್ಯಸ್ಥಿಕತೆಯ ರಾಜ್ಯಭಾರವಾಗಲೀ, ಸಹಸ್ರ ವರ್ಷದ ಆಳ್ವಿಕೆಯಾಗಲೀ ಅಗತ್ಯವಿಲ್ಲ. ಯಾಕೆಂದರೆ, ಸಮರ್ಪಕವಾದ ನಿಯಮವು ಆರಂಭದಲ್ಲಿ ಆದಾಮನೊಡನೆ ವ್ಯವಹರಿಸಿದ ದೇವರ ಅದೇ ನ್ಯಾಯಬದ್ಧತೆಯನ್ನು ಪ್ರತಿನಿಧಿಸುತ್ತದೆ. ಅದುವೇ ಕಡೆಯವರೆಗೂ – ಮಿಲೇನಿಯಂ ಯುಗದ ಅಂತ್ಯದವರೆಗೂ ಮಾನವ ಜಾತಿಯಮೇಲೆ ಸಾಗಬೇಕಾಗಿದೆ. ಮೊದಲಿಗೆ ನಿತ್ಯನಿರಂತರವಾದ ಭಾಗ್ಯಕ್ಕೆ ಲೋಕವು ದೇವರಿಂದ ಅಂಗೀಕೃತವಾಗುತ್ತದೆ. ಅಂಥಹ ದೃಷ್ಟಿಕೋನವು ದೇವರ ವ್ಯವಸ್ಥೆಗೆ ಸಂಪೂರ್ಣ ಭಿನ್ನವಾಗಿರುವುದನ್ನು ನಾವು ಕಾಣಬಹುದು.

ನಾವೀಗ ನೀತಿನಿರ್ಣಯದ ಮೂಲಕ ಪುನರುತ್ಥಾನದ ದೇವರ ಯೋಜನೆಯ ಸೌಂದರ್ಯ, ಸಾಮರಸ್ಯತೆ ಮತ್ತು ಯುಕ್ತತೆಯನ್ನು ಗಮನಿಸೋಣ. (1) ಲೋಕದವರು ಈಗ ಕಾರ್ಯತಃ ಅವರು ಸಮಾಧಿಯನ್ನು ಸೇರಿದ ಅದೇ ಮಾನಸಿಕ, ನೈತಿಕ ಮತ್ತು ದೈಹಿಕ ಸ್ಥಿತಿಯಲ್ಲಿಯೇ ಮುಂದೆ ಎದ್ದು ಬರುತ್ತಾರೆ ಮತ್ತು ಕ್ಷಣಮಾತ್ರದಲ್ಲಿ ತಮ್ಮನ್ನು ವೈಯುಕ್ತಿಕವಾಗಿ ಮತ್ತು ಇತರರ ಸಂಬಂಧಗಳೊಡನೆ ಗುರುತಿಸಿಕೊಳ್ಳುತ್ತಾರೆ. "ಮರವು ಬಿದ್ದರೆ ಬಿದ್ದ ಹಾಗೆಯೇ ಇರುವುದು" (ಪ್ರಸಂಗಿ 11:3) ಎಂಬಂತೆ ಎಚ್ಚರಗೊಳ್ಳುವುದು ಅಥವಾ ಕರೆಯಲ್ಪಡುವುದು ನಿದ್ರೆಯು ಮುಗಿದಂತೆ ಇರುತ್ತದೆ. ಇದೇ ಸಮಾನಾರ್ಥದಲ್ಲಿ ದೇವರು ಕ್ರಿಸ್ತನ ಶರೀರವನ್ನು ಮಾತ್ರವಲ್ಲದೆ ಸಾಮಾನ್ಯವಾಗಿ ಲೋಕದವರೆಲ್ಲರಿಗೂ ಉಪಯೋಗಿಸುವನು. ಅವರ ಮುಂದಣ ಎಬ್ಬಿಸುವಿಕೆಯು ಆತನ ಯೋಜನೆಯ ಭಾಗವಾಗಿದೆ. ಇದನ್ನು ನಿದ್ರೆಯಿಂದ ಎಚ್ಚರಗೊಳ್ಳುವುದು ಎಂದು ಮಾತನಾಡುತ್ತಾರೆ. ನಿದ್ರೆಯಿಂದ ಎಚ್ಚತ್ತುಕೊಳ್ಳುವವರು ತಮ್ಮನ್ನು ಕಾರ್ಯತಃ ತಾವು ಮಲಗಿದ್ದ ಅದೇ ಸ್ಥಿತಿಯಲ್ಲಿ ಮತ್ತು ಸ್ವಲ್ಪ ಚೇತನಗೊಂಡಂತೆ ತಿಳುಕೊಂಡು ಮತ್ತು ನಿದ್ರಿಸುವ ಮೊದಲು ನಡೆದ ಸಂಗತಿಗಳನ್ನು ತಮ್ಮ ನೆನಪಿಗೆ ತರುವಂತೆ "ಮನುಷ್ಯಕುಮಾರನು ಹಿಂತಿರುಗಿ ಬರುವಾಗ ಆತನ ಧ್ವನಿಯನ್ನು ಕೇಳಿಸಿಕೊಂಡು" ಎಚ್ಚರಗೊಳ್ಳುವಂತೆ ಸಾಮಾನ್ಯ ಲೋಕದವರಿಗೂ ಮಾಡುತ್ತಾನೆಂದು ನಾವು ನಂಬುತ್ತೇವೆ.

ಅವರುಗಳು ನಿಖರವಾಗಿ ತಾವು ಮರಣಹೊಂದಿದಾಗಿನ ಶಾರೀರಿಕ ಪರಿಸ್ಥಿತಿಯಲ್ಲೇ ಎದ್ದು ಬರುವರು ಎಂಬುದು ನಮ್ಮ ಅರ್ಥವಲ್ಲ, ಯಾಕೆಂದರೆ, ಈ ಲೋಕವು ಅಸಂಬದ್ಧತೆಗೆ ತುತ್ತಾಗಿದೆ. ಉದಾಹರಣೆಗೆ, ಒಬ್ಬಾತನು ಕಡೆ ಉಸಿರು ಎಳೆಯುವಾಗ ಆತನ ಶ್ವಾಸಕೋಶವು ಹಾಳಾಗಿತ್ತಾದರೆ ಅವನು ಅದೇ ಸ್ಥಿತಿಯಲ್ಲಿ ಅಂದರೆ ಶ್ವಾಸಕೋಶ ಇಲ್ಲದವನಾಗಿ ಏದುಸಿರು ಬಿಡುತ್ತಾ ಎದ್ದು ಬರುವುದಿಲ್ಲ. ತನ್ನ ತಲೆಕಡಿಯಲ್ಪಟ್ಟು ಮರಣ ಹೊಂದಿದವನು ಎದ್ದು ಬರುವಾಗ ತಲೆ ಇಲ್ಲದವನಾಗಿ ಎದ್ದುಬರುವುದಿಲ್ಲ. ಅದರಂತೆ ತನ್ನ ತೋಳುಗಳನ್ನು, ಕಾಲುಗಳನ್ನು ಕೈ ಅಥವಾ ಕಾಲು ಬೆರಳುಗಳನ್ನು ಕಳಕೊಂಡು ಮರಣಹೊಂದಿದವರು ಅವುಗಳಿಲ್ಲದವರಾಗಿ ಎದ್ದು ಬರುವುದಿಲ್ಲ. ನಮ್ಮ ತೀರ್ಮಾನವನ್ನು ನಿರ್ದೇಶಿಸಲು ದೇವರ ವಾಕ್ಯದಲ್ಲಿ ಯಾವುದೇ ಖಚಿತವಾದ ಅಧಾರಗಳು ಇಲ್ಲವಾದರೂ ನಾವು ಮುಂಬರುವ ಲೋಕವು ಸಹಾ ಈಗಿರುವ ಸರಾಸರಿ ಆರೋಗ್ಯ ಮತ್ತು ಬಲವನ್ನು ಹೊಂದಿರುತ್ತದೆ ಎಂದು ಊಹಿಸಬಹುದು. ಅಂತಹ ಸಂಧರ್ಭವಾಗಿ ಕರ್ತನು ಅನೇಕರನ್ನು ತನ್ನ ಮೊದಲನೆಯ ಆಗಮನದಲ್ಲಿ ಸಂತೋಷವಾಗಿ ಗುಣಪಡಿಸಿರುತ್ತಾನೆ. ಗುಣ ಹೊಂದಿಕೊಂಡವರನ್ನು ಸಂಪೂರ್ಣರನ್ನಾಗಿ ಮಾಡಲಿಲ್ಲ, ಇಲ್ಲವಾದಲ್ಲಿ ಅವರಲ್ಲಿ ಅನೇಕರು ಸಮರ್ಪಕನಾದ ಆದಾಮನು ಜೀವಿಸಿದಂತೆ ಶತಮಾನಗಳ ಕಾಲ ಜೀವಿಸಬಹುದಿತ್ತು. ಬದಲಾಗಿ ಈ ಪುನರ್‌ವಶವು ಅವರಿಗೆ ಸಾಮಾನ್ಯವಾದ ಆರೋಗ್ಯ ಮತ್ತು ಶಕ್ತಿಯನ್ನು ಮಾತ್ರವೇ ನೀಡುವುದಾಗಿತ್ತು. ಅದರಂತೆಯೇ ಎಚ್ಚರಿಸುವ ಕಾಲದಲ್ಲಿಯೂ ಇರುತ್ತದೆ. ಆಗ ಅದೇ ಸ್ವರವು ಅವರನ್ನು ಮರಣವೆಂಬ ನಿದ್ರೆಯಿಂದ ಎಚ್ಚರಿಸುತ್ತದೆ. ಅವರು ಆಗ ಆತನ ಮಾತುಗಳನ್ನು ಕೇಳಿಸಿಕೊಂಡು ಅವುಗಳಿಗೆ ವಿಧೇಯರಾಗುವುದರಿಂದ ನಿತ್ಯಜೀವವನ್ನು ಮತ್ತು ಕ್ರಮೇಣವಾಗಿ ಅದರಿಂದುಂಟಾಗುವ ದೇಹ ಮತ್ತು ಮನಸ್ಸಿನ ಪರಿಪೂರ್ಣತೆಯನ್ನು ಹೊಂದಿಕೊಳ್ಳಬಹುದು. ಇದಕ್ಕಾಗಿ ಆತನು ಪುನಃವಶದ ಕಾಲವನ್ನು, ಶಿಸ್ತುಬದ್ಧವಾದ, ನ್ಯಾಯತೀರ್ಪುಗಳುಳ್ಳ ಮತ್ತು ಆಶೀರ್ವಾದಭರಿತವಾದ ರಾಜ್ಯವನ್ನು ವ್ಯವಸ್ಥೆ ಮಾಡಿರುತ್ತಾನೆ.

ಅವರು ಮರಣಕ್ಕೆ ಬಿದ್ದ ಸ್ಥಳದಿಂದ ಅವರ ಇರುವಿಕೆಯ ಎಳೆಗಳನ್ನು ತೆಗೆದುಕೊಳ್ಳಲಾಗುವುದು, ಅನುಭವಗಳನ್ನು ಹೆಣೆಯಲಾಗುವುದು. ಇದು ತ್ವರಿತವಾಗಿ ಮುಂದುವರೆದು ಹೊಸ ಪರಿಸ್ಥಿತಿಯೊಂದಕ್ಕೆ ಹೊಂದಿಕೊಳ್ಳುವುದು. ಅದೇ ಸಮಯದಲ್ಲಿ ಆ ವ್ಯಕ್ತಿಯು ತನ್ನ ಅನ್ಯೋನ್ಯತೆಯನ್ನಾಗಲೀ, ತಾನು ಭಾಗವಾಗಿದ್ದ ಲೋಕದ ಮತ್ತು ಸಮಾಜದ

ಸುತ್ತುಬಳಿಕೆಯನ್ನಾಗಲೀ ಕಳಕೊಳ್ಳುವುದಿಲ್ಲ. ಈ ರೀತಿಯಲ್ಲಿ ಪಾಪ ಮತ್ತು ಸ್ವಾರ್ಥದೊಂದಿಗಿನ ಹಿಂದಿನ ಅನುಭವವು ಒಂದು ಬೆಲೆಬಾಳುವ ಜ್ಞಾನದ ಸ್ವತ್ತಾಗುತ್ತದೆ ಮತ್ತು ಭವಿಷ್ಯದಲ್ಲಿ ಸರಿಯಾದ ಅಂದಾಜು ಮಾಡಲು ಸಹಕಾರಿಯಾಗುತ್ತದೆ. ಪುನರುಜ್ಜೀವಿಯು ನೀತಿವಂತಿಕೆ ಆಳ್ವಿಕೆಯಲ್ಲಿ ಕ್ರೂಢೀಕರಿಸಿದ ಅನುಕೂಲತೆಗಳನ್ನು ತಾನು ಈ ಹಿಂದೆ ಪಾಪ ಮತ್ತು ಮರಣದಲ್ಲಿ ಸಂಪಾದಿಸಿದವುಗಳಿಗಿಂತ ಹೆಚ್ಚಾಗಿ ಮೆಚ್ಚಿಕೊಳ್ಳುತ್ತಾನೆ. ಅವುಗಳು ಆತನ ಅನುಕೂಲತೆಗಳಿಗಾಗಿಯೂ ಇರುತ್ತವೆ. ಆದರೆ ಆತನು ಮೊದಲಿಗೆ ರಾಜನಾದ ಕ್ರಿಸ್ತನನ್ನು ತನ್ನ ವಿಮೋಚಕನೆಂದು ಅಂಗೀಕರಿಸಬೇಕು, ತನ್ನ ಸ್ವಂತ ಬಲಹೀನತೆಗಳನ್ನು, ಅಸಮರ್ಪಕತೆಗಳನ್ನು ಮತ್ತು ಅಯೋಗ್ಯತೆಯನ್ನು ಒಪ್ಪಿಕೊಳ್ಳಬೇಕು. ಪರಿಶುದ್ಧ ರಾಜಮಾರ್ಗದಲ್ಲಿ ನಡೆಯಲು ಪ್ರಾರಂಭಿಸುವ ಮೊದಲು ಜೀವದಾಯಕನ ಮೇಲೆ ಆತುಕೊಳ್ಳಬೇಕು. ತನ್ನ ಸ್ವಂತ ಬಲಹೀನತೆಗಳನ್ನು ಗೆದ್ದುಕೊಳ್ಳಲು, ಮತ್ತು ಆತನ ಮುಂದಿಟ್ಟಿರುವ ಗುರಿಯಾದ ಸರ್ವ ಸಂಪೂರ್ಣತೆಯನ್ನು ಸಂಪಾದಿಸಿಕೊಳ್ಳಲು ತಾನಾಗಿಯೇ ಮುಂದುವರೆಯುವುದು ಸಹಾ ಆತನ ಅನುಕೂಲತೆಗಾಗಿಯೇ ಅದೆ.

ಈ ರೀತಿಯಾಗಿ ಸಂಪಾದಿಸಿದ ಅನುಭವದ ಪಾಠಗಳು ಆತನ ನೆನಪಿನಲ್ಲಿ, ಆತನ ಸ್ವಭಾವದಲ್ಲಿ ಕೆತ್ತಲ್ಪಡುತ್ತದೆ ಮತ್ತು ಮಿಲೇನಿಯಂ ಯುಗದ ಅಂತಿಮ ಪರೀಕ್ಷೆಗೆ ಆತನನ್ನು ಸಿದ್ಧಪಡಿಸುವುದಾಗಿದೆ. ಆಗ ಸಂಪೂರ್ಣವಾದ ಹೃದಯ ನಿಷ್ಠೆಯ ಅಗತ್ಯವಿರುತ್ತದೆ. ಅದೇ ಸಮಯದಲ್ಲಿ, ಆತನ ಅಸಮರ್ಪಕತೆಗಳು ಹೇಗೂ ಆತನ ಕೆಡುಕಿಗಾಗಲೀ, ಅಡಚಣೆಗಾಗಲೀ ಕಾರ್ಯವೆಸಗುವುದಿಲ್ಲ. ಆತನ ಗುಣಲಕ್ಷಣಗಳ ಬಲಹೀನತೆ ಅಥವಾ ಶಕ್ತಿಯ ಪ್ರಮಾಣವು ನ್ಯಾಯಾಧಿಪತಿಗಳ ಅಗತ್ಯವಾಗಿದ್ದು ಅವರಾದರೋ ತಮ್ಮ ಸ್ವಂತ ಅನುಭವವಾದ ಪಾಪ ಮತ್ತು ಬಲಹೀನತೆಯಿಂದ ತಯಾರಾಗಿ, ಸಹಾನುಭೂತಿಯಿಂದ ತೀರ್ಪು ನೀಡಿ ನಿಜವಾಗಿಯೂ ಉಪಯುಕ್ತರಾಗಿರುತ್ತಾರೆ. ಕ್ರಮೇಣ ಸ್ವಸ್ಥಮಾಡುವ ದೇವರ ಯೋಜನೆ– "ನ್ಯಾಯತೀರ್ಪಿನ ಮೂಲಕ ಪುನರುತ್ಥಾನ" ಎಂಬುದು ಇರದಿದ್ದರೆ ನ್ಯಾಯಾಧಿಪತಿಗಳಿಗೆ ಅಂಥಹ ಅನುಭವದ ಅವಶ್ಯಕತೆ ಇರುತ್ತಿರಲಿಲ್ಲ.

ಈ ದೃಷ್ಟಿಕೋನವು ಪ್ರವಾದಿಯಾದ ದಾನಿಯೇಲನ ದೈವಿಕ ಹೇಳಿಕೆಯ ಅನುಸಾರವಾಗಿಯೇ ಅದೆ. ಆತನು ಪುನರುತ್ಥಾನದ ಬಗ್ಗೆ "ದೂಳಿನ ನೆಲದೊಳಗೆ ದೀರ್ಘ ನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನನಿತ್ಯ ತಿರಸ್ಕಾರಗಳನ್ನು ಅನುಭವಿಸುವರು" (ದಾನಿ 12:2) ಎಂದು ಹೇಳಿದ್ದಾನೆ. ಇಲ್ಲಿಯೂ ಸಹಾ ನಾವು ಸತ್ತವರಿಂದ ಎಚ್ಚೆತ್ತುಕೊಂಡವರಲ್ಲಿ ನಮ್ಮ ಕರ್ತನು ನಿರ್ದಿಷ್ಟವಾಗಿ ವಿವರಿಸಿದ ಅದೇ ರೀತಿಯ ವಿಭಜನೆಯನ್ನು ನೋಡುತ್ತೇವೆ. ಒಂದು ವರ್ಗದವರು ಜೀವಕ್ಕಾಗಿ ಅದರ ಸಂಪೂರ್ಣವಾದ ಅರ್ಥದಲ್ಲಿ ಅಂದರೆ ಶಾಶ್ವತ ಜೀವನಕ್ಕಾಗಿ ಎದ್ದುಬರುತ್ತಾರೆ; ಮತ್ತೊಂದು ವರ್ಗದವರು ಎಚ್ಚೆತ್ತುಕೊಳ್ಳುತ್ತಾರೆ – ಆದರೆ ಜೀವಕ್ಕಾಗಿ ಅಲ್ಲ. ಎಚ್ಚೆತ್ತುಕೊಂಡಾಗಲೂ ಅವರಿನ್ನೂ ಸತ್ತಂತೆಯೇ ಇರುತ್ತಾರೆ – ಯಾಕೆಂದರೆ ಅವರುಗಳು ದೇವರಿಂದ ಸ್ವೀಕೃತರಾದವರಲ್ಲ – ಆತನ ಮಗನೊಂದಿಗೆ ಮಹತ್ವವಾಗಿ ಸಂಪರ್ಕ ಹೊಂದಿದವರಲ್ಲ ಯಾಕೆಂದರೆ " ಆತನ ಮಗನನ್ನು ಹೊಂದಿದವರು ಜೀವವನ್ನು ಹೊಂದಿಕೊಳ್ಳುತ್ತಾರೆ, ಇಲ್ಲದವರು ಜೀವವನ್ನು ನೋಡುವುದಿಲ್ಲ" ಆಗ ಎಚ್ಚೆತ್ತುಕೊಂಡ ಈ ಲೋಕವು ಸಾಮಾನ್ಯವಾಗಿ ಜೀವವೂ ಮತ್ತು ಪೂರ್ವಸ್ಥಿತಿ ಪ್ರಾಪ್ತಿಯು, ಮಹಾ ಪ್ರವಾದಿಯೂ, ಮಹಾ ಯಾಜಕನೂ, ಮಹಾರಾಜನೂ ಆದ ಜೀವದಾಯಕನು ತನ್ನ ಶಕ್ತಿ ಮತ್ತು ಮಹಿಮೆಯೊಡನೆ ಕೈಕೊಂಡ ಈಡುಬಲಿ ಎಂಬ ಮಹಾ ತ್ಯಾಗದ ಮೂಲಕ ದೇವರ ಕೃಪೆಯಿಂದ ಒದಗಿ ಬರುತ್ತವೆ ಎಂಬ ತಿಳುವಳಿಕೆಗೆ ಬರುತ್ತಾರೆ. ಆತನ ಬಳಿಗೆ ಬರುವುದರ ಮೂಲಕ ಅವರು ಹಂತ ಹಂತವಾಗಿ ನಿತ್ಯಜೀವವನ್ನು ಹೊಂದಿಕೊಳ್ಳಬಹುದಾಗಿದೆ.

"ಕೆಲವರು ನಿಂದನನಿತ್ಯ ತಿರಸ್ಕಾರಗಳನ್ನು ಅನುಭವಿಸುವರು" ಎಂಬ ಎರಡನೆಯ ವರ್ಗದವರ ಬಗ್ಗೆ ಪ್ರವಾದಿಯ ಹೇಳಿಕೆಯು ಪರಿಣಾಮಕಾರಿಯಾದುದು. ಅವರು ಸಮರ್ಪಕರಾಗಿ ಬಂದಲ್ಲಿ ಯಾವುದೇ ನಾಚಿಕೆಗೇಡಿನ ಅಥವಾ ತಿರಸ್ಕಾರಾರ್ಹ ಪರಿಸ್ಥಿತಿ ಇರುವುದಿಲ್ಲ. ಯಾಕೆಂದರೆ ಸರ್ವ ಸಂಪೂರ್ಣತೆ ಅಥವಾ ಸಮರ್ಪಕತೆಯನ್ನು ಯಾವಾಗಲೂ ಮೆಚ್ಚಿಕೊಳ್ಳಲಾಗುವುದು. ಆದುದರಿಂದ, ಈ ಮಾತುಗಳು ಅವರುಗಳು ಅಸಮರ್ಪಕರಾಗಿಯೇ ಎದ್ದು ಬರುತ್ತಾರೆ ಎಂಬುದನ್ನು ಪ್ರಮಾಣೀಕರಿಸುತ್ತದೆ ಮತ್ತು ನಮ್ಮ ಕರ್ತನು ಸೇರಿಸಿದ ವಿವರಣೆಯು ಸಹಾ ಅವರುಗಳು ಅಸಮರ್ಪಕರಾಗಿ ಎದ್ದು ಬರುವರು ಎಂಬುದನ್ನು ದೃಢೀಕರಿಸುತ್ತದೆ. ಅವರುಗಳು ಪುನರುತ್ಥಾನ ಹೊಂದಿದಾಗ ಅವರನ್ನು ಒಳಪಡಿಸುವ ನ್ಯಾಯವಿಚಾರಣೆಯಲ್ಲಿ ಅಥವಾ ನ್ಯಾಯತೀರ್ಪಿನಲ್ಲಿ ದೊರೆಯುವ ದಂಡನೆಯ ಮೂಲಕ ತಮ್ಮ ಅವಿಧೇಯತೆ ಯನ್ನು ಸರಿಪಡಿಸಿಕೊಳ್ಳುವುದಾದಲ್ಲಿ 'ಪರಿಪೂರ್ಣತೆ' ಮತ್ತು 'ನಿತ್ಯಜೀವಕ್ಕಾಗಿ ಪುನರುತ್ಥಾನ' ಈ ಪ್ರತಿಫಲಗಳು ಅವರಿಗೂ ದೊರೆಯಬಹುದಾಗಿದೆ.

ನಾವೀಗಾಗಲೇ ನೀರೋ ಚಕ್ರವರ್ತಿಯನ್ನು ಒಂದು ದೃಷ್ಟಾಂತವಾಗಿ ಉಪಯೋಗಿಸಿದ್ದೇವೆ. ಆತನು ಖಂಡಿತವಾಗಿಯೂ ನಿಂದನೆ, ತಿರಸ್ಕಾರ ಮತ್ತು ಅವಮಾನವನ್ನು ಅನುಭವಿಸಿ ಎದ್ದು ಬರುವ ವ್ಯಕ್ತಿಯಾಗಿದ್ದಾನೆ. ನಾವು ಆತನನ್ನು ಮುಂದಿನ ಉದಾಹರಣೆಯಲ್ಲಿಯೂ ಉಪಯೋಗಿಸಬಹುದು. ನಿದ್ರಿಸುವ ಲೋಕವು ಎಚ್ಚರಗೊಳ್ಳುವುದು ಪ್ರಸ್ತುತ ಸಂತಾನವು ರಾಜ್ಯದ ಅಧಿಕಾರವ್ಯಾಪ್ತಿಗೆ, ಗಣನೀಯವಾದ ನೀತಿವಂತಿಕೆಯ ಮತ್ತು ಬುದ್ದಿವಂತಿಕೆಯ ಮಟ್ಟಕ್ಕೆ ಬರುವವರೆಗೆ ಪ್ರಾರಂಭವಾಗುವುದಿಲ್ಲ ಎಂಬುದನ್ನು ನಾವು ನೆನಪುಮಾಡುವಾಗ, ನಾವು ಕೂಡಲೇ ನೀರೋ ಎಚ್ಚತ್ತು ಬರುವಾಗ ತಾನು ಸತ್ತಾಗ ಇದ್ದದ್ದುಕ್ಕಿಂತ ವಿಭಿನ್ನವಾದ ಒಂದು ಸಾಮಾಜಿಕ ಪರಿಸ್ಥಿತಿಯ ಮಧ್ಯೆ ಇರುವುದನ್ನು ಕಂಡುಕೊಳ್ಳುತ್ತಾನೆ. ಆತನು ಅಭ್ಯಾಸಮಾಡಿದ ಮತ್ತು ಬೆಳೆಸಿದ ದುರ್ಗುಣಗಳು ಬಹಳಷ್ಟು ಕಳಂಕವುಳ್ಳವುಗಳು ಮತ್ತು ಆತನು ಗೊಡವಗೆ ಹೋಗದ ಮತ್ತು ಕಿರುಕುಳ ನೀಡಿದ, ಸದ್ಗುಣಗಳು ಸರ್ವೆಸಾಮಾನ್ಯ ಉಪಕಾರ ಮಾಡುವ ಅಧಿಕಾರದಲ್ಲಿ ಸ್ಥಾಪಿಸಲ್ಪಟ್ಟಿರುವುದನ್ನು ಕಾಣುತ್ತಾನೆ. ಆತನು ತನಗಿಂತ ಕಡಿಮೆ ಸ್ವಚ್ಛಂದವರಿಗಿಂತಲೂ, ಕಡಿಮೆ ಲಂಪಟವಾದವರಿಗಿಂತಲೂ,

ಕಡಿಮೆ ದುರಾಚಾರಿಗಳಿಗಿಂತಲೂ, ಕಡಿಮೆ ನಿಕೃಷ್ಟರಿಗಿಂತಲೂ ಹೆಚ್ಚಾಗಿ ಪೂರ್ಣವಾಗಿ ತನ್ನ ಸುತ್ತಮುತ್ತಲಿನ ಬಗ್ಗೆ ಹೊಂದಿಕೊಳ್ಳದವನಾಗುತ್ತಾನೆ ಎಂದು ನೋಡಬಹುದು. ಆತನು ತಾನು ಚರಿತ್ರೆಯ ಪುಟಗಳ ಮೂಲಕ ಎಲ್ಲರಿಗೂ ಚಿರಪರಿಚಿತನಾಗಿರುತ್ತೇನೆಂದೂ ಆದರೆ ತನ್ನ ಅಧಿಕಾರ ಮತ್ತು ಅವಕಾಶಗಳ ದುರುಪಯೋಗದಿಂದಾಗಿ – ತನ್ನ ಸ್ವಂತ ತಾಯಿಯನ್ನು ಹತ್ಯೆಗೈದದ್ದು ಮಾತ್ರವಲ್ಲ, ದೇವರ ನಿಷ್ಠಾವಂತ ಭಕ್ತರನ್ನು ಹಿಂಸಿಸುವುದರ ಮೂಲಕ ಸಾಮಾನ್ಯವಾಗಿ ತಿರಸ್ಕೃತನಾಗಿದ್ದೆನೆಂದೂ ತಿಳಿದುಕೊಳ್ಳುತ್ತಾನೆ.

ಒಳ್ಳೆಯ ಮತ್ತು ಸದ್ಗುಣಗಳನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥಹ ಗುಣಗಳಿಂದ ತನ್ನ "ತಿರಸ್ಕರಣೀಯುವಾದ" ಸಂಧರ್ಭಗಳಲ್ಲಿ ಹೆಚ್ಚಿನ "ಅಪಮಾನಕ್ಕೊಳಗಾಗುವುದು" ನಿಶ್ಚಿತ. ಹೀಗಿದ್ದಾಗ್ಯೂ ಆತನು ತೀರ್ಪಿಗಾಗಿ ಪುನರುತ್ಥಾನದಲ್ಲಿ ಎದ್ದು ಬರುತ್ತಾನೆ – ಮತ್ತು ಆ ನಾಚಿಕೆಗೇಡು ಮತ್ತು ನಿಕೃಷ್ಟ ಪರಿಸ್ಥಿತಿಯಿಂದ ಅಭ್ಯುದಯದ ಅವಕಾಶದ ಉದ್ದೇಶದೊಂದಿಗೆ ಒಡಂಬಟ್ಟು ಮಾನವ ಸ್ವಭಾವದ ಪರಿಪೂರ್ಣತೆಯ ಸ್ಥಿತಿಯಲ್ಲಿ ಎದ್ದೇಳುತ್ತಾನೆ. ಎಷ್ಟರ ಮಟ್ಟಿಗೆ ಆತನು ತನ್ನ ಜೀವವನ್ನು ಪಡಕೊಳ್ಳುತ್ತಾನೆ, ಎಷ್ಟರ ಮಟ್ಟಿಗೆ ಆತನು ಮರಣದಿಂದ ಪುನರುತ್ಥಾನ ಹೊಂದಿಕೊಳ್ಳುತ್ತಾನೆ ಎಂಬುದು ಆತನ ಮೇಲೆಯೇ ಅವಲಂಬಿಸಿವೆ. ಮೊಟ್ಟಮೊದಲಿಗೆ ಆತನು ಸತ್ಯವನ್ನು ಅರಿತುಕೊಳ್ಳಬೇಕು; ಆತನು ತನ್ನನ್ನು ತಾನು ನಿಜವಾದ ಸ್ಥಿತಿಯಲ್ಲಿ ಕಂಡುಕೊಳ್ಳಬೇಕು, ಆತನು ಆ ಕಾಲದ 'ರಾಜಕುಮಾರರು'ಗಳಂತಿದ್ದ ಪುರಾತನ ಪಿತೃಗಳಲ್ಲಿ ಪ್ರತಿನಿಧಿಸುವ ಸಮರ್ಪಕ ವ್ಯಕ್ತಿಯೊಂದಿಗಿರುವ ತನ್ನ ವ್ಯತ್ಯಾಸವನ್ನು ಗುರುತಿಸಬೇಕು. ಆತನು ಇಂದಿನ ನೀತಿವಂತಿಕೆಯ ನಿಯಮಗಳ ಕ್ರಿಯೆಗೂ, ಹಿಂದಿನ ಪಾಪದ ಮತ್ತು ಆ ಮರಣದ ಆಳ್ವಿಕೆಯಲ್ಲಿನ ನಿಯಮಗಳ ಕ್ರಿಯೆಯ ತಿಳುವಳಿಕೆಗೂ ಇರುವ ವ್ಯತ್ಯಾಸಗಳನ್ನು ಕಂಡುಕೊಳ್ಳಬೇಕು. ಆಗ ಆತನು ತನಗೂ, ಮಾನವ ಜಾತಿಗೂ ಒದಗಿ ಬಂದ ಎಲ್ಲಾ ಸೌಕರ್ಯಗಳನ್ನು ಅನುಭವಿಸಿದ ನಂತರವೂ ಅವುಗಳನ್ನು ಅಲ್ಲಗಳೆದು ದುಷ್ಟ ಪ್ರಭಾವವನ್ನು ಕಾಪಾಡಿಕೊಳ್ಳಲು ನಿಶ್ಚಯಿಸಿಕೊಂಡು ತನ್ನ ಹೃದಯವನ್ನು ಕಠಿಣ ಮಾಡಿಕೊಂಡಲ್ಲಿ ಮತ್ತು ವಿಧೇಯತೆಯನ್ನು ತಿರಸ್ಕರಿಸಿದಲ್ಲಿ ಆತನು ಎರಡನೆಯ ಮರಣವನ್ನು ಹೊಂದಿಕೊಳ್ಳಲೇಬೇಕಾಗುತ್ತದೆ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ ಆತನು ತನ್ನನ್ನು ದೀನನನ್ನಾಗಿ ಮಾಡಿಕೊಂಡು, ತನ್ನ ಪಾಪಗಳನ್ನು ಒಪ್ಪಿಕೊಂಡು, ದೇವರ ರಾಜ್ಯದ ನಿಯಮಗಳಿಗೆ ವಿಧೇಯನಾಗುವುದಾದರೆ ಆತನು ಆ ಕೂಡಲೇ ಜೀವದ ಮೇಲ್ಮುಖ ಮಾರ್ಗವನ್ನು ಹಿಡಿದವನಾಗುತ್ತಾನೆ.–ಇದು ಆತನ ಪುನರುತ್ಥಾನ, ಅಥವಾ ಮೇಲೇಳುವಿಕೆ, ಪತನದಿಂದ ಪೂರ್ಣವಾಗಿ ಚೇತರಿಸಿಕೊಳ್ಳುವುದೂ ಆಗಿದೆ. ಈ ರೀತಿಯಲ್ಲಿ ಆತನು ಪರಿಶುದ್ಧ ರಾಜಮಾರ್ಗದಲ್ಲಿ "ಮೇಲಕ್ಕೇರುವುದಾದರೆ", ಅದೇ ಸಮಯದಲ್ಲಿ ಆತನು ಸಂಗಡಿಗರಿಂದಲೂ ಕಾನೂನು "ತಿರಸ್ಕರಣೆಯಿಂದಲೂ" ತನ್ನನ್ನು ಬೇರ್ಪಡಿಸಿಕೊಳ್ಳುತ್ತಾನೆ. ಅದಕ್ಕನುಸಾರವಾಗಿ ಅವಮಾನದಿಂದಲೂ ಮುಕ್ತನಾಗುತ್ತಾನೆ. ಒಬ್ಬ ಪಾಪಿಯು ತಿರುಗಿಕೊಳ್ಳುವಲ್ಲಿ ದೇವಲೋಕದಲ್ಲಿ ಸಂತೋಷವುಂಟಾಗುವುದಾದರೆ ಪಾಪಿಗಳು ಆಗಾಗ ತಮ್ಮ ತಪ್ಪುಗಳಿಂದ ತಿರುಗಿ ದೇವರಿಗೆ ವಿಧೇಯರಾಗುವಾಗ ಭೂಲೋಕದಲ್ಲಿಯೂ ನೀತಿವಂತರು ಸಂತೋಷಿಸು ತ್ತಾರೆಂಬುದನ್ನು ನಾವು ಅನುಮಾನಿಸಲಾಗದು. ಪಾಪ ಮತ್ತು ಅದರ ಹೀನತೆಯ ಸ್ತುತ್ಯಾರ್ಹ ಉಲ್ಲಂಘನೆಯು ಕ್ರಮೇಣವಾಗಿ ನೀತಿವಂತಿಕೆಯ ಹಾದಿಯಲ್ಲಿ ಸಾಗಲು ಮಾಡುವ ಪ್ರಯತ್ನಗಳಿಗೆ ಎಡೆಮಾಡಿಕೊಡುತ್ತದೆ. ಇದು ನೀರೋನನ್ನು ಕರ್ತನಿಗೆ ಪೂರ್ಣ ವಿಧೇಯನನ್ನಾಗಿ ಮಾಡಿಬಿಡುತ್ತದೆ ಮತ್ತು ಆತನು ಸಹಾ ನ್ಯಾಯತೀರ್ಪಿಗಾಗಿ ಉಂಟಾಗುವ ಪುನರುತ್ಥಾನದಲ್ಲಿ ನಿತ್ಯಜೀವವನ್ನು ಪಡಕೊಳ್ಳಬಹುದಾಗಿದೆ. ಆತನಿಗೆ ಹೆಚ್ಚಾದ ಗೌರವವುಂಟಾಗುತ್ತದೆ, ಅವನ ಗತಕಾಲವು ಪೂರ್ಣವಾಗಿ ಮರೆತು ಹೋಗುತ್ತದೆ, ಹೀಗಿರುವಲ್ಲಿ ನಾವು ಅಪೋಸ್ತಲನಾದ ಪೌಲನ ಬಗ್ಗೆ ಆಲೋಚಿಸುವಾಗ, ನಾವು "ಮುಖ್ಯ ಪಾಪಿಗಳೆಂದು' ಆತನು ಗತಕಾಲದ ಸೌಲನಿಂದ ತನ್ನನ್ನು ಬೇರ್ಪಡಿಸಿಕೊಂಡದ್ದನ್ನೂ, ಮತ್ತು ಆತನ ಶ್ರೇಷ್ಠವಾದ ಸ್ವಾರ್ಥತ್ಯಾಗವನ್ನೂ ಹಾಗೂ ಕರ್ತನಿಗೆ ಆತನು ತೋರಿದ ನಿಷ್ಠಾವಂತಿಕೆಯನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ.

## ಈ ಜೀವನದಲ್ಲಿನ ಪಾಪಗಳಿಗಾಗಿ ಶಿಕ್ಷೆ
## Punishments for Sins of this Life

"ಪ್ರಸ್ತುತ ಸಮಯದ ಪಾಪಗಳಿಗಾಗಿ ಯಾವ ಶಿಕ್ಷೆಯೂ ಇಲ್ಲವೇ?" ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಪ್ರತಿಯೊಂದು ಪಾಪಕ್ಕೂ ಶಿಕ್ಷೆಯನ್ನು ಅಳೆಯುವುದು ನ್ಯಾಯಸಮ್ಮತವಾಗಿದೆ ಎಂದು ನಾವು ಉತ್ತರಿಸುತ್ತೇವೆ. ನಾವೆಲ್ಲಾ ಗ್ರಹಿಸಿರುವಂತೆ ಆದಾಮನ ಪಾಪವು ಆರು ಸಹಸ್ರ ವರ್ಷದವರೆಗೂ ಶಿಕ್ಷಿಸಲ್ಪಟ್ಟಿತು. ಆ ಶಿಕ್ಷೆಯ ಅಡಿಯಲ್ಲಿ ಸಮಗ್ರ ಸೃಷ್ಟಿಯು ನರಳಾಡಿತು, ಶ್ರಮಪಟ್ಟಿತು ಮತ್ತು ಮರಣದಲ್ಲಿ ಮುಳುಗಿತು. ಆದಾಮನ ಪಾಪದ ಫಲವಾದ ಬಲಹೀನತೆ ಮತ್ತು ನೀತಿಭ್ರಷ್ಟತೆಗಳಿಂದ ಪ್ರಭಾವಗೊಂಡ ಆ ಪಾಪವು ಮತ್ತು ಉಳಿದ ಹೆಚ್ಚುವರಿ ಪಾಪಗಳೆಲ್ಲವೂ ಪಾಪಗಳ ಮಹಾ ಬಲಿಯಾಗಿ ಅರ್ಪಿಸಿದ ಪ್ರಾಯಶ್ಚಿತ್ತ ಸಂಧಾನದಲ್ಲಿ ಒಳಗೊಂಡಿವೆ. ಹೆಚ್ಚುವರಿ ಶಿಕ್ಷೆಗೆ ಬದ್ಧವಾದ ಪಾಪಗಳು ನೇರವಾಗಿ ಆದಾಮನ ಪತನಕ್ಕೆ ಮತ್ತು ನೀತಿಭ್ರಷ್ಟತೆಗೆ ಸಂಬಂಧಿಸಿದವುಗಳಲ್ಲ –ಅವುಗಳು ಸ್ವಲ್ಪಮಟ್ಟಿಗೆ ಇಚ್ಛಾಪೂರ್ವಕವಾದವುಗಳು. ಅಂತಹ ಇಚ್ಛಾಪೂರ್ವಕ ವಾದ ಪಾಪಗಳಿಗೆ ಶಿಕ್ಷೆಯಾಗಲೇಬೇಕು. ಆದರೆ ಪೂರ್ಣವಾಗಿ ಇಲ್ಲವೇ ಭಾಗಶಃ ಇಚ್ಛಾಪೂರ್ವಕವಾದ ಅಂಥಹ ಪಾಪಗಳಿಗೆ ಸಮಂಜಸವಾದ ದಂಡನೆ ಏನೆಂದು ನಿರ್ಣಯಿಸಲು ಪ್ರಸ್ತುತದಲ್ಲಿ ನಾವು ಅರ್ಹರಲ್ಲ.

"ಯಾವುದನ್ನೂ ಸಮಯಕ್ಕೆ ಮುಂಚಿತವಾಗಿ ನಿರ್ಣಯಿಸದಿರಿ" ಎಂದು ಕರ್ತನು ಹೇಳಿದ್ದಕ್ಕೆ ಇದೂ ಒಂದು ಕಾರಣ ಎಂಬುದರಲ್ಲಿ ಸಂಶಯವಿಲ್ಲ. "ದೇವಜನರು ಲೋಕಕ್ಕೆ ತೀರ್ಪು ಮಾಡುವರೆಂದು ತಿಳಿಯದೋ?" (1 ಕೊರಿಂಥ 6:2) ಎಂದು ಬರೆದದೆ. ನಮ್ಮ ಕರ್ತನು ಈ ತೀರ್ಪುಗಾರರಲ್ಲಿ ಮುಖ್ಯನಾದವನು. "ತನ್ನ ಯಜಮಾನನ ಚಿತ್ತವನ್ನು ತಿಳಿದ ಆಳು ಸಿದ್ಧಮಾಡದೇ ಹೋದರೆ ಅಥವಾ ಅವನ ಚಿತ್ತಾನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟು ತಿನ್ನುವನು. ತಿಳಿಯದೆ

ಪೆಟ್ಟುಗಳಿಗೆ ಯೋಗ್ಯವಾದುದನ್ನು ನಡಿಸಿದವನು ಸ್ವಲ್ಪ ಪೆಟ್ಟು ತಿನ್ನುವನು" ( ಲೂಕ 12: 47–48) ಎಂದು ಕರ್ತನು ತಾನೇ ಪ್ರಕಟಿಸಿದ್ದಾನೆ. ಇಚ್ಚಾಪೂರ್ವಕವಾಗಿ ಮಾಡಿದ ಅಪರಾಧವನ್ನು ಹೆಚ್ಚಾಗಿ ಕರ್ತನ ಬಗ್ಗೆ ನಮಗಿರುವ ಜ್ಞಾನ ಮತ್ತು ಆತನ ಚಿತ್ತಾನುಸಾರವಾಗಿ ಅಳೆಯಬೇಕೆಂದು ಇದರಿಂದ ನಮಗೆ ಸೂಚಿತವಾಗುತ್ತದೆ. ಆದುದರಿಂದ ಸಭೆಯು ಮತ್ತು ಈ ಸುವಾರ್ತಾ ಯುಗದಲ್ಲಿರುವವರು ಸಭೆಯ ಬೆಳಕು ಮತ್ತು ಪ್ರಭಾವಗಳಿಗೆ ಒಳಗಾಗುವವರಾಗಿದ್ದು ಇತರರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಜವಾಬ್ದಾರಿಯುಳ್ಳವರಾಗಿರುತ್ತಾರೆ. ಚಕ್ರವರ್ತಿ ನೀರೋ, ಸಭೆಯವನಲ್ಲವಾದುದರಿಂದ, ಆತ್ಮನಿಂದ ಹುಟ್ಟಿದವನಲ್ಲವಾದುದರಿಂದ ಅದರ ಅನುಪಾತದಲ್ಲಿ ಸಭೆಗಿಂತ ಕಡಿಮೆ ಜವಾಬ್ದಾರಿಯುಳ್ಳವನಾಗಿದ್ದಾನೆ. ಆದರೆ ಆತನು ಬೆಳಕಿನ ಮಕ್ಕಳೊಂದಿಗೆ ಗಣನೀಯವಾದ ಸಂಪರ್ಕವುಳ್ಳವನಾಗಿದ್ದನು. ಆದುದರಿಂದ ಆತನು ತನ್ನ ಅಪರಾಧಗಳಿಗೆ ಹೆಚ್ಚಿನ ಜವಾಬ್ದಾರಿಯಾಗಿದ್ದಾನೆ ಎಂದು ನಾವು ಭಾವಿಸಬಹುದು.

## ಕೆಲವರ ಪಾಪಗಳು ಮೊದಲೇ ನ್ಯಾಯತೀರ್ಪಿನ ಮುಂದೆ ಹೋಗುತ್ತವೆ

## "Some Men's Sins Go Before to Judgment"

ಇಚ್ಚಾಪೂರ್ವಕವಾದ ಪಾಪಗಳಿಗೆ ಅವರು ಅನುಭವಿಸಿದ ಬೆಳಕನ್ನು ಗಮನದಲ್ಲಿಟ್ಟುಕೊಂಡು ಶಿಕ್ಷೆಯನ್ನು ಪರಿಗಣಿಸುವಾಗ ನಾವು "ಕೆಲವರ ಪಾಪಕೃತ್ಯಗಳು ಪ್ರಸಿದ್ಧವಾಗಿದ್ದು ಅವರು ಇಂಥವರೆಂದು ಮೊದಲೇ ತಿಳಿಯಪಡಿಸುತ್ತವೆ. ಬೇರೆ ಕೆಲವರ ಪಾಪಕೃತ್ಯಗಳು ಮರೆಯಾಗಿದ್ದು ತರುವಾಯ ತಿಳಿದು ಬರುತ್ತವೆ" (1 ತಿಮೋಥೆ 5: 24) ಎಂಬ ಅಪೋಸ್ತಲನ ಮಾತುಗಳನ್ನು ಮರೆಯಲಾಗದು. ಚಕ್ರವರ್ತಿ ನೀರೋನ ಪಾಪಗಳು ಯಾವ ಮಟ್ಟದ ಶಿಕ್ಷೆಯನ್ನು ಈಗಾಗಲೇ ಹೊಂದಿಕೊಂಡಿತೆಂದು ನಮಗೆ ತಿಳಿಯದು; ಆತನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಎಷ್ಟರಮಟ್ಟಿಗೆ ಪೀಡಿತನಾದನೆಂಬುದೂ ನಮಗೆ ತಿಳಿಯದು. ಆದುದರಿಂದ ನಂತರದಲ್ಲಿ ಆತನಿಗೆ ಯಾವ ಮಟ್ಟದ ಶಿಕ್ಷೆ ದೊರೆಯುವುದೆಂಬುದೂ ಮತ್ತು ಅಂತಿಮ ತೀರ್ಪಿನ ಕಾಲವನ್ನು ದಾಟಿಹೋಗಬಹುದೆಂಬುದೂ ನಮಗೆ ತಿಳಿಯದು. ನಮ್ಮ ವಾದದ ಸಲುವಾಗಿ ನಾವು ಈ ಹಿಂದೆ ಆತನಿಗೆ ಯಾವ ವಿಶೇಷವಾದ ಶಿಕ್ಷೆಯೂ ದೊರೆಯಲಿಲ್ಲ ಆತನ ಪಾಪಗಳಿಗೆ ದೊರೆಯುವ ಪೆಟ್ಟುಗಳು, ಛಡಿಯೇಟುಗಳು ನಂತರದಲ್ಲಿ ದೊರೆಯುತ್ತವೆ ಎಂದು ಊಹಿಸೋಣ. ಆತನ ವಿರುದ್ಧ ಇರುವ ದಾಖಲೆಗಳ ಸ್ವರೂಪವೇನೆಂದು ಮತ್ತು ಯಾವ ರೀತಿಯಲ್ಲಿ ಛಡಿಯೇಟುಗಳು ಅಥವಾ ಶಿಕ್ಷೆಗಳು ಆತನಿಗೆ ಉಂಟಾಗ ಬಹುದೆಂದು ನಾವು ವಿಚಾರಿಸೋಣ. ನಾವು ಯಾವುದೇ ಕಾದಿರಿಸುವಿಕೆ ಅಥವಾ ಪೂರ್ವ ಸಿದ್ಧತೆಗಳಿಲ್ಲದೆ ಈ ಪ್ರಶ್ನೆಗಳಿಗೆ ಉತ್ತರಿಸಲು ಅರ್ಹರಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಕಾರ್ಯವೆಸಗುವ ಸಾಮಾನ್ಯವಾದ ತತ್ವವೊಂದನ್ನು ನಾವು ಗ್ರಹಿಸಬಹುದಾಗಿದೆ. ಅದೇನೆಂದರೆ, ತನ್ನ ಜ್ಞಾನ ಮತ್ತು ಮನಸ್ಸಾಕ್ಷಿಗಳ ಉಲ್ಲಂಘನೆಗಳನ್ನು ತಾನೇ ದಾಖಲಿಸುವುದು. ನಾವು ಸತ್ಯ, ಬೆಳಕು, ಜ್ಞಾನ ಮತ್ತು ಮನಸ್ಸಾಕ್ಷಿಗಳು ಅತಿಕ್ರಮಿಸುವ ಪ್ರಮಾಣದಲ್ಲಿಯೇ ಗುಣಲಕ್ಷಣಗಳು ಕೆಡುತ್ತವೆಂದು ನಾವೆಲ್ಲರೂ ಗ್ರಹಿಸುತ್ತೇವೆ. ಇದು ಯಾವ ಮಟ್ಟದಲ್ಲಿ ಸಾಗುತ್ತದೆಯೋ ಆತನು ಪೂರ್ವಸ್ಥಿತಿಗೆ ಬರುವುದು ಅಷ್ಟೇ ಕಷ್ಟವಾಗುತ್ತಾ ಹೋಗುತ್ತದೆ.

'ನೀರೋ' ತನ್ನ ನಡತೆಯನ್ನು ಮತ್ತು ಮನಸ್ಸಾಕ್ಷಿಯನ್ನು ನಿಜವಾಗಿಯೂ ಬಹಳಮಟ್ಟಿಗೆ ಕೆಡಿಸಿಕೊಂಡಿದ್ದನೆಂದು ನಾವು ಸಮಂಜಸವಾಗಿ ನಿರ್ಣಯಿಸಬಹುದು. ಆದುದರಿಂದ ಆತನು ತನ್ನ ಪುನರುತ್ಥಾನದಲ್ಲಿ ತಾನು ಸತ್ತಂತೆಯೇ ಬರುವುದಾದರೆ, ಬೆಳವಣಿಗೆಗೆ ಕೇವಲ ಅವಕಾಶ ದೊರೆಯಬೇಕಾದಲ್ಲಿ ಆತನು ಈ ಹಿಂದೆ ಹಿಂತೆಗೆದ ಪ್ರತಿಯೊಂದು ಹೆಜ್ಜೆಯನ್ನೂ, ಮನಸ್ಸಾಕ್ಷಿಯ ಪ್ರತಿಯೊಂದು ಉಲ್ಲಂಘನೆಯನ್ನೂ, ನೀತಿಗೆ ವಿರುದ್ಧವಾಗಿ ನಡೆಸುವ ಆತನ ನಡೆತೆಯನ್ನು ಹಾಳುಮಾಡುವಂತೆ ಕಾರ್ಯವೆಸಗಿದ ಪ್ರತಿಯೊಂದನ್ನೂ ಆತನು ಎಂದಾದರೂ ಗೆಲ್ಲುವುದಾದರೆ ತನ್ನ ಹೆಜ್ಜೆಯನ್ನು ಪುನಃ ಕಂಡುಕೊಳ್ಳಲು ಮತ್ತು ತಾನು ನಿರುದ್ದೇಶದಿಂದ ಹಾಳುಮಾಡಿಕೊಂಡದ್ದನ್ನು ಪುನಃ ಕಟ್ಟಬೇಕಾದಲ್ಲಿ ಅದಕ್ಕೆ ಅನುಪಾತವಾದ ಪ್ರಯತ್ನ ಬೇಕಾಗುತ್ತದೆ. ಮತ್ತು ಇದು ಮಾತ್ರವೇ ಪ್ರಸ್ತುತ ಸಮಯದ ಪಾಪಗಳಿಗೆ ಇರುವ ದಂಡನೆ ಎಂದು ಹೇಳುವುದು ನಮ್ಮದಲ್ಲ. ಆದರೆ ಇದು ಸಮಂಜಸವೆಂದು ನಮಗೆ ಕಂಡುಬರುತ್ತದೆ. ವಿಷಯಕ್ಕೆ ಇಲ್ಲಿ ವಿರಾಮ ನೀಡಲು ಯಾವುದೇ ಘಟನೆಯಲ್ಲಿ ನಾವು ತೃಪ್ತರಾಗಿ ದ್ದೇವೆ, ಮಹಿಮೆಹೊಂದಿದ ಸಭೆಯ ನಿರ್ಣಯಗಳು ಕರ್ತನ ಆತ್ಮವನ್ನು ಹೊಂದಿದವರಿಂದ ಪೂರ್ಣವಾಗಿ ದೃಢೀಕರಿಸ ಲ್ಪಟ್ಟಿರುತ್ತವೆ. ನಮ್ಮ ಕರ್ತನು ಕೆಡುಕಿಗೆ ಕೆಡುಕನ್ನು ಹಿಂತಿರುಗಿಸುವಲ್ಲಿ ಅಥವಾ ಅತ್ಯಂತ ನೀಚರಿಗೂ ಅನಗತ್ಯ ನೋವನ್ನುಂಟು ಮಾಡುವಲ್ಲಿ ಸಂತೋಷಿಸುತ್ತಾನೆಂದು ನಾವು ಭಾವಿಸಲಾಗದು. ಆದರೆ ಶ್ರೇಷ್ಠ ನ್ಯಾಯಾಲಯದಲ್ಲಿ ಈಗಾಗಲೇ ತೆಗೆದುಕೊಂಡ ನಿರ್ಣಯವು ನಿಲ್ಲುತ್ತದೆ. ಅದೇನಂದರೆ "ಪಾಪವು ಕೊಡುವ ಸಂಬಳ ಮರಣ" (ರೋಮಾ.6:23),ಅದು ಎರಡನೆಯ ಮರಣ.

## (ವಿಶೇಷವಾಗಿ) ಸತ್ತವರಿಗಾಗುವ (ಮುಖ್ಯವಾದ) ಪುನರುತ್ಥಾನವು ಅದೇ ಪ್ರಕಾರವಾಗಿರುವುದು –1 ಕೊರಿ.15:42

## Thus is the [chief] Resurrection of the [special] Dead" - 1Cori-15:12.

ಸಭೆಯ ಪುನರುತ್ಥಾನವನ್ನು ಪ್ರಥಮ ಪುನರುತ್ಥಾನವೆಂದು ವಿಶೇಷಿಸಲಾಗಿದೆ. ಇದು ಅದಕ್ಕೆ ಅಗ್ರಸ್ಥಾನ ನೀಡುವ ಅರ್ಥದಿಂದಲ್ಲ (ಅದಕ್ಕೆ ಪ್ರಾಶಸ್ತ್ಯವಿದ್ದರೂ ಸಹಾ) ಆದರೆ ಇದು ಪ್ರಮುಖವಾದುದು, ಉತ್ತಮವಾದುದು, ಶ್ರೇಷ್ಠವಾದುದು ಎಂಬ ಅರ್ಥದಲ್ಲಿ. ಪುನರುತ್ಥಾನದಲ್ಲಿ ವಿವಿಧ ವರ್ಗಗಳಿವೆ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ – ಇವುಗಳಲ್ಲಿ ಮೂರು– ಜೀವಕ್ಕಾಗಿ, ಸರ್ವ ಸಂಪೂರ್ಣತೆಗಾಗಿ, ಇದು ವಿವಿಧ ನೆಲೆಯಲ್ಲಾಗಬಹುದು. ಸಭೆಯು ಮೊದಲನೆಯ ಸ್ಥಾನವನ್ನು ತೆಗೆದುಕೊಳ್ಳುತ್ತದೆ. 'ಮಹಾ ಸಮೂಹ' ಮತ್ತು ಪುರಾತನ ಪಿತೃಗಳು ಇದರ ನಂತರದ ಸ್ಥಾನವನ್ನು ತೆಗೆದುಕೊಳ್ಳುತ್ತಾರೆ. ಅನುಕ್ರಮದಲ್ಲಿ ಅಥವಾ ಅಂತ್ಯದಲ್ಲಿ ಈ ಪ್ರಪಂಚದವರ ಸಾಮಾನ್ಯ ಪುನರುತ್ಥಾನ. ಇದು ಮಾನವ ಜೀವಿಯ ಸಮಗ್ರ ಪ್ರಪಂಚಕ್ಕೆ ತೆರೆಯಲ್ಪಟ್ಟಿದೆ. ಅನೇಕರು ದೇವರ ಈ ಹಂಚಿಕೆಯನ್ನು, ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾರೆ. – ಮೂಲಕ ಪುನರುತ್ಥಾನದ ನಂತರ ನ್ಯಾಯವಿಚಾರಣೆಯು ಸಹಸ್ರ ವರ್ಷದ

(ಮಿಲೇನಿಯಂ ಯುಗದ) ಅಂತ್ಯದಲ್ಲಿ ನೆರವೇರಲಿದೆ. ಈ ಮಾತಿನ ಸಂಕ್ಷೇಪ ಅರ್ಥದಲ್ಲಿ "ಸತ್ತವರಲ್ಲಿ ಉಳಿದವರು' ಸಾವಿರ ವರ್ಷಗಳು ಮುಗಿಯುವ ತನಕ ಜೀವಿಸುವುದಿಲ್ಲ. – ಅವರಿಗೆ ಪೂರ್ಣವಾದ, ಉಚಿತವಾದ ಮತ್ತು ಸಮಗ್ರವಾದ ಜೀವವಿರುವುದಿಲ್ಲ. ಅವರು ಅಲ್ಲಿಯವರೆಗೆ ಮರಣದಿಂದ ಪೂರ್ಣವಾಗಿ ಎಬ್ಬಿಸಲ್ಪಡುವುದಿಲ್ಲ. ಪ್ರಕಟನೆ 20:5* ರಲ್ಲಿರುವ "ಮಿಕ್ಕ ಸತ್ತವರು ಆ ಸಾವಿರ ವರ್ಷ ತೀರುವ ತನಕ ಜೀವಿತರಾಗಿ ಏಳಲಿಲ್ಲ" ಎಂಬ "ಕೃತಿಮ ವಾಕ್ಯಾಂಗ' (ಹುಸಿ ಉಪವಾಕ್ಯ) ವು ಈ ರೀತಿಯ ದೃಷ್ಟಿಕೋನದಲ್ಲಿ ನೋಡುತ್ತದೆ. ಇದು ದೇವರ ಪರಿಶುದ್ಧ ಗ್ರಂಥಗಳ ಪೂರ್ಣ ತಾತ್ಪರ್ಯಕ್ಕೆ ಅನುಸಾರವಾಗಿರುವಂತೆ ಕಂಡುಬರುತ್ತದೆ. ಈ ಎಲ್ಲಾ ಪುನರುತ್ಥಾನಗಳು ಮೊದಲನೆಯದನ್ನು ಅಥವಾ ಮುಖ್ಯವಾದುದನ್ನು ಅನುಸರಿಸಿದವುಗಳು. ಇವುಗಳು ನಿಸ್ಸಂದೇಹವಾಗಿ ಮಹಿಮೆಯ ಸಭೆಯ ಅಧಿಕಾರ ಮತ್ತು ನಿಯಂತ್ರಣದಲ್ಲಿರುತ್ತವೆ. ಇದರ ಮಹಿಮೆಯುಳ್ಳ ಶಿರಸ್ಸಾಗಿರುವ ಕ್ರಿಸ್ತನು ತನ್ನ ಎಲ್ಲಾ ಶಕ್ತಿ ಮತ್ತು ಅಧಿಕಾರಗಳನ್ನು ತನ್ನ ತಂದೆಯಿಂದ ಪಡೆದವನಾಗಿರುತ್ತಾನೆ.

ಇತರರಿಗಾಗಿ ಸಭೆಯ ಪುನರುತ್ಥಾನ ಕಾರ್ಯವನ್ನು ಪರಿಗಣಿಸಿದ ಮೇಲೆ ಪರಿಶುದ್ಧ ಗ್ರಂಥವು ಮೊದಲನೆಯ ಪುನರುತ್ಥಾನದ ಬಗ್ಗೆ ನಿರ್ಧಿಷ್ಟವಾಗಿ ಏನು ತೋರಿಸುವುದೆಂದು ನಾವೀಗ ಪರಿಗಣಿಸೋಣ. ನೂತನ ಸೃಷ್ಟಿಗಳು ಯಾವ ಶರೀರದೊಡನೆ ಎದ್ದು ಬರುತ್ತಾರೆ? ಅವರ ಕೆಲವು ಗುಣಲಕ್ಷಣಗಳು ಮತ್ತು ಶಕ್ತಿಗಳು ಯಾವುವು? ಎಂದು ಪರಿಶಿಲಿಸೋಣ.

ಅಪೋಸ್ತಲನು "ಮಣ್ಣಿನಿಂದ ಹುಟ್ಟಿದವನು ಎಂಥವನೋ ಮಣ್ಣಿಗೆ ಸಂಬಂಧಪಟ್ಟವರೂ ಅಂಥವರೇ; ಪರಲೋಕದಿಂದ ಬಂದಾತನು ಎಂಥವನೋ ಪರಲೋಕಕ್ಕೆ ಸಂಬಂಧ ಪಟ್ಟವರೂ ಅಂಥವರೇ" (1ಕೊರಿಂಥ 15:48) ಎಂಬುದಾಗಿ ಪ್ರಕಟಿಸಿದ್ದಾನೆ. ಲೋಕದವರು ಸಾಮಾನ್ಯವಾಗಿ ಮಾನವ ಪರಿಪೂರ್ಣತೆಗಾಗಿ ಪುನಃ ಜೀವಿಸುವುದನ್ನು ಅನುಭವಮಾಡುತ್ತಾರೆ ಎಂಬುದಾಗಿ ಈ ಮಾತುಗಳು ಸೂಚಿಸುತ್ತವೆ. ಇವರು ಲೋಕದವರಂತೆ – ಪಾಪಮಾಡುವ ಮುನ್ನ ಇದ್ದ ಮೊದಲನೆಯ ಆದಾಮನಂತೆ ಸರ್ವ ಸಂಪೂರ್ಣ "ಮಾನವನಾದ ಯೇಸು ಕ್ರಿಸ್ತನು' ನೂತನ ಸೃಷ್ಟಿಯಾಗುವದಕ್ಕೆ ಮುಂಚೆ ಇದ್ದಂತ ಪ್ರಕೃತಿಯಲ್ಲಿ ಇರುತ್ತಾರೆ. ಪುನಃ ದೈವ ಸೃಷ್ಟಿಯ ಭೂಲೋಕದ ಸ್ವರೂಪಗಳಾದ ಇವರೊಂದಿಗೆ ಭವ್ಯವಾದ ಪ್ರತೀಕ್ಷೆಯೊಂದಿಗೆ ನಾವು ಈ ಲೋಕದಲ್ಲಿ ಆನಂದಿಸುತ್ತೇವೆ. ಆದರೆ ನಾವು ಸುವಾರ್ತಾ ಸಭೆಗೆ ಮಾಡಿರುವ ಅಮೂಲ್ಯ ವಾಗ್ದಾನಗಳಿಗಾಗಿ ಇನ್ನೂ ಹೆಚ್ಚಾಗಿ ಸಂತೋಷಿಸುತ್ತೇವೆ. ಇವರು ದೇವರ ಉದ್ದೇಶದ ಪ್ರಕಾರ "ಕರೆಯಲ್ಪಟ್ಟವರು" ಮತ್ತು ದೈವಿಕ ಸ್ವರೂಪ ಹೊಂದಿಕೊಳ್ಳ ಬೇಕಾದವರು. ಅದು ಇನ್ನೂ ಹೆಚ್ಚಿನ ಮತ್ತು ನಿರ್ಧಿಷ್ಟವಾದ ಅರ್ಥದಲ್ಲಿ ಸೃಷ್ಟಿಕರ್ತನ ಸ್ವರೂಪವಾಗಿದ್ದು ಅದು ಮಾಂಸ ಶರೀರದ ಸ್ವರೂಪವಲ್ಲ ಆದರೆ ಆತ್ಮ ಸ್ವರೂಪಗಳಾಗಿವೆ. "ನಾವು ಆತನಂತೆ ( ಮಹಿಮಾ ಸ್ವರೂಪಿಯಾಗಿ ಬದಲಾದ ಕ್ರಿಸ್ತನಂತೆ) ಇರುತ್ತೇವೆ ಮತ್ತು ಆತನನ್ನು ಆತನು ಇದ್ದಂತೆಯೇ ನೋಡುತ್ತೇವೆ ". ಆತನು ಆತ್ಮ ಸ್ವರೂಪಿ – ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದಾನೆ" (ಇಬ್ರಿಯ 1:3) ರಾಜತ್ವಗಳಿಗಿಂತಲೂ ಅಧಿಕಾರಗಳಿಗಿಂತಲೂ ದೇವ ದೂತರುಗಳಿಗಿಂತಲೂ, ಎಲ್ಲಾ ಹೆಸರುಗಳಿಗಿಂತ ಆತನು ಬಹಳ ಉನ್ನತಮಟ್ಟದವನಾಗಿದ್ದು ಆತನು ಮಾನವತ್ವಕ್ಕಿಂತ ಬಹಳ ಹೆಚ್ಚಿನ ಮೇಲ್ಮಟ್ಟದಲ್ಲಿದ್ದಾನೆ. ನಾವು ಆತನಂತೆಯೇ ಆಗಿ ಆತನ ಮಹಿಮೆಯಲ್ಲಿಯೂ, ಸ್ವಭಾವದಲ್ಲಿಯೂ ಪಾಲುದಾರರಾಗುವುದಾದರೆ ನಾವೂ ಸಹಾ ದೇವರ ಸ್ವರೂಪಿಗಳಾಗುತ್ತೇವೆ. ಆತನನ್ನು ಯಾರೂ ಎಂದೂ ಕಂಡಿಲ್ಲ ಮತ್ತು ಆತನು ಅಗಮ್ಯವಾದ ಬೆಳಕಿನಲ್ಲಿ ವಾಸ ಮಾಡುವವನು ಆಗಿದ್ದಾನೆ. ಯಾರೂ ಆತನನ್ನು ಸಮೀಪಿಸಲಾರರು; ಆದರೆ ನಾವು ಮಾರ್ಪಾಟು ಹೊಂದುವುದರಿಂದ ಆತನನ್ನು ಸಮೀಪಿಸಬಹುದು ಮತ್ತು ಆತನನ್ನು ನೋಡಬಹುದು (1ಯೋಹಾನ 3:2, 1ತಿಮೋ. 1:17,.6:16 ಮತ್ತು ವಿಮೋ. 33:20 ನೋಡಿರಿ)

ಆತನನ್ನು ಯಾರೂ ತಪ್ಪಾಗಿ ಅರ್ಥಮಾಡಿಕೊಳ್ಳದಂತೆ, ಅಪೋಸ್ತಲನು ಮೇಲಿನ ಭಾಷೆಯನ್ನು ಕಾಪಾಡುವಂತೆ "ನಾವು ಈ ಲೋಕದ ಸ್ವರೂಪವನ್ನು ಧರಿಸಿರುವಂತೆಯೇ ಪರಲೋಕದ ಸ್ವರೂಪವನ್ನು ಸಹಾ ಧರಿಸಿಕೊಳ್ಳುವೆವು" ಎಂದಿದ್ದಾನೆ. ಪ್ರತಿಯೊಬ್ಬರೂ ಪರಲೋಕದ ಸ್ವರೂಪವನ್ನು ಧರಿಸಿಕೊಳ್ಳುವರು ಎಂಬುದು ಯಾವ ಅರ್ಥದಲ್ಲಿಯೂ ಅಪೋಸ್ತಲನ ಆಲೋಚನೆಯಲ್ಲ. ನಮ್ಮ ಕರ್ತನ ಸಂಕಲ್ಪವು ಆ ರೀತಿಯಾದುದಲ್ಲ. ಆತನು ಮನುಷ್ಯನನ್ನು ಉಂಟು ಮಾಡಿದಾಗ ಆತನನ್ನು ಮಾಂಸ ದೇಹಧಾರಿಯಾದ ಈ ಲೋಕದ ಮಾನವನನ್ನಾಗಿ, ಮಾನಸಿಕವಾಗಿಯೂ ಮತ್ತು ನೈತಿಕವಾಗಿ ತನ್ನ ಸ್ವರೂಪಕ್ಕೆ ತಕ್ಕಂತೆ ರೂಪಿಸಿದನು. ಹಾಗೂ ಈ ಲೋಕದ ಒಡೆಯನನ್ನಾಗಿಯೂ, ಅದನ್ನು ಆಳುವಾತನನ್ನಾಗಿಯೂ ಸೃಷ್ಟಿಕರ್ತನಾದ ಪರಲೋಕ ದೇವರು ತನ್ನ ಪ್ರತಿನಿಧಿಯನ್ನಾಗಿಯೂ ಉಂಟುಮಾಡಿದ್ದಾನೆ. (ಆದಿಕಾಂಡ 1:26–28, ಕೀರ್ತನೆ 8:4–7). ನಾವು ಕಂಡುಕೊಂಡಂತೆ ನೂತನ ಸೃಷ್ಟಿಯ ಆಯ್ಕೆಯು ಸಂಪೂರ್ಣವಾಗಿ ಬೇರೆಯಾದುದು ಮತ್ತು ಲೌಕಿಕ ಸೃಷ್ಟಿಗೆ ಹೊರತಾದುದು. ಅವರನ್ನು ಲೋಕದವರಿಂದ ಆಯ್ಕೆಮಾಡಲಾಗಿದೆ ಮತ್ತು ಒಂದು "ಚಿಕ್ಕ ಹಿಂಡಾಗಿ" ರಚಿಸಲಾಗಿದೆ ಮತ್ತು ಧರ್ಮ ಯುಗದ ಸಾವಿರ ವರ್ಷಗಳ ಕಾಲದಲ್ಲಿ ಈ ಲೋಕವನ್ನು ಆಶೀರ್ವದಿಸುವಂತೆ ಕರ್ತನ ರಾಜ್ಯದ ವರ್ಗದವರು ಎಂದು ಕರೆಯಲಾಗಿದೆ. – ತರುವಾಯದಲ್ಲಿ ನಾವು ಒಂದು ಶ್ರೇಷ್ಟ ಮಟ್ಟದ ಜವಾಬ್ಧಾರಿಯುತ ಸ್ಥಾನವನ್ನು ಅಲಂಕರಿಸುವುದು ಮತ್ತು ದೇವರ ಉದ್ಧೇಶಗಳನ್ನು ನೆರವೇರಿಸುವ ಕೆಲವೊಂದು

* "ಮಿಕ್ಕ ಸತ್ತವರು ಆ ಸಾವಿರ ವರ್ಷ ತೀರುವ ತನಕ ಜೀವಿತರಾಗಿ ಏಳಲಿಲ್ಲ" ಎಂಬ ಸತ್ಯದ ಬಗ್ಗೆ ನಾವೀಗಾಗಲೇ ಗಮನವನ್ನು ಸೆಳೆದಿದ್ದೇವೆ. ಇದಕ್ಕೆ ಪುರಾತನ ಐದನೆಯ ಶತಮಾನದ ಹಿಂದಿನ ಕಾಲದಲ್ಲಿ MSS ನ (ಹಸ್ತಪ್ರತಿಯ) ಬೆಂಬಲ ಇದ್ದಿಲ್ಲ. ಆದರೆ ಇದು ನಾವಿಲ್ಲಿ ಪ್ರಸ್ತುತಿಪಡಿಸುವಂತೆಯೇ ಇದೆ. 'ಜೀವಿತರಾಗಿ ಏಳಲಿಲ್ಲ' ಎಂಬ ಪದವನ್ನು ಎಬ್ಬಿಸಲ್ಪಡುವುದು ಎಂಬ ಅರ್ಥದಲ್ಲಿ ತೆಗೆದುಕೊಳ್ಳದೆ ಅದನ್ನು ಪೂರ್ಣ ಪ್ರಮಾಣದಲ್ಲಿ ಜೀವಿತದ ಪುನರ್ವಶ ಅಥವ ಪುನಃ ಸ್ಥಾಪನೆ ಎಂದು ಅರ್ಥೈಸಬೇಕು ಸಂಪುಟ 1 ಪುಟ 288 ರಲ್ಲಿರುವ ಅಡಿಬರಹವನ್ನು ನೋಡಿರಿ.

ಪ್ರಮುಖ ಕಾರ್ಯಗಳನ್ನು ನೆರವೇರಿಸುವುದು ಖಚಿತ. ಬಹುಶಃ ಇವು ಇತರ ಲೋಕಗಳಿಗೆ ಮತ್ತು ಇತರ ಸೃಷ್ಟಿಗಳಿಗೆ ಸಂಬಂಧಿಸಿದ್ದಿರಬಹುದು.

ಆದರೆ, ಅಪೋಸ್ತಲನು ಈ ವಿಷಯವನ್ನು ಮತ್ತಷ್ಟು ಹೆಚ್ಚಾಗಿ ಜೋಪಾನ ಮಾಡುತ್ತಾನೆ. 50ನೇ ವಚನದಲ್ಲಿ ಆತನು "ಸಹೋದರರೇ, ನಾನು ಹೇಳುವುದೇನೆಂದರೆ, ರಕ್ತಮಾಂಸವು ದೇವರರಾಜ್ಯಕ್ಕೆ ಬಾಧ್ಯವಾಗಲಾರದು" ಎಂದು ವಿವರಿಸುತ್ತಾನೆ. ಈ ರೀತಿಯಲ್ಲಿ ಆತನು, ಮಾಂಸ ದೇಹಧಾರಿಗಳಾದ ನಮ್ಮ ಇಂದಿನ ಸ್ಥಿತಿಗೂ ಭವಿಷ್ಯದಲ್ಲಿನ ನಮ್ಮ ಆತ್ಮೀಕ ಸ್ಥಿತಿಗೂ ಇರುವ ವ್ಯತ್ಯಾಸವನ್ನು ತಿಳಿಸಿಕೊಡುತ್ತಾನೆ. ಹೆಚ್ಚು ನಿಶ್ಚಯವಾಗಿ ನಾವು ಈ ಮಾಂಸ ಶರೀರಧಾರಿಗಳಾಗಿರುವವರೆಗೆ ಯಾವುದೇ ಅರ್ಥದಲ್ಲಿ ನಾವು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ ಎಂದು ಪ್ರಕಟಿಸುತ್ತಾನೆ. ಯಾಕೆಂದರೆ ಆ ರಾಜ್ಯವು ಆತ್ಮೀಕವಾದುದು, ಆತ್ಮೀಕ ಸಂಗತಿಗಳಿಂದ ರಚಿತವಾದುದು. ನಮ್ಮ ಕರ್ತನು ತಾನೇ ಶಿರಸ್ಸೂ, ಪ್ರಮುಖನೂ, ನಾಯಕನೂ, ಆತನು ಸಭೆಯ ಮಾದರಿಯೂ ಆಗಿದ್ದು ಭವ್ಯವಾದ ಮಹಿಮಾ ಶರೀರವನ್ನು ಹೊಂದಿದ್ದಾನೆ. ಇದರ ಕ್ಷಣಿಕ ದರ್ಶನವನ್ನು ಅಪೋಸ್ತಲನು ಹೊಂದಿದ್ದಾನೆ. (1 ಕೊರಿಂಥ 15:8) ತನ್ನ ದಿವ್ಯದರ್ಶನದ ಕಾಲಜ್ಞಾನದಲ್ಲಿ ಅಪೋಸ್ತಲನಾದ ಯೋಹಾನನಿಗೂ ಇದು ಲಭ್ಯವಾಗಿದೆ. ನಾವು ಆಯ್ಕೆಗೊಂಡ ಜನಾಂಗದ ಶೇಷಭಾಗವಾಗಿ ನಾವೂ ಅವನಂತೆ ರಕ್ತ ಮಾಂಸವಿಲ್ಲದ ಶರೀರವನ್ನು ಪಡಕೊಳ್ಳುವೆವು. ಅವರ ಪುನಃಸರಿಪಡಿಸುವ ಅಥವಾ ಪುನರುತ್ಥಾನವು ಅವರನ್ನು ರಕ್ತ ಮಾಂಸ ದೇಹದ ಪರಿಪೂರ್ಣ ಸ್ಥಿತಿಗೆ ಹಿಂದಿರುಗಿಸುತ್ತದೆ. ಅದೇ ಪುನರ್‌ವಶದ ಸಮಯವು ಆರಂಭದಲ್ಲಿದ್ದ ಏದೇನ್ ತೋಟದ ಪರಿಸ್ಥಿತಿಗೆ ಈ ಭೂಲೋಕವನ್ನು ತರುವುದಾಗಿದೆ.

ಆದರೆ, ಸಭೆಯ ದೈಹಿಕ ಮತ್ತು ಲೌಕಿಕ ಸ್ಥಿತಿಯಿಂದ ಪರಲೋಕದ ಆತ್ಮಿಕ ಸ್ಥಿತಿಗೆ ಆಗುವ ಈ ರೀತಿಯ ಪರಿಪೂರ್ಣ ಬದಲಾವಣೆಯ ಸತ್ಯವನ್ನು ನಾವು ಗ್ರಹಿಸುವುದು ಕಷ್ಟಸಾಧ್ಯವೆಂಬುದನ್ನು ಅಪೋಸ್ತಲನು ಅರಿತವನಾಗಿದ್ದಾನೆ. ಜೀವಿತರಾಗಿ ಕರ್ತನ ಸನ್ನಿಧಾನದಲ್ಲಿ ಕಾಣಿಸಿ ಕೊಳ್ಳಲಿರುವವರಿಗಿಂತ ಮರಣದಲ್ಲಿ ನಿದ್ರೆಹೋಗಿರುವವರ ಬಗ್ಗೆ ನಮ್ಮ ಜವಾಬ್ದಾರಿಯು ಕಡಿಮೆಯಾಗಿದೆ ಎಂಬುದನ್ನು ಆತನು ತಿಳಿದಿದ್ದಾನೆ. ಕರ್ತನ ಎರಡನೆಯ ಬರೋಣದಲ್ಲಿ ಜೀವಿಸಿರುವ ಭಕ್ತಜನರು ಯಾವ ರೀತಿಯಲ್ಲಿ ಆತನ ಮಹಾ ರಾಜ್ಯಕ್ಕೆ ಸೇರಿಸಲ್ಪಡುವರು ಎನ್ನುವುದಕ್ಕಿಂತ ಮರಣಹೊಂದಿ ನಿದ್ರಿಸುವವರು ದೇವರು ವಾಗ್ದಾನಮಾಡಿದ ನೂತನವಾದ ಆತ್ಮೀಕ ಶರೀರವುಳ್ಳವರಾಗಿ ಎದ್ದುಬರುವರು ಎಂಬುವ ಆಲೋಚನೆಯನ್ನು ಗ್ರಹಿಸುವುದು ನಮಗೆ ಬಹಳ ಸುಲಭ. ಕರ್ತನು ಅಪೋಸ್ತಲನ ಮೂಲಕವಾಗಿ ನಮಗೆ ಇದನ್ನು ಮತ್ತಷ್ಟು ಸ್ಪಷ್ಟಪಡಿಸುವವನಾಗಿ "ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ – ನಾವೆಲ್ಲರೂ ನಿದ್ರೆ ಹೋಗುವುದಿಲ್ಲ; ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ತುತ್ತೂರಿ ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು" (1ಕೊರಿಂಥ 15: 51–52).

ಈ ಮಾತುಗಳಿಂದ ಕರ್ತನು ಈ ಧಾರ್ಮಿಕ ಸತ್ಯವನ್ನು ಕೆಲಮಟ್ಟಿಗೆ ಸ್ಪಷ್ಟಪಡಿಸಿದ್ದಾಗ್ಯೂ ಗಣನೀಯವಾದ ಈ ಸರಳ ವಿವರಣೆಯಲ್ಲಿ ಗಹನವಾದ ಗೂಢಾರ್ಥ ಸಂಗತಿಗಳು ಇನ್ನೂ ಮುಸುಕು ಕವಿದಿವೆ. ಯಾಕೆಂದರೆ ಕರ್ತನ ಪ್ರಿಯ ಜನರಲ್ಲಿ ಅನೇಕರು "ನಿದ್ರಿಸುವವರು' ಎಂಬ ಪದವನ್ನು 'ಮರಣಿಸಿದವರು' ಎಂಬ ಪದದೊಂದಿಗೆ ಕಲಸಿಬಿಡುವವರಾಗಿದ್ದು ಈ ವಿವರಣೆಯಿಂದ ಭಕ್ತಜನರು ಕರ್ತನ ಬರೋಣದವರೆಗೂ ಇದ್ದು ಸಾಯದೆ ಮಾರ್ಪಾಡಾಗುವರು ಎಂಬ ಗೊಂದಲದ ತೀರ್ಮಾನಕ್ಕೆ ಬರುತ್ತಾರೆ. ಈ ರೀತಿಯಾಗಿ ಆತನು ಹೇಳಲೇ ಇಲ್ಲ. ಅಪೋಸ್ತಲರುಗಳ ಉದಾಹರಣೆಯನ್ನೇ ತೆಗೆದುಕೊಳ್ಳಿರಿ. ಅವರೆಲ್ಲರೂ ಸತ್ತಿದ್ದಾರೆ ಮತ್ತು ಸತ್ತ ಕ್ಷಣದಿಂದಲೇ ಅವರು "ನಿದ್ರಿಸುತ್ತಾರೆಂದು' ಎಣಿಕೆಮಾಡಲಾಗಿದೆ. ಸಾಯುವುದು ಒಂದು ಕ್ಷಣಿಕ ಕ್ರಿಯೆ ಆದರೆ 'ನಿದ್ರಿಸುವುದು'ಅಥವಾ ಪ್ರಜ್ಞಾಹೀನತೆ'ಯು ಶತಮಾನಗಳ ಕಾಲ ಇರುವಂಥದು.

ಇಂತಹ ಆಲೋಚನೆಯನ್ನು ಅಪೋಸ್ತಲನ "ನಿದ್ರೆ' ಎಂಬ ಪದವು ಅರ್ಥವಾಗುವಂತೆ ಸೇರಿಸಬೇಕು. ಅರ್ಥಾತ್ ಕರ್ತನ ಎರಡನೆಯ ಬರೋಣದವರೆಗೆ ಉಳಿಯುವ ದೈವಭಕ್ತರು ಒಂದು ಕ್ಷಣಕ್ಕಾದರೂ ಪ್ರಜ್ಞಾಹೀನವಾದ ನಿದ್ರೆಗೆ ಜಾರುವ ಅಗತ್ಯವಿಲ್ಲ. ಅವರುಗಳು ಮರಣ ಅನುಭವಿಸುತ್ತಾರೆ, ಹೀಗಿದ್ದಾಗ್ಯೂ ಪ್ರವಾದಿಯ ಮೂಲಕ ಕರ್ತನು ಸಭೆಯ ಬಗ್ಗೆ ಪ್ರಕಟಿಸಿದಂತೆ "ನೀವು ದೇವರುಗಳು, ಎಲ್ಲರೂ ಪರಾತ್ಪರನ ಮಕ್ಕಳು ಎಂದು ನಾನು ಹೇಳಿದೆನು. ಆದರೂ ನರರಂತೆ ಸತ್ತೇ ಹೋಗುವಿರಿ; ಪ್ರತಿಯೊಬ್ಬ ಪ್ರಭುವಿನಂತೆ ನೀವೆಲ್ಲರೂ ಬಿದ್ದುಹೋಗುವಿರಿ" (ಕೀರ್ತನೆ 82: 6,7). ಲೋಕವು ಸಾಮಾನ್ಯವಾಗಿ ಪ್ರಭುವಾದ ಆದಾಮನಂತೆ, ಆತನ ಮಕ್ಕಳಂತೆ, ಆತನ ದಂಡನೆಯ ಪಾಲುದಾರರಂತೆ ಸತ್ತೇ ಹೋಗುವುದು. ಆದರೆ ಯೇಸುಕ್ರಿಸ್ತನಲ್ಲಿ ನಿಷ್ಠೆಯುಳ್ಳ ವಿಶ್ವಾಸಿಗಳು ಆತನೊಂದಿಗೆ, ಯೇಸು ಪ್ರಭುವಿನಲ್ಲಿ ಸಾಯುವರು. (ಯೆಶಾ.9:6, ಅ. ಕೃ. 3:15, 5:31). ಆತನ ಬಲಿದಾನದ ಮೂಲಕ ನೀತಿನಿರ್ಣಯ ಹೊಂದಿದವರಾಗಿ ಅವರುಗಳು ಆತನೊಂದಿಗೆ 'ಸಹಬಲಿದಾನಿ' ಗಳಾಗಿ ಮರಣಹೊಂದಿದರು. ಅವರು ತ್ಯಾಗದ ಮೂಲಕ ಎರಡನೆಯ ಪ್ರಭುವಿನಂತೆ 'ಮರಣದಲ್ಲಿ ಬಿದ್ದರು' "ನಾವು ಆತನೊಂದಿಗೆ ಸತ್ತವರಾದರೆ, ಆತನೊಂದಿಗೆ ಜೀವಿಸುವವರೂ ಆಗಿದ್ದೇವೆ" ಆದರೆ ಅಪೋಸ್ತಲನು ನಮಗೆ ತಿಳಿಸಿ ಹೇಳುವಂತೆ ಇವರುಗಳ ಮರಣವು ಪ್ರಜ್ಞಾಹೀನವಾಗಿ ನಿದ್ರಿಸುವುದಲ್ಲ. ಮರಣದ ಕ್ಷಣದಲ್ಲಿಯೇ ಉಂಟಾಗುವ ಮಾರ್ಪಾಡು ಅಥವಾ ಪರಲೋಕದ ವಸ್ತ್ರ ಅಂದರೆ ಆತ್ಮೀಕ ಶರೀರವನ್ನು ಧರಿಸಿಕೊಳ್ಳುವುದು.

ಕರ್ತನ ಬರೋಣದವರೆಗೆ ಉಳಿದುಕೊಳ್ಳುವ ಸಭೆಯವರಿಗೆ ಉಂಟಾಗುವ "ಬದಲಾವಣೆಯು" ಈ ಮಾತುಗಳ ಎಲ್ಲಾ ಅರ್ಥದಲ್ಲಿ ಮೊದಲನೆಯ ಪುನರುತ್ಥಾನದ ಭಾಗವಾಗಿದೆ. ಯಾವುದೇ ನಿರ್ದಿಷ್ಟವಾದ ರೀತಿಯಲ್ಲಿ ಇದು ಒಂದೇ ದೇಹದ ಎಲ್ಲಾ ಅಂಗಗಳಿಗೆ ಸಾಮಾನ್ಯವಾದ ಮರಣದ ಅನುಭಕ್ಕಿಂತ ಭಿನ್ನವಾದುದಲ್ಲ. ದೇಹದ ಇತರ ಅಂಗಗಳೊಂದಿಗಿನ ಬದಲಾವಣೆಯ ಒಂದು ಅಂಶವೆಂದರೆ ಅಪೋಸ್ತಲನು ವಿಶೇಷಿಸಿ ಹೇಳುವಂತೆ ಅವರು "ನಿದ್ರಿಸುವುದಿಲ್ಲ'. ದೇಹದ ಈ ಕಡೇ ಅಂಗಗಳಿಗೆ ನಿದ್ರಿಸುವ ಅಗತ್ಯವಿಲ್ಲ – ರಾಜ್ಯವು

ಬರುವವರೆಗೆ ಕಾಯುವ ಅಗತ್ಯವಿಲ್ಲ. ಯಾಕೆಂದರೆ ಅದು ಆಗ ಸಿದ್ಧವಾಗಿರುತ್ತದೆ. ಶಾರೀರಿಕವಾಗಿ ಅವರು ನಡೆಸುವ ತೆರೆಯ ಈ ಬದಿಯ ಸೇವೆಯ ಚಟುವಟಿಕೆಗಳಿಂದ ತೆರೆಯ ಆಚೆ ಬದಿಯ ಸೇವೆಯ ಚಟುವಟಿಕೆಗಳಿಗೆ ಪರಿಪೂರ್ಣರಾದ ನೂತನ ಸೃಷ್ಟಿಗಳಾಗಿ, ಕ್ರಿಸ್ತನ ಅಂಗಗಳಾಗಿ ಸಾಗುವರು.

## "ಮುಂದೆ ಏನಾಗುವೆವೋ ಅದು ಇನ್ನೂ ಪ್ರತ್ಯಕ್ಷವಾಗಲಿಲ್ಲ"

## "It Doth Not Yet Appear What We Shall Be"

ನೂತನ ಸೃಷ್ಟಿಯ, ಪರಿಪೂರ್ಣ ಶಕ್ತಿ ಮತ್ತು ಗುಣಲಕ್ಷಣಗಳ ಬಗ್ಗೆ ಅಪೋಸ್ತಲನು ಅವರೆಲ್ಲರೂ ಒಂದೇ ರೀತಿಯ ಮಹಿಮೆಯನ್ನು ಹೊಂದಿದ್ದಾಗ್ಯೂ, ಪರಲೋಕದ ಜೀವಿಗಳಾದಾಗ್ಯೂ ಅವರೆಲ್ಲರಿಗೂ ಒಂದೇ ಮಟ್ಟದ ಮಹಿಮೆ ಇರುವುದಿಲ್ಲ ಎಂದೆನ್ನುತ್ತಾನೆ. ಎಲ್ಲಾ ಪರಲೋಕ ಜೀವಿಗಳಿಗೆ ಹುದುವಾದ ಒಂದು ಸಂಗತಿ ಇರುವಂತೆ ಮಾನವಜೀವಿಗಳಿಗೆ ಅಥವಾ ಲೌಕಿಕ ವ್ಯಕ್ತಿಗಳಿಗೆ ಮತ್ತೊಂದು ಹುದುವಾದ ಮಹಿಮೆ ಇದೆ. ಪ್ರತಿಯೊಬ್ಬರೂ ಅವರ ಪರಿಪೂರ್ಣತೆಯಲ್ಲಿ ಮಹಿಮೆಯುಳ್ಳವರಾಗಿರುತ್ತಾರೆ. ಆದರೆ ಪರಲೋಕ ಜೀವಿಗಳ ಮಹಿಮೆಯು ಶ್ರೇಷ್ಠಮಟ್ಟದ್ದಾಗಿರುತ್ತದೆ, ಉತ್ಕೃಷ್ಟವಾಗಿರುತ್ತದೆ. ಸಭೆಯು ಒಟ್ಟಾರೆಯಾಗಿ "ಸೂರ್ಯನಂತೆ ಪ್ರಕಾಶಿಸುವುದು" (ಮತ್ತಾಯ13:43) ಎಂಬುದಾಗಿ ದೇವರ ವಾಕ್ಯವು ಹೇಳುತ್ತದೆ. ಮುಂಬರುವ ಮಹಿಮೆಯ ಬಗ್ಗೆ ಕರ್ತನು ತಾನೇ ಮಾಡಿದ ಈ ವಿವರಣೆಯು ಗೋದಿ ವರ್ಗದವರಿಗೆಲ್ಲಾ ಅನ್ವಯವಾಗುತ್ತದೆ. ಹೀಗಿದ್ದಾಗ್ಯೂ (41ನೇ ವಚನದಲ್ಲಿನ) ಅಪೋಸ್ತಲನ ವಿವರಣೆಯ ಬೆಳಕಿನಲ್ಲಿ ವ್ಯಕ್ತಿಗತವಾಗಿ ಸಭೆಯಸ್ಥಿತಿ ಮತ್ತು ಗೌರವಗಳಲ್ಲಿ ವ್ಯತ್ಯಾಸಗಳಿರುತ್ತವೆಂದು ನಾವು ಗ್ರಹಿಸುತ್ತೇವೆ. ಎಲ್ಲರೂ ಪರಿಪೂರ್ಣರಾಗಿರುತ್ತಾರೆ, ಎಲ್ಲರೂ ಅತಿಯಾದ ಸಂತೋಷದಲ್ಲಿರುತ್ತಾರೆ, ಆದರೆ ತಂದೆಯು ಎಲ್ಲಾದುದರ ಮೇಲಿರುವುದರಿಂದ ಮತ್ತು ಆತನು ತನ್ನ ಮಗನನ್ನು ತನ್ನ ನಂತರದ ಸ್ಥಾನಕ್ಕೆ ಏರಿಸಿರುವುದರಿಂದ ಮತ್ತು ಇದು ಮಹಿಮೆಯಲ್ಲಿ, ಗಾಂಭೀರ್ಯತೆಯಲ್ಲಿ ಮತ್ತು ಅಧಿಕಾರದಲ್ಲಿ ವ್ಯತ್ಯಾಸಗಳನ್ನು ಸೂಚಿಸುವಂತೆ ಕರ್ತನ ಹಿಂಬಾಲಕರಲ್ಲಿಯೂ ಇರುತ್ತದೆ. ಅವರೆಲ್ಲರೂ ಅಂಗೀಕೃತರಾದರೂ "ನಕ್ಷತ್ರಗಳಲ್ಲಿ ವ್ಯತ್ಯಾಸವಿರುವಂತೆ ಅವರ ಪ್ರತಿಭೆಯಲ್ಲಿ, ಪರಿಮಾಣದಲ್ಲಿ, ಕಾಂತಿಯಲ್ಲಿ ವ್ಯತ್ಯಾಸವಿದೆ. – "ಸೂರ್ಯನ ಮಹಿಮೆ ಒಂದು ವಿಧ, ಚಂದ್ರನ ಮಹಿಮೆ ಮತ್ತೊಂದು ವಿಧ, ನಕ್ಷತ್ರಗಳ ಮಹಿಮೆ ಇನ್ನೊಂದು ವಿಧ. ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೂ ಮತ್ತೊಂದು ನಕ್ಷತ್ರಕ್ಕೂ ಹೆಚ್ಚುಕಡಿಮೆ ಉಂಟಷ್ಟೆ" (1 ಕೊರಿ. 15:41).

ನಮ್ಮ ಕರ್ತನು ಆತನ ಎರಡು ಸಾಮ್ಯಗಳಲ್ಲಿ ಆತನ ಮಹಿಮೆಯುಳ್ಳ ಅನುಯಾಯಿಗಳಲ್ಲಿನ ಇದೇ ರೀತಿಯ ವ್ಯತ್ಯಾಸಗಳನ್ನು ತಿಳಿಸಿದ್ದಾನೆ. ಐದು ತಲಾಂತುಗಳಲ್ಲಿ ತನ್ನ ನಿಷ್ಠೆಯನ್ನು ತೋರಿಸಿದಾತನಿಗೆ ಕರ್ತನ ಹಿಂದಿರುಗುವಿಕೆಯಲ್ಲಿ ವಿಶೇಷವಾದ ಮೆಚ್ಚುಗೆ ಉಂಟು. ಆದರೆ ಕಡಿಮೆ ತಲಾಂತುಗಳಲ್ಲಿ ನಿಷ್ಠೆ ತೋರಿಸಿದ ಇತರರನ್ನು ಅದೇ ಪ್ರಮಾಣದಲ್ಲಿ ವ್ಯವಹರಿಸಲಾಗುವುದು. ತನಗೆ ನೀಡಲ್ಪಟ್ಟ ಮೊಹರಿಯಿಂದ ಹತ್ತು ಮೊಹರಿಗಳನ್ನು ಸಂಪಾದಿಸಿದಾತನು ಹತ್ತು ಗ್ರಾಮಗಳ ಮೇಲೆ ಅಧಿಕಾರಿಯಾಗಿ ನೇಮಿಸಲ್ಪಟ್ಟನು. ತನಗೆ ನೀಡಲ್ಪಟ್ಟ ಮೊಹರಿಯಿಂದ ಮತ್ತೂ ಐದು ಮೊಹರಿಗಳನ್ನು ಸಂಪಾದಿಸಿದವನಿಗೆ ಅದಕ್ಕೆ ನಿರ್ದಿಷ್ಟ ಪ್ರಮಾಣವಾಗಿ ಹೆಚ್ಚಿನ ತಲಾಂತುಗಳನ್ನು, ಆಶೀರ್ವಾದಗಳನ್ನು, ಅವಕಾಶಗಳನ್ನು ಮತ್ತು ಅಧಿಕಾರವನ್ನು ನೀಡಲಾಯಿತು. (ಮತ್ತಾಯ 25: 14–30 ಮತ್ತು ಲೂಕ 19:11–27).

ನಾವು ಇಷ್ಟರಲ್ಲೇ ಆಶ್ಚರ್ಯಪಡಬೇಕಾದ್ದಿಲ್ಲ. ಇನ್ನೂ ಹಿಂದಕ್ಕೆ ನೋಡುವಾಗ ಕರ್ತನು ಹನ್ನೆರಡು ಮಂದಿ ಅಪೋಸ್ತಲರನ್ನು ಆರಿಸಿಕೊಂಡನು ಮತ್ತು ಅವರೆಲ್ಲರನ್ನೂ ಪ್ರೀತಿಸಿದನು. ಆದರೆ ಅವರಲ್ಲಿ ಮೂವರನ್ನು ಮಾತ್ರ ವಿಶೇಷವಾಗಿ ಪ್ರೀತಿಸಿದನು. ಇವರುಗಳು ಅನೇಕ ವಿಶೇಷ ಸಂಧರ್ಭಗಳಲ್ಲಿ ಆತನ ಸಂಗಡ ಇದ್ದರು ಮತ್ತು ಇತರರಿಗಿಂತ ಹೆಚ್ಚಿನ ಕರ್ತನ ವಿಶ್ವಾಸವನ್ನು ಹೊಂದಿದವರಾಗಿದ್ದರು. ಜೀವಬಾಧ್ಯರ ಪುಸ್ತಕವು ತೆರೆಯಲ್ಪಡುವಾಗ ಮತ್ತು ಕರ್ತನ ಸಿಂಹಾಸನಕ್ಕೆ ಹತ್ತಿರವಾದ ಸ್ಥಾನಗಳು ಅಂದರೆ ಬಲಬದಿಯ ಮತ್ತು ಎಡಬದಿಯ ಸ್ಥಾನಗಳು ಘೋಷಿಸಲ್ಪಡುವಾಗ ಬಲಬದಿಯಲ್ಲಿ ಮತ್ತು ಎಡಬದಿಯಲ್ಲಿ ಆತನ ಸಮೀಪವಾಗಿ ಇರುವವರು ಅವರಿಗೆ ನೀಡುವ ಗೌರವಕ್ಕೆ ಅರ್ಹರಾಗಿರುವರೆಂದು ನಾವು ಖಚಿತವಾಗಿ ಹೇಳಬಹುದು (ಮತ್ತಾಯ 10:41). ಅಪೋಸ್ತಲನಾದ ಪೌಲನು ಕರ್ತನ ಪಕ್ಕದಲ್ಲಿಯೇ ಇದ್ದು ಮತ್ತೊಂದು ಪಕ್ಕದಲ್ಲಿ ಬಹುಶಃ ಯೋಹಾನನು ಇದ್ದರೆ ನಾವು ಆಶ್ಚರ್ಯಪಡಬೇಕಾಗಿದ್ದಿಲ್ಲ. ಸಿಂಹಾಸನದ ಆಸೀನ ಸ್ಥಳ ಅಥವಾ ಸ್ಥಾನದ ಬಗ್ಗೆ ಆಲೋಚನೆ ಅಲ್ಲ ಆದರೆ ರಾಜ್ಯದ ಅಧಿಕಾರ ಮತ್ತು ಸಾರ್ವಭೌಮತ್ವಕ್ಕೆ ನಿಕಟವಾಗಿರುವುದು. ಚಿಕ್ಕ ಹಿಂಡಿನವರಾಗಿರುವವರೆಲ್ಲರೂ ಒಬ್ಬರಿಗೊಬ್ಬರು ಕರ್ತನ ಆತ್ಮನ ಗೌರವದಿಂದ ತುಂಬಿದ್ದಾರೆಂದು ನಾವು ಖಚಿತವಾಗಿ ಹೇಳಬಹುದು. ಅವರಲ್ಲಿ ಯಾವುದೇ ಅಸೂಯೆ ಇರುವುದಿಲ್ಲ. ಆದರೆ ಅರ್ಹತೆಯ ಬಗ್ಗೆ ದೇವರ ನಿರ್ಣಯವು ಎಲ್ಲಾ ನೂತನ ಸೃಷ್ಟಿಗಳಿಗೆ ಒಪ್ಪಿಗೆಯಾಗುವುದು. ಪ್ರಸ್ತುತ ಸಮಯದಲ್ಲಿ ಹೀಗೆಯೇ ಇರುತ್ತದೆ ಮತ್ತು ಇದಕ್ಕೂ ಹೆಚ್ಚಿನದನ್ನು ಮುಂದೆ ನಿರೀಕ್ಷಿಸಬಹುದು. ಪ್ರಸ್ತುತ ಸಮಯದಲ್ಲಿ ನಾವು "ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನೂ ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ" ಎಂದು ಓದುತ್ತೇವೆ. ದೇವರ ಚಿತ್ತಾನುಸಾರ ಇರುವವರೆಲ್ಲರೂ ಈ ದೈವಿಕ ವ್ಯವಸ್ಥೆಯನ್ನು ಅಂಗೀಕರಿಸಿ ಅದರೊಡನೆ ಸಹಕರಿಸುವವರಾಗಿದ್ದು ಅದು ಬದಲಾಗದಿರಲೆಂದು ನಿರಂತರವಾಗಿ ಬಯಸುತ್ತಾರೆ. ಅದರಂತೆ ಅದು ಭವಿಷ್ಯದಲ್ಲಿಯೂ ನಿಜವಾಗುವುದು.

ಪ್ರಸ್ತುತ ಸ್ಥಿತಿಗೂ, ಭವಿಷ್ಯದ ಸ್ಥಿತಿಗೂ ಇರುವ ವ್ಯತ್ಯಾಸವನ್ನು ವಿವರಿಸುತ್ತಾ ಅಪೋಸ್ತಲನು "ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದು ಬರುವುದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವುದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುವುದು ಬಲಾವಸ್ಥೆಯಲ್ಲಿ ಎದ್ದುಬರುವುದು" ( 1 ಕೊರಿಂಥ 15:42) ಎಂದಿದ್ದಾನೆ. "ಇದು" ಅಂದರೆ ನೂತನ ಸೃಷ್ಟಿಯು ಪ್ರತಿಷ್ಠೆ ಮತ್ತು ಪವಿತ್ರಾತ್ಮನಿಂದ ಹುಟ್ಟುವ ಸಮಯದಲ್ಲಿ ಅಸ್ತಿತ್ವ ಪಡೆಯಿತು.

ನೂತನ ಸೃಷ್ಟಿಯು ವೃದ್ಧಿಗೊಂಡು ದೇಹವನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳಲು ಬಯಸುವುದಾಗಿದ್ದು ಅದನ್ನು ದೇವರ ಚಿತ್ತಾನುಸಾರ ತನ್ನ ದಾಸನನ್ನಾಗಿ ಮಾಡಿಕೊಳ್ಳುತ್ತದೆ – ನೂತನ ಸೃಷ್ಟಿಯು ಈ ದೇಹವೆಂಬ ಗುಡಾರದಲ್ಲಿ ಜೀವಿಸುವುದಾಗಿದ್ದು ನೂತನ ದೇಹಕ್ಕಾಗಿ ಕಾಯುತ್ತಿದೆ. ಅದು ಲಯಾವಸ್ಥೆಯಲ್ಲಿ ಲಯ ಹೊಂದುವಂತ ದೇಹ ದೋಪಾದಿಯಲ್ಲಿ ಬಿತ್ತಲ್ಪಟ್ಟಿತು. ಅದರ ಈ ಲೋಕದ ಗುಡಾರವು ಕಳಚಲ್ಪಟ್ಟಿತಾದರೂ ಮರಣಹೊಂದಿ ಪಾತಾಳವನ್ನು ಸೇರಿತು; ಆದರೂ ಇದು ಮರಣಹೊಂದಿದುದಾಗಿ, ತೆಪ್ಪಗೆ ಮಲಗಿರುವುದಾಗಿ ಪ್ರತಿನಿಧಿಸಲ್ಪಡುವುದಿಲ್ಲ. "ಇದು' ನೂತನ ಸೃಷ್ಟಿಯಾಗಿದ್ದು ಪ್ರಥಮ ಪುನರುತ್ಥಾನದಲ್ಲಿ ಪರಲೋಕದ ಮನೆಯ ವಸ್ತ್ರ ಅಂದರೆ ಮಹಿಮಾ ಶರೀರವನ್ನು ಧರಿಸಬೇಕಾಗಿದೆ.

"ಇದು" ಮಹಿಮಾ ಶರೀರದಲ್ಲಿ ಎಬ್ಬಿಸಲ್ಪಡುವಾಗ ಅಪೋಸ್ತಲನು ಹೇಳುವಂತೆ ನಿರ್ಲಯಾವಸ್ಥೆಯಲ್ಲಿ ಎಬ್ಬಿಸಲ್ಪಡುತ್ತದೆ. ಲಯವಾಗುವುದಲ್ಲ, ಸತ್ತುಹೋಗುವುದಲ್ಲ. Aphtharsia ಎಂಬ ಪದವನ್ನು ಇಲ್ಲಿ "ನಿರ್ಲಯ' (decay-proof) ಎಂಬುದಾಗಿ ಭಾಷಾಂತರಿಸಲಾಗಿದೆ. ಇದು ಮರಣವಿಲ್ಲದಿರುವಿಕೆಯನ್ನು ಸೂಚಿಸುತ್ತದೆ. ಇದು ಲಯವಿಲ್ಲದ್ದು, ಮರಣಹೊಂದದೇ ಇರುವಂತಾದ್ದು. ಈ ಅಧ್ಯಾಯದ 50, 53 ಮತ್ತು 54ನೇ ವಚನಗಳಲ್ಲಿಯೂ ಇದೇ ಪದವನ್ನು ನಶಿಸಿಹೋಗದಿರುವುದು (Incorruption) ಎಂದು ಭಾಷಾಂತರಿಸಲಾಗಿದೆ. ಇದೇ ಪದವನ್ನು ರೋಮಾ. 2:7ರಲ್ಲಿ ಮತ್ತು 2 ತಿಮೋಥೆ 1:10ರಲ್ಲಿ 'ಅಮರತ್ವ'' (Immortality) ಎಂದು ಭಾಷಾಂತರಿಸಲಾಗಿದೆ.

ನಮ್ಮ ಆತ್ಮೀಕ ಶರೀರಗಳು ನಾಶ ಹೊಂದುವುದಿಲ್ಲ, ಅಮರತ್ವ ಹೊಂದುವುದು ಎಂಬ ಈ ಪ್ರಕಟನೆಯು ಬಹಳಷ್ಟು ಮಹತ್ವವಾದುದು. ಯಾಕೆಂದರೆ ಅಮರತ್ವದ ಈ ಗುಣಲಕ್ಷಣವು ಯೆಹೋವನಿಗೆ ಮಾತ್ರವೇ ಸೇರಿದುದು ಎಂದು ನಮಗೆ ನಿರ್ದಿಷ್ಟವಾಗಿ ತಿಳಿಸಲಾಗಿದೆ; ಅದೇ ಸಮಯದಲ್ಲಿ ನಮ್ಮ ಕರ್ತನಾದ ಯೇಸುವಿನ ಬಗ್ಗೆ, ಆತನ ಪ್ರಾಮಾಣಿಕತೆಯ ದೆಸೆಯಿಂದ ಆತನ ಮಿಗಿಲಾದ ಉತ್ಕೃಷ್ಟತೆಯು ತಂದೆಯಲ್ಲಿ ಜೀವವಿರುವಂತೆಯೇ ಕ್ರಿಸ್ತನಲ್ಲಿಯೂ ಜೀವವಿರುವಂತೆ ಅನುಗ್ರಹಿಸಲಾಯಿತು. ಇದರ ಆಲೋಚನೆಯೂ ಅದೇ ತೆರನಾಗಿರುತ್ತದೆ. ಅದೇನೆಂದರೆ, ಸಭೆಯ ಮಹಿಮೆಯುಳ್ಳ ಶಿರಸ್ಸು "ಅಮರತ್ವ' ಅಥವಾ "ನಿತ್ಯಜೀವ' ಎಂಬ ನಿರ್ಲಯತ್ವದ ಬದಲಾವಣೆಯನ್ನು, ದೈವಿಕ ಸ್ವಭಾವದಲ್ಲಿ ಭಾಗವಹಿಸುವ ಅಂಥಹ ಅನುಭವವನ್ನು ಪಡಕೊಂಡಿತು. ನಮ್ಮ ವಿಮೋಚಕನ ಬಗ್ಗೆ ದೇವರ ಯೋಜನೆಯು ಉದಾರವಾಗಿರುವುದರಲ್ಲಿ ನಾವು ಚಕಿತರಾಗಬೇಕಾಗಿಲ್ಲ. ಆದರೆ ನಮ್ಮ ಕರ್ತನಿಗೆ ಮಾತ್ರವೇ ನೀಡಿರುವ ಇಂತಹ ದೈವ ಸ್ವಭಾವವನ್ನು ಆತನ ದೇಹದ ಅಂಗಗಳಿಗೂ, ಆತನ ಹೆಜ್ಜೆಜಾಡಿನಲ್ಲಿ ನಡೆಯುವವರಿಗೂ ಆತನ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಬಯಸುವವ ರೆಲ್ಲರಿಗೂ ವಾಗ್ದಾನ ಮಾಡಲ್ಪಟ್ಟಿರುವ ಬಗ್ಗೆ ನಿಜವಾಗಿಯೂ ನಾವು ಆಶ್ಚರ್ಯಪಡಬೇಕಾಗಿದೆ (2ಪೇತ್ರ 1:4, ರೋಮಾ. 2:7)

"ಇದು ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವುದು"– ಇಲ್ಲಿಯೂ ಪುನಃ ನೂತನ ಸೃಷ್ಟಿಯನ್ನು 'ಇದು' ಎಂದು ಸೂಚಿಸಲಾಗಿದೆ. ಪ್ರಸ್ತುತ ಸಮಯದಲ್ಲಿ ಈ ಲೋಕವು ನಮ್ಮನ್ನು ತಿಳಿದಿರುವುದಿಲ್ಲ. ನಾವು ತಂದೆಯಿಂದ ಆತ್ಮೀಕ ನೆಲೆಯಲ್ಲಿ ಆತನ ಮಕ್ಕಳಾಗುವುದಕ್ಕಾಗಿ ಹುಟ್ಟಿರುವುದರಿಂದ, ನಾವೀಗ ಸ್ವಲ್ಪಕಾಲ ನ್ಯಾಯವಿಚಾರಣೆಯ ಉದ್ದೇಶಕ್ಕಾಗಿ, ತ್ಯಾಗದ ಒಡಂಬಡಿಕೆಯಲ್ಲಿ ನಾವಿಟ್ಟಿರುವ ವಿಶ್ವಾಸದ ಪರೀಕ್ಷೆಗಾಗಿ ತಾತ್ಕಾಲಿಕವಾಗಿ ಮಾಂಸದೇಹಧಾರಿ ಗಳಾಗಿ ವಾಸಮಾಡುವವರೆಂದು ಅದು ಗ್ರಹಿಸುವುದಿಲ್ಲ. "ದೇವರ ಮಕ್ಕಳಾಗಿದ್ದರೂ ನಾವೀಗ ಗುರುತಿಸಲ್ಪಟ್ಟವರಲ್ಲ, ನಾವೀಗ ಲೋಕದವರ ಗಣನೆಗೆ ಬಾರದವರು; ಮತ್ತು ನಾವು ನಮ್ಮನ್ನು ಕರ್ತನಿಗೆ ಪ್ರತಿಷ್ಠೆಪಡಿಸಿಕೊಂಡಿರುವ ಕಾರಣ, ಅವರು ಬೆನ್ನಟ್ಟಿರುವ ಈ ಲೋಕದ ಸ್ಥಾನಮಾನವನ್ನು ಅಲಂಕರಿಸುವ ಸ್ವಾಭಾವಿಕ ಮೇಧಾಶಕ್ತಿಯು ನಮ್ಮಲ್ಲಿ ಇದ್ದಿರಬಹುದಾದರೂ ನಾವು ಮನುಷ್ಯರಲ್ಲಿನ ಯಾವುದೇ ಗೌರವ ಸ್ಥಾನವನ್ನು ಸಹಾ ಅಲಂಕರಿಸದೇ ಇರಬಹುದು. ವ್ಯಕ್ತಿಗತವಾದ ಮತ್ತು ಸಾಮೂಹಿಕವಾದ ಯಾವುದೇ ಸಂಗತಿಗಳಲ್ಲಿ ಅಪೋಸ್ತಲನು ಪ್ರಕಟಿಸುವಂತೆ ಶರೀರಧಾರಿಯಾದ ಸಭೆಯು "ಹೀನಾವಸ್ಥೆ'ಯಲ್ಲಿದ್ದರೂ, ಸಧಭಿಪ್ರಾಯ ಹೊಂದಿಲ್ಲ ವಾಗಿದ್ದರೂ, ಮತ್ತೊಂದೆಡೆ ಆತನು ಹೇಳುವಂತೆ "ನಮ್ಮ ದೇಹವು ಪ್ರಸ್ತುತದಲ್ಲಿ ದೀನಾವಸ್ಥೆಯಲ್ಲಿದ್ದರೂ" [ನಮ್ಮ ಹುದುವಾದ ಭಾಷಾಂತರದಲ್ಲಿ "ನಿಕೃಷ್ಟ ಶರೀರ" a vile body ಎಂದು ತಪ್ಪಾಗಿ ಅನುವಾದಿಸಲಾಗಿದೆ* –ಫಿಲಿಪ್ಪಿ 3:21]. ಆದರೆ, ಸದ್ಯದಲ್ಲೇ ಉಂಟಾಗುವ ಸ್ಥಿತಿ ಏನು? ಈ ಹೀನಾವಸ್ಥೆಯು ಕಳೆದುಹೋದೀತೆ? ಸಭೆಯು (ಶಿರಸ್ಸು ಮತ್ತು ದೇಹವು) ದೇವದೂತರುಗಳ ಮತ್ತು ಮಾನವರ ಹೊಗಳಿಕೆ ಪಡೆದೀತೇ? ಅವರು ಅದನ್ನು ಗೌರವಿಸಿಯಾರೇ? ನೂತನ ಸೃಷ್ಟಿಯು ಈ ರೀತಿಯಲ್ಲಿ "ಮಹಿಮೆ" ಹೊಂದಬಹುದೋ? ಆಹಾ! ಹೌದು, ಇದುವೇ ಭರವಸವು!

"ಇದು' ಬಲಹೀನತೆಯಲ್ಲಿ ಬಿತ್ತಲ್ಪಟ್ಟಿದೆ "ಇದು' ಆತ್ಮೀಕ ಶರೀರದಲ್ಲಿ ಎಬ್ಬಿಸಲ್ಪಡುವುದು. ನೂತನ ಸೃಷ್ಟಿಯನ್ನು ಲಯವಾಗುವ ಮರ್ತ್ಯ ದೇಹವನ್ನು ಇನ್ನೂ ಸಹಾ ಬಲಹೀನವೆಂದು ಹೇಳಲಾಗುತ್ತಿದೆ. ಈಗಿರುವ ಲಯವಾಗುವ ಶರೀರದ ಅಸಂಪೂರ್ಣತೆಗಾಗಿ ಎಲ್ಲಾ ನೂತನ ಸೃಷ್ಟಿಗಳು ಶೋಕಿಸುವುದನ್ನು ದೇವರು ನೂತನ ಸೃಷ್ಟಿಯು ಬಲಹೀನತೆಯೆಂದು ಎಣಿಸುವದಿಲ್ಲ. ಕರ್ತನೆಡೆಗೆ ಅವರಿಗಿರುವ ಉದ್ದೇಶಗಳು ಅಥವಾ ಆಲೋಚನೆಗಳು ಶುದ್ಧವೂ, ಸಂಪೂರ್ಣವೂ ನಿಷ್ಠೆಯುಳ್ಳವೂ ಮತ್ತು ಬಲವುಳ್ಳವುಗಳೂ ಆಗಿರುತ್ತವೆ. ಈ ಬಲಹೀನತೆಗಳು ಪುನರುತ್ಥಾನದಲ್ಲಿ (Elect) "ಆಯ್ಕೆ"ಗೊಂಡವರಿಗೆ ಅಂಟಿಕೊಳ್ಳುವುದಿಲ್ಲ. ಅತ್ಯಂತ ವಿಶೇಷವಾಗಿ ಹೇಳಿರುವುದೇನೆಂದರೆ, ಬಲಾವಸ್ಥೆಯಲ್ಲಿ ಎದ್ದು ಬರುವುದು ಎಂದು. ಹಾಗೆಂದರೆ ಸಂಪೂರ್ಣತೆಯ ಬಲ, ಹೊಸ ಸೃಷ್ಟಿಯ ಬಲ, ದೇವರ ಬಲ.

"ಇದು' ಪ್ರಾಕೃತಿಕ ಶರೀರವಾಗಿ ಬಿತ್ತಲ್ಪಟ್ಟಿದೆ.. ಅದೇ ನೂತನ ಸೃಷ್ಟಿಯಾದ "ಇದು' ಆತ್ಮೀಕ ಶರೀರವಾಗಿ ಎಬ್ಬಿಸಲ್ಪಡುತ್ತದೆ. ಈಗ ಇದೊಂದು ಪ್ರಾಕೃತಿಕ ಶರೀರವಾಗಿದೆ. ಸ್ಪರ್ಷಿಸಲಾಗುವ ಭಾಗವು

---

*ಸತ್ಯವೇದದಲ್ಲಿ–(ಕನ್ನಡದಲ್ಲಿ) ಸರಿಯಾಗಿ ತರ್ಜಿಮೆಯಾಗಿದೆ "ದೀನಾವಸ್ಥೆಯುಳ್ಳ ನಮ್ಮ ದೇಹವು" (ನೀಚಶರೀರವಲ್ಲ)

ಮಾಂಸಮಾತ್ರ. ದೇವರ ಕೃಪೆಯಿಂದ ಮಾತ್ರವೇ ನಾವು ನೂತನ ಮನಸ್ಸನ್ನು, ನೂತನ ಸೃಷ್ಟಿಯನ್ನು ಎಣಿಸಲು ಅನುಮತಿ ಹೊಂದಿದ್ದೇವೆ ಮತ್ತು ಈ ನೂತನ ಮನಸ್ಸು ಅದಕ್ಕೆ ಸೂಕ್ತವಾದ ಆತ್ಮೀಕ ಶರೀರವನ್ನು ಹೊಂದಿಕೊಳ್ಳುವ ಸಮಯಕ್ಕಾಗಿ ನಾವು ಕಾಯುತ್ತಿದ್ದೇವೆ. ಈಗ ಅದು ಪ್ರಾಕೃತಿಕ ಶರೀರವಾಗಿರುವಂತೆ ಆಗ ಅದು ಆತ್ಮೀಕ ಶರೀರವಾಗುವುದು. ಇದೆಂತಹ ಭವ್ಯವಾದ ಪ್ರತೀಕ್ಷೆ! ಸ್ವಾಭಾವಿಕ ಸರ್ವೇ ಸಾಮಾನ್ಯವಾದವುಗಳನ್ನು ಹೊರತುಪಡಿಸಿ ಇವುಗಳ ಅನುಭವವಿಲ್ಲದವರಿಗೆ ನಿಜವಾಗಿಯೂ ಇದನ್ನು ಗ್ರಹಿಸಲು ಸಾಧ್ಯವಾಗದು. – ಮನಸ್ಸುಗಳು ನಂಬಿಕೆಯಿಂದ ದೇವರ ವಾಗ್ದಾನ ಮತ್ತು ಪ್ರಕಟನೆಗಳನ್ನು ಮಾತ್ರ ಗ್ರಹಿಸಬಹುದು ಮತ್ತು ನಾವು ಇದುವರೆಗೂ ಕಾಣದ ಸಂಗತಿಗಳಿಗೆ ಪ್ರವೇಶಿಸಬಹುದಾಗಿದೆ.

ಆದರೆ ಬರಲಿರುವ ಮಹಿಮೆಯ ಆಲೋಚನೆಯು ಈ ಲೋಕದ ಮತ್ತು ಅದರ ಲಕ್ಷ್ಯಗಳಿಂದ, ಪರೀಕ್ಷೆಗಳಿಂದ, ಅವಿವೇಕತೆಗಳಿಂದ ಮತ್ತು ಅದರ ವಿನೋದಗಳಿಂದ ನಮ್ಮನ್ನು ಎತ್ತುವುದಾದರೆ ನಾವು ಕರ್ತನಂತೆ ಪರಿಪೂರ್ಣರಾಗಿ ಆತನ ಮಹಿಮೆಯಲ್ಲಿ ಪಾಲುದಾರರಾದಾಗ ಈ ಸತ್ಯತೆಯು ಇನ್ನೆಷ್ಟರಮಟ್ಟಿಗೆ ನಮಗೆ ಅರ್ಥಪೂರ್ಣವಾದೀತು? ನಿಕೊದೇಮನಿಗೆ ನಮ್ಮ ಕರ್ತನು " ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೆ ಹೋದರೆ ಪರಲೋಕದ ಸಂಗತಿಗಳನ್ನು ಕುರಿತು ಹೇಳಿದರೆ ಹೇಗೆ ನಂಬೀರಿ?" ಎಂದು ಕೇಳಿದ್ದು ಆಶ್ಚರ್ಯವಲ್ಲ. ನಾವು ಪರಲೋಕದ ಸಂಗತಿಗಳನ್ನು ಗ್ರಹಿಸಲು ಪ್ರಾರಂಭಿಸುವ ಮುನ್ನ ಮೊದಲಿಗೆ ಪವಿತ್ರಾತ್ಮನಿಂದ ಜನಿಸಿದವರಾಗಬೇಕು ಎಂಬುದಾಗಿ ಇದು ಹೇಳುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಸುವಾರ್ತೆಯಲ್ಲಿ ನಮ್ಮ ಓಟಕ್ಕಾಗಿ ನೇಮಿಸಿರುವ ಗುರಿಮುಟ್ಟಲು ನಾವು ಸಾಮರ್ಥ್ಯ ಹೊಂದಿ ಕೊಳ್ಳಬೇಕಾದರೆ, ಈ ಲೋಕದ ಆತ್ಮವನ್ನು ಮತ್ತು ವಿರೋಧಿಯ ಆಕ್ರಮಣಗಳನ್ನು ಗೆಲ್ಲಬೇಕಾದ ನಮ್ಮ ಸೆಣಸಾಟವು ನಾವು ದೈವಿಕ ಸಮಾಲೋಚನೆಗಳಿಗೆ ವಿಧೇಯರಾಗುವ, ಲೋಕವನ್ನು ಪ್ರೀತಿಸದೇ ಇರುವ ಮತ್ತು ಹತ್ತಿಕೊಳ್ಳುವ ಪಾಪಗಳ ಎಲ್ಲಾ ಭಾರವನ್ನು ಬದಿಗಿರಿಸುವ ಅಳತೆಗನುಸಾರವಾಗಿರುತ್ತದೆಂಬುದು ಪ್ರಶ್ನಾತೀತವಾಗಿದೆ. ನಮ್ಮನ್ನು ನಾವು ಸಭೆಯಾಗಿ ಕೂಡಿಸಿಕೊಳ್ಳುವುದನ್ನು ಮರೆಯದೆ ಮತ್ತು ವಾಕ್ಯದ ಪ್ರತಿಯೊಂದು ಅರ್ಥದಲ್ಲಿ ದೇವರ ಮಕ್ಕಳಾದ ನಮ್ಮ ಮೇಲೆ ಆತನು ಸುರಿಸಿರುವ ಕರುಣೆ ಮತ್ತು ಆಶೀರ್ವಾದಗಳಿಗಾಗಿ ಪ್ರತಿನಿತ್ಯವೂ ತಪ್ಪದೇ ದೇವರವಾಕ್ಯಗಳನ್ನು ಹುಡುಕುತ್ತಿರಬೇಕು. ನಾವು ಇವುಗಳನ್ನು ತಪ್ಪದೆ ಮಾಡುವವರಾದರೆ ಎಂದಿಗೂ ಸೋತುಹೋಗುವುದಿಲ್ಲ, ಆದರೆ ನಮಗೆ ನಮ್ಮ ಕರ್ತನೂ ವಿಮೋಚಕನೂ ಆದ ದೇವರ ರಾಜ್ಯದಲ್ಲಿ ಪ್ರವೇಶ ಪ್ರಾಪ್ತಿಯಾಗುತ್ತದೆ.(1ಯೋಹಾನ 3:2,3. ರೋಮಾ. 8:17, ಯೋಹಾನ 3:12, 1ಕೊರಿ. 2:14, 1 ಯೋಹಾನ 2:15, ಎಫೆಸ 6:10–18, ಇಬ್ರಿಯ 12:1,2; 10:25, ಯೋಹಾನ 5:29; ಅ.ಕೃ. 17:11 ಮತ್ತು 2 ಪೇತ್ರ 1:4–11). ■

### ಮಾತೃಭೂಮಿಯ ಹಂಬಲ

ಜಿಗರೆಯು ನೀರಿನ ಸೆಲೆ ಕಂಡು ಏದುಸಿರು ಬಿಡುವಂತೆ
ನನ್ನಾತ್ಮವು ನಿನಗಾಗಿ ಏದುಸಿರು ಬಿಡುತಿದೆ
ಓ, ಎಂದಿಗೆ ನಾನು ನಿನ್ನ ಮೊಗವ ನೋಡುವೆ
ಯಾವಾಗ ನೀನು ನನ್ನ ಕರೆಯುವೆ?

ನನ್ನ ಪರಲೋಕ ನಿವಾಸ ಸೇರಲು
ನನ್ನ ಕಣ್ಣುಗಳು ಎಷ್ಟೋ ಬಾರಿ ಅರಸುತಿವೆ.
'ಬಾ' ಎಂದು ನನ್ನ ಕರ್ತನು ನನ್ನನ್ನು ಕರೆಯುವ
ಆ ಶುಭ ಘಳಿಗೆಗೆ ಹಾತೊರೆಯುವೆ.

ಆದರೂ ನನಗೆ ಗೊತ್ತು, ಯಾರ ಹೃದಯದಲ್ಲಿ
ಪಾಪದ ಕುರುಹು ಇಲ್ಲವೋ, ನಿರ್ಮಲರೋ,
ಸರಳ ಜೀವಿಗಳೋ ಅವರೇ ನಿನ್ನ ದಿವ್ಯವಾದ
ಮುಖವನ್ನು ನೋಡುವರು ಎಂದು

ಮತ್ತೂ ಓ ನನ್ನ ಒಡೆಯನೇ, ನನ್ನ ಕರ್ತನೇ
ಬೆಳಕಿನೆಲ್ಲಿರುವ ಎಲ್ಲಾ ನನ್ನ ಆಶೀರ್ವದಿಸಲ್ಪಟ್ಟ
ಭಕ್ತರ ಸಂಗಡ ಒಟ್ಟು ಸೇರಲು, ನಿನ್ನನ್ನು
ನಾನು ಸಂಧಿಸುವುದು ಬಹು ದೂರ ಎಂದು
ನನಗೆ ಗೊತ್ತು

ನಿನ್ನ ಸಿಂಹಾಸನದಲ್ಲಿ ಪಾಲು ತೆಗೆದುಕೊಳ್ಳುವವರು
ನಿನ್ನ ಹೋಲಿಕೆಗೆ ತಕ್ಕ ಹಾಗಿರಬೇಕೆಂದು
ಅವರಲ್ಲಿರುವ ಪವಿತ್ರಾತ್ಮದ ಫಲಗಳನ್ನು
ತಂದೆಯು ನೋಡುತ್ತಾನೆಂದೂ ನನಗೆ ಗೊತ್ತು

ಕರ್ತನೇ, ನನ್ನ ಬಡ ಹೃದಯದೊಡನೆ ಸೆಣಸಾಡಲು
ಬಹು ತಾಳ್ಮೆ ವಹಿಸಿ ನಿನ್ನ ಅನುಗ್ರಹವನ್ನು
ನನಗೆ ದಯಪಾಲಿಸು ನನ್ನೊಡನಿರುವ ನಿನ್ನ
ಸಮಯವನ್ನು ನಿಧಾನಿಸು
ನೀನಿರುವಂತೆ ನಾ ನೋಡುವೆ

* * * * * *

### Longing for Home

As pants the hart for water brooks,
So pants my soul for Thee.
Oh, when shall I behold Thy face,
When wilt Thou call for me?

How oft at night I turn mine eyes
Towards my heavenly home,
And long for that blest time when Thou,
My Lord, shalt bid me, "Come!"


And yet I know that only those
Thy blessed face shall see,
Whose hearts from every stain of sin
Are purified and free.

And oh, my Master and my Lord,
I know I'm far from meet
With all Thy blessed saints in light
To hold communion sweet.

I know that those who share Thy throne
Must in Thy likeness be,
And all the Spirit's precious fruits
In them the Father see.

Lord, grant me grace more patiently
To strive with my poor heart,
And bide Thy time to be with Thee
And see Thee as Thou art!

# Studies in the Scripture



The Most Comprehensive Bible Study Available!

**THE DIVINE PLAN OF THE AGES -** Gives an outline of the Divine Plan revealed in the Bible, relating to man's redemption and restitution. Contains 358 pages. Cloth bound pocket edition.

**THE TIME IS AT HAND -** Deals with Bible chronology and time prophecies, identifies the Antichrist, and. points out the time and manner of our Lord's return. Contains 371 pages. Cloth bound pocket edition.

**THY KINGDOM COME -** Discusses time prophecies relating to the work of the church at this end of the age, the restoration of Israel, and the setting up of Christ's kingdom. One chapter pertains to the Great Pyramid of Egypt. Contains 384 pages. Cloth bound edition.

**THE BATTLE OF ARMAGEDDON -** Shows the dissolution of the present order. It discusses many prophecies relating to the end of the age, noting especially our Lord's great prophecy of Matt. 24. Contains 660 pages. Cloth bound pocket edition.

**THE ATONEMENT BETWEEN GOD AND MAN -** Contains 498 pages devoted to the fact and philosophy of Christ's atoning work; the nature of man, the divine punishment for sin, the truth about hell, and the operation of the Holy Spirit. Cloth bound pocket edition.

**THE NEW CREATION -** The first chapter deals with the Genesis account of creation. The remainder of the book discusses the laws, duties, privileges, and hopes of the consecrated followers of Jesus. Contains 738 pages. Cloth bound pocket edition.

Write publishers for further information.

**For Translated Kannada Publications :**

Bible Students

*FOR PRIVATE CIRCULATION ONLY*